SAPTHAGIRI
(KANNADA)
SPIRITUAL ILLUSTRATED
MONTHLY
Volume:02, Issue:12
Pages:56
July - 2023,
Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜುಲೈ 2023
ಬೆಲೆ ರೂ. 20/-




ತಿರುಮಲೆಯಲ್ಲಿ
ಸ್ವಾಮಿಯವರ
ಆಣಿವರ ಆಸ್ಥಾನ
(17-07-2023)

**ಜಮ್ಮುವಿನ ಮಜೀನ್ ಗ್ರಾಮದ ತಾವಿ ನದಿ ದಡದಲ್ಲಿ ತಿ.ತಿ.ದೇ., ನೂತನವಾಗಿ ನಿರ್ಮಿಸಿದ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದ ಮಹಾಸಂಪ್ರೋಕ್ಷಣೆಯ ದೃಶ್ಯಗಳು. 2023 ಜೂನ್ 04 ರಿಂದ 08 ರ ವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ರಾಜ್ಯಪಾಲರು ಶ್ರೀ ಮನೋಜ್ ಸಿನ್ಹಾ, ಕೇಂದ್ರ ಮಂತ್ರಿಗಳಾದ ಡಾ॥ ಜಿತೇಂದ್ರಸಿಂಗ್, ಶ್ರೀ ಕಿಷನ್ ರೆಡ್ಡಿ, ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ಸಂಸತ್ತಿನ ಸದಸ್ಯರಾದ ಶ್ರೀ ವಿ. ಪ್ರಭಾಕರ್ ರೆಡ್ಡಿ, ಶ್ರೀ ಜುಗಲ್ ಕಿಶೋರ್ ಶರ್ಮ, ಜಮ್ಮುಕಾಶ್ಮೀರ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಅರುಣ್‌ಕುಮಾರ್ ಮೆಹ್ತಾ, ದೆಹಲಿ ಸ್ಥಾನಿಕ ಸಲಹಾಮಂಡಳಿಯ ಅಧ್ಯಕ್ಷರು ಶ್ರೀಮತಿ ವಿ. ಪ್ರಶಾಂತಿರೆಡ್ಡಿ, ತಿ.ತಿ.ದೇ, ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಮತ್ತಿತರರು ಪಾಲ್ಗೊಂಡರು.**










# ಭಗವದ್ಗೀತೆ

ಗುರೂನಹತ್ವಾಹಿ ಮಹಾನುಭಾವಾನ್

ಶ್ರೇಯೋ ಭೋಕ್ತುಂ ಭೈಕ್ಷ್ಯಮಪೀಹ ಲೋಕೇ


ಹತ್ವಾऽರ್ಥ ಕಾಮಾಂಸ್ತು ಗುರೂನಿಹೈವ

ಭುಂಜೀಯ ಭೋಗಾನ್ ರುಧಿರಪ್ರದಿಗ್ಧಾನ್ ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -5)

ಮಹಾತ್ಮರಾದ ಗುರುಗಳನ್ನು ಕೊಲ್ಲುವ ಬದಲು ಈ ಲೋಕದಲ್ಲಿ ತಿರಿದು ತಿನ್ನುವುದಾದರೂ ಮೇಲು ದುಡ್ಡಿನಾಸೆಯಿಂದ ಯುದ್ಧಕ್ಕೆ ನಿಂತಿರುವ ಗುರುಗಳನ್ನು ಕೊಂದು ಅವರ ನೆತ್ತರಿನಿಂದ ತೊಯ್ದ ರಾಜ ಭೋಗವನ್ನು ನಾನಿಲ್ಲಿ ಉಣ್ಣಬೇಕು!






ಕಂಡೆ ನಾ ಕನಸಿನಲೀ ಗೋವಿಂದನ

ಕಂಡೆ ನಾ ಕನಸಿನಲೀ ಕನಕ ರತ್ನದ ಖನಿಯ
ನಂದನ ಕಂದ ಮುಕುಂದನ ಚರಣವ

ಅಂದಿಗೆ ಕಿರುಗೆಜ್ಜೆ ಘಲಿರೆಂಬ ನಾದದಿ
ಬಂದು ಕಾಳಿಂಗನ ಹೆಡೆಯನೇರಿ

ಧಿಂಧಿಮಿ ಧಿಮಿಕೆಂದು ತಾಳಗತಿಗಳಿಂದ
ಆನಂದದಿ ಕುಣಿವ ಮುಕುಂದನ ಚರಣವ

ಉಟ್ಟ ಪೀತಾಂಬರ ಉಡಿಯ ಕಾಂಚಿಯಧಾಮ
ತೊಟ್ಟ ಮುತ್ತಿನಹಾರ ಕೌಸ್ತುಭವೂ


ಕಟ್ಟಿದ ವೈಜಯಂತೀ ತುಲಸೀ ವನಮಾಲೆ
ಇಟ್ಟ ಕಸ್ತೂರೀ ತಿಲಕ ಲಲಾಟನ ಇಂದು

ಮಂಗಳವರ ತುಂಗಭದ್ರದಿ ಮೆರೆವನ
ಅಂಗಜ ಪಿತ ಶ್ರೀಲಕ್ಷ್ಮೀ ಪತಿಯ

ಶೃಂಗಾರ ಮೂರುತಿ ಶ್ರೀ ಪುರಂದರ ವಿಠಲನ
ಕಣ್ಗಳಿಂದಲಿ ಕಂಡೇ ಹಿಂಗಿತೆನ್ನ ಭವ ಭಯ

- ಶ್ರೀಪುರಂದರ ದಾಸರು

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಪ್ರಸೂಯ ವಿವಿಧಂ ಜಗತ್ತ ದಭಿವೃದ್ಧಯೇ ತ್ವಂ ದಯೇ ಸಮೀಕ್ಷಣ ವಿಚಿಂತನಪ್ರಭೃತಿಭಿಃ ಸ್ವಯಂ ತಾದೃಶೈಃ।**

**ವಿಚಿತ್ರಗುಣಚಿತ್ರಿತಾಂ ವಿವಿಧದೋಷವೈದೇಶಿಕೀಂ ವೃಷಾಚಲಪತೇಸ್ತನುಂ ವಿಶಸಿ ಮತ್ಸ್ಯ ಕೂರ್ಮಾದಿಕಾಮ್ ॥82॥**

ಹಿಂದಿನ ಪದ್ಯದಲ್ಲಿ ಆರ್ಚಾವತಾರ ವರ್ಣನೆಯಿಂದ ದಯಾದೇವಿಯು ಮಾಡುವ ಲೋಕೋಪಕಾರವನ್ನು ವರ್ಣಿಸಿದರು. ಈ ಪದ್ಯದಿಂದ ಆರಂಭಿಸಿ ಈ ದಶಕವು ಮುಗಿಯುವವರೆಗೂ ಪುರಾಣಗಳಲ್ಲಿ ಪ್ರಸಿದ್ಧವಾದ ಮತ್ಸ್ಯಕೂರ್ಮಾದಿ ದಶಾವತಾರ ವರ್ಣನೆಯಿಂದ ದಯಾದೇವಿಯು ಮಾಡುವ ಉಪಕಾರವನ್ನು ತಿಳಿಯಪಡಿಸಲಿಚ್ಛಿಸಿ ಈ ಶ್ಲೋಕದಲ್ಲಿ ಮೊದಲನೆಯ ಎರಡು ಅವತಾರಗಳಾದ ಮತ್ಸ್ಯಕೂರ್ಮಗಳ ಕಾರ್ಯವನ್ನು ವರ್ಣಿಸುತ್ತಾರೆ.

ಈ ಲೋಕದಲ್ಲಿರುವ ಮೀನುಗಳು, ಆಮೆಗಳು ಮತ್ತು ಹಂಸಗಳು ತಮ್ಮ ಮರಿಗಳನ್ನು ಕಾಪಾಡುವುದು ಇತರ ಪ್ರಾಣಿಗಳಂತೆ ಅಲ್ಲ. ಅದೊಂದು ವಿಲಕ್ಷಣವಾದ ರೀತಿಯದು. ಮೀನುಗಳು ತಮ್ಮ ಕಣ್ಣುಗಳಿಂದ ಮರಿಗಳನ್ನು ಚೆನ್ನಾಗಿ ನೋಡುವುದರಿಂದಲೂ ಆಮೆಗಳು ಮನಸ್ಸಿನಲ್ಲಿ ಸ್ಮರಿಸಿಕೊಳ್ಳುವುದರಿಂದಲೂ, ಹಂಸಗಳು ಅಪ್ಪಿಕೊಳ್ಳುವುದರಿಂದಲೂ ಅವುಗಳಿಗೆ ಪೂರ್ಣವಾದ ಪೋಷಣೆಯು ಉಂಟಾಗುವುದು."ಈ ಕ್ಷಣ ಧ್ಯಾನ ಸಂಸ್ಪರ್ಶೈಃಮತ್ಸ್ಯಕೂರ್ಮವಿಹಂಗಮಾಃರಕ್ಷಂತಿ ಸ್ವಾನ್ಯಪತ್ಯಾನಿ " ಎಂದು ಹಿರಿಯರು ಹೇಳಿರುವರು. ಈ ಪದ್ಯದಲ್ಲಿ 'ವಿಚಿಂತನಪ್ರಭೃತಿಭಿಃ ಎಂಬಲ್ಲಿರುವ ಪ್ರಭೃತಿ ಶಬ್ದದಿಂದಲೂ, ಮತ್ಸ್ಯ ಕೂರ್ಮಾದಿಕಂ ಎಂಬಲ್ಲಿರುವ ಆದಿ ಶಬ್ದದಿಂದಲೂ ಭಗವಂತನು ಎತ್ತಿದ ಹಂಸಾವತಾರವೂ ವಿವಕ್ಷಿತವಾದುದೇ ದಶಾವತಾರಗಳಲ್ಲಿ ಅದು ಸೇರಿಲ್ಲವಾದುದರಿಂದ ಅದನ್ನು ಸ್ಪಷ್ಟವಾಗಿ ಹೇಳದೇ ಆದಿ ಶಬ್ದದಿಂದ ಸಂಗ್ರಹಿಸಿರುವರು.

ದಯಾದೇವಿಯು ಪರಮಾನುಗ್ರಹದಿಂದ ಲೋಕದಲ್ಲಿರುವ ನಾನಾವಿಧವಾದ ಪ್ರಾಣಿಗಳನ್ನು ಸೃಷ್ಟಿಸಿ,ಅವುಗಳ ಪೋಷಣೆಗಾಗಿ ಭಗವಂತನು ಸ್ವೀಕರಿಸಿದ ಮತ್ಸ್ಯ ಕೂರ್ಮಾದಿ ದಿವ್ಯ ಮೂರ್ತಿಗಳಲ್ಲಿ ಪ್ರವೇಶಿಸಿ, ಲೋಕದಲ್ಲಿರುವ ಮೀನು, ಆಮೆಯೇ ಮೊದಲಾದುವು ತಮ್ಮ ಮರಿಗಳನ್ನು ನೋಡುವುದರಿಂದಲೂ ಧ್ಯಾನಿಸುವುದರಿಂದಲೂ ಹೇಗೆ ಕಾಪಾಡವುವೋ ಹಾಗೆಯೇ ಅವತಾರ ರೂಪವಾದ ಮತ್ಸ್ಯಕೂರ್ಮಾದಿಗಳನ್ನು ಕೂಡ ನೋಡುವುದು ಧ್ಯಾನಿಸುವುದೇ ಮೊದಲಾದ ಕಾರ್ಯಗಳನ್ನು ಮಾಡುವಂತೆ ಮಾಡಿ ಲೋಕದಲ್ಲಿರುವ ಪ್ರಾಣಿಗಳನ್ನು ಕಾಪಾಡುವಳೆಂದು ತಾತ್ಪರ್ಯ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಆಷಾಢ - ಅಧಿಕಮಾಸ ಸಂಚಿಕೆ

ಸಂಪುಟ : 02 ಜುಲೈ - 2023 ಸಂಚಿಕೆ : 12



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಅಧಿಕಮಾಸದ ಮಹಿಮೆ | -ಡಾ॥ ಸುಮನ ಬದರೀನಾಥ್ | 07 |
| ವೇದಗಳಲ್ಲಿ ಭಕ್ತಿಯ ಸ್ವರೂಪ | -ಕಲ್ಯಾಣಿ ಮೂರ್ತಿ ರಾಮನಾಥಪುರ | 10 |
| ಆಷಾಢ ಶುದ್ಧ ಪೂರ್ಣಿಮೆ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 12 |
| "ಅನುದಿನ ಭವಾಬ್ಧಿಯಲ್ಲಿ ಭವತರುಂಗ ರಾಶಿಯಲ್ಲಿ" | - ಡಾ॥ ಸುಭಾಸ ಕಾಖಂಡಕಿ | 15 |
| ಆಯುರ್ವೇದದ ಆರೋಗ್ಯ ಸೂತ್ರ | - ಡಾ॥ ಎಸ್.ಬಿ.ಎ. ಸಂಧ್ಯಾ | 17 |
| ಮಹರ್ಷಿ ಋಷ್ಯ ಶೃಂಗರು | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 19 |
| ಅಷ್ಟಾವಕ್ರರ ಕತೆ | - ಪ್ರೊ. ಪದ್ಮನಾಭರಾವ್ | 20 |
| ಮುದುಗೆರೆಯಶ್ರೀಲಕ್ಷ್ಮೀಚನ್ನಕೇಶವದೇವಾಲಯ | -ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಬಿ.ಎನ್. ಶ್ರೀನಿವಾಸನ್ | 24 |
| ದಕ್ಷಿಣಾಯನ ಪರ್ವಕಾಲ ಒಂದು ಚಿಂತನೆ | -ಡಾ॥ ವಾದಿರಾಜ ವಿ. ಅಗ್ನಿಹೋತ್ರಿ | 31 |
| ಜ್ಯೋತಿರ್ಭೀಮೇಶ್ವರ ಅಮಾವಾಸ್ಯೆ | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 33 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 34 |
| ಮುದ್ರಾಯೋಗಾ | -ಡಾ॥ ಲೀಲಾ ಬಸವರಾಜು | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 38 |
| ತಿರುವಿಣ್ಣಗರ್ (ಉಪ್ಪಿಲಿಯಪ್ಪನ್ ಕೋಯಿಲ್) | -ಸೂರ್ಯವಂಶಿ | 40 |
| ಮಳೆಗಾಲದಲ್ಲಿ ಆರೋಗ್ಯ ಸಂರಕ್ಷಣೆ | - ಡಿ.ಎಸ್. ಬದ್ರಿನಾಥ್ | 42 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 44 |
| ಸಂಸ್ಕೃತ ಕಲಿಯೋಣ | - ವಿ. ಪ್ರದೀಪ್ ಕುಮಾರ್ | 45 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | -ಶ್ರೀಮತಿ. ಎನ್. ಪಾರ್ವತಿ | 46 |
| ನೀತಿ ಕಥೆ - ಪ್ರಾರ್ಥನೆ ನಮಗೆ ಪ್ರೇರಣೆ ಕೊಡಲಿ | - ಎ.ಆರ್. ರಘುರಾಮ | 48 |
| ರಸಪ್ರಶ್ನೆಗಳು | | 50 |
| ಚಿತ್ರ ಕಥೆ - ಗುರುದಕ್ಷಿಣೆ | -ಡಾ॥ ಕೆ. ರವಿಚಂದ್ರನ್ | 52 |

ಮುಖಚಿತ್ರ -ಆಣಿವಾರ ಆಸ್ಥಾನ, ತಿರುಮಲೆ

ಹಿಂಬದಿಚಿತ್ರ - ಗೋದಾದೇವಿ, ಚಿತ್ರಕಾರಿಣಿ -ಎನ್.ಸಿ. ವಿಷ್ಣುಪ್ರಭ (ಯು.ಎಸ್.ಎ)

**24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ**
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ಸುಂದರ ತಿರುಮಲೆ ನಮ್ಮೆಲ್ಲರ ಕರ್ತವ್ಯ

ಸಂಪಾದಕೀಯ




ಪರಿಸರದ ರಕ್ಷಣೆಗೆ ಜನಸಂದಣೆಯಿರುವ ಪ್ರದೇಶಕ್ಕೆ ಮಾತ್ರಾ ಪರಿಮಿತವಲ್ಲ. ಯಾವತ್ ಭೂಭಾಗಕ್ಕೆ ಸಂಬಂಧಿಸಿದ್ದಾಗಿದೆ. ಅದರಲ್ಲೂ ಸಾಕ್ಷಾತ್ತು ಕಲಿಯುಗ ವೈಕುಂಠವೆಂದು ಪ್ರಸಿದ್ಧವಾಗಿರುವ ತಿರುಮಲೆಯಲ್ಲಿ ಶ್ರೀನಿವಾಸನ ದರ್ಶನಾರ್ಥವಾಗಿ ಲಕ್ಷಗಳ ಸಂಖ್ಯೆಯಲ್ಲಿ ಬರುವ ಭಕ್ತರು ಹಾಗೂ ದೇವಸ್ಥಾನದ ಯಾಜಮಾನ್ಯರದ್ದಾಗಿರುತ್ತದೆ. ಇಂದು ಪ್ರಪಂಚವೆಲ್ಲಾ ತನ್ನತ್ತ ದೃಷ್ಟಿ ಸಾರುವಂತೆ ಮಾಡಿರುವ ತಿರುಮಲೆಯ ಕ್ಷೇತ್ರ ಎಲ್ಲಾ ರೀತಿಯಲ್ಲೂ ರಾರಾಜಿಸುತ್ತಿದೆ. ಪ್ರತಿದಿನ ಲಕ್ಷಲಾದಿ ಭಕ್ತರು ವಿವಿಧ ಮಾರ್ಗಗಳ ಮೂಲಕ ತಿರುಮಲೆಯನ್ನು ತಲುಪುತ್ತಿದ್ದಾರೆ. ಎಲ್ಲಿ ಜನಸಂದಣಿ ಇರುತ್ತದೋ ಅಲ್ಲಿ ಅವರವರ ಅಭ್ಯಾಸಗಳ ಪ್ರಕಾರ ಪರಿಸರದಲ್ಲಿ ಬದಲಾವಣೆಗಳು ಆಗುತ್ತಲೇ ಇರುತ್ತದೆ. ಈ ಬದಲಾವಣೆಯಿಂದಾಗಿ ಹಲವು ಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿದೆ. ಇದರಿಂದ ಪ್ರಕೃತಿಯ ಸೌಂದರ್ಯದೊಂದಿಗೆ ಶೋಭಾಯಮಾನವಾಗಿರುವ ತಿರುಮಲೆಯ ಪರಿಸರವು ನಾಶವಾಗುವಂತಹಾ ಅಪಾಯವು ಕಂಡು ಬರುತ್ತಿದೆ.ಈ ಘೋರವಾದ ಪರಿಸ್ಥಿತಿಯನ್ನು ನಿಯಂತ್ರಿಸುವುದಕ್ಕೆ ತಿ.ತಿ.ದೇ. ಯಾಜಮಾನ್ಯ ದವರು ಶತಪ್ರಯತ್ನ ಮಾಡುತ್ತಿದ್ದಾರೆ.

ನೀರೇ ಪ್ರಾಣಾಧಾರ! ಈ ನೀರು ಶುಭ್ರವಾಗಿ, ಶುಚಿಯಾಗಿರಬೇಕಾಗಿರುವುದು ಅನಿವಾರ್ಯ. ಆದ್ದರಿಂದ ನೀರಿನ ಸಂರಕ್ಷಣೆಯು ಅತ್ಯಂತ ಅಗತ್ಯವಾಗಿದೆ. ಯಾತ್ರಿಕರು ಪ್ಲಾಸ್ಟಿಕ್ ಸೀಸೆಗಳಿಂದ ನೀರು ತಂದುಕೊಳ್ಳುವುದು, ನೀರನ್ನು ಕುಡಿದ ನಂತರ ಆ ಸೀಸೆಗಳನ್ನು ಎಲ್ಲೆಂದರಲ್ಲಿ ಹಾಕುವುದನ್ನು ಮಾಡುತ್ತಿದ್ದಾರೆ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಿ.ತಿ.ದೇ ಅವರು ವಿವಿಧ ಪ್ರಸಾರಮಾಧ್ಯಮಗಳ ಮೂಲಕ ಪ್ರಚಾರಮಾಡುತ್ತಾ ಆ ಸಮಸ್ಯೆಯನ್ನು ಬಹಳಷ್ಟರ ಮಟ್ಟಿಗೆ ಹತೋಟಿಗೆ ತಂದಿದ್ದಾರೆ. ಹಾಗೇ ಕಸವನ್ನು ಎಲ್ಲಂದರಲ್ಲಿ ಹೇರುವುದು. ಇದರಿಂದ ಅನಾರೋಗ್ಯ ಸಮಸ್ಯೆಗಳು ಉಂಟಾಗುತ್ತಿದೆ. ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ತಿ.ತಿ.ದೆ. ಅವರು ಹರಸಾಹಸ ಮಾಡುತ್ತಿದ್ದಾರೆ. ಎಲ್ಲೆಂದರಲ್ಲಿ ಕಸ ಎಸೆಯಬಾರದೆಂಬ ವಿಚಕ್ಷಣೆಯನ್ನು ಭಕ್ತರು ಹೊಂದಿರಬೇಕು.

ಪರಿಸರಕ್ಕೆ ಹಾನಿಮಾಡುವಂತಹಾ ಕೆಲಸಗಳಿಂದಾಗಿ ತಿರುಮಲೆಯ ವನಗಳಲ್ಲಿ ಅಮೂಲ್ಯವಾದ ವೃಕ್ಷ ಸಂಪತ್ತು, ಔಷಧೀಯ ಗಿಡಗಳು ನಾಶವಾಗುವ ಪರಿಸ್ಥಿತಿ ಇದೆ. ಇದಕ್ಕೆ ಸರಿಯಾಗಿ ವಾಯುಮಾಲಿನ್ಯವೂ ಒಂದಾಗಿದೆ. ಈ ಪರಿಸ್ಥಿತಿಯನ್ನು ದಾಟಬೇಕಾದರೆ ವೃಕ್ಷ ಸಂಪತ್ತಿನಿಂದಾಗಿ ಎಷ್ಟು ಲಾಭಗಳಿವೆ ಎಂದು ತಿ.ತಿ.ದೇ., ಅವರು ಪ್ರಚಾರ ಮಾಡುತ್ತಿದ್ದಾರೆ.ಈ ಪರಿಸರವನ್ನು ಕಾಪಾಡುವುದಕ್ಕಾಗಿ ತಿ.ತಿ.ದೇ ಎಚ್ಚರಿಕೆಗಳನ್ನು ಜಾರಿಮಾಡಿ, ಅದನ್ನು ಪರೀಕ್ಷಿಸುವಂತಹಾ ಕೆಲಸದಲ್ಲೂ ತೊಡಗಿದೆ. ತಿರುಮಲೆಯ ಪುಷ್ಕರಿಣೆಯನ್ನು ಕಾಪಾಡುವುದೂ ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದೆ. ಆ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾ ಭಕ್ತರು, ಬಟ್ಟೆಗಳನ್ನು ಒಗೆಯುವುದು, ಸೋಪುಗಳನ್ನು ಉಪಯೋಗಿಸುವುದರಿಂದ ಆ ನೀರು ಕಲುಷಿತವಾಗುತ್ತದೆ. ಈ ಅಪಾಯವನ್ನು ತಪ್ಪಿಸುವ ಸಲುವಾಗಿ ಆ ಪುಷ್ಕರಣಿಯಲ್ಲಿ ಜಲ ಶುದ್ಧಿಯಂತ್ರಗಳನ್ನು ಅಳವಡಿಸಲಾಗಿದೆ. ಪರಿಸರದ ರಕ್ಷಣೆಗೆ ಹಾಗೂ ಆರೋಗ್ಯ ಸೂತ್ರಗಳಿಗೆ ಬಿಡಿಸಲಾರದ ಸಂಬಂಧವಿದೆ. ತಿರುಮಲೆಗೆ ಕಾಲುನಡಿಗೆಯಲ್ಲಿ ಬರುವವರು ಪರಿಸರಗಳನ್ನು ಹಾಳು ಮಾಡದೇ ಇರುವಂತೆ ಅವರಿಗೆ ತಿ.ತಿ.ದೆ ಕನಿಷ್ಟ ಅಗತ್ಯತೆಗಳನ್ನು ಕಲ್ಪಿಸಿದೆ. ಭಗವಂತನ ಸೃಷ್ಟಿಯಲ್ಲಿ 'ಪಂಚಭೂತಗಳು' ಪ್ರಮುಖವಾದುವು. ಇವುಗಳನ್ನು ರಕ್ಷಿಸುವುದರಿಂದ ಪರಿಸರದ ರಕ್ಷಣೆಯು ಸಾಧ್ಯವಾಗುತ್ತದೆ. ಚಿಕಿತ್ಸೆಗಿಂತಲೂ ವ್ಯಾಧಿ ನಿವಾರಣೆಯನ್ನು ಅನುಸರಿಸುವುದು ಉತ್ತಮವಲ್ಲವೇ? ಇದೇ 'ಸಾಮೂಹಿಕ ಯಾಗ' ಈ ಯಾಗವು ಸ್ವಯಂ ನಿಯಂತ್ರಣದಿಂದ ಸಾಧ್ಯವಾಗಿ ಸತ್ಫಲಿತವನ್ನು ನೀಡುತ್ತದೆ. ಭಕ್ತರು ಕ್ರಮೇಣ ಪ್ಲಾಸ್ಟಿಕ್ ವಸ್ತುಗಳನ್ನು ಬಳಸುವುದನ್ನು ಕಡಿಮೆ ಮಾಡಬೇಕು. ಇವುಗಳ ಬಳಕೆಯಿಂದಾಗಿ ಪರಿಸರಕ್ಕೆ ತುಂಬಲಾರದ ನಷ್ಟವು ಒದಗುತ್ತಿದೆ. ಆದ್ದರಿಂದ ಭಕ್ತರು ತಮ್ಮ ವಿಚಕ್ಷಣಾ ಜ್ಞಾನವನ್ನು ಅನುಸರಿಸಿ ಪ್ಲಾಸ್ಟಿಕ್ ವಸ್ತುಗಳನ್ನು ತರುವುದನ್ನು ಬಿಟ್ಟು ಶ್ರೀ ಹರಿ ನೆಲೆಸಿರುವ ತಿರುಮಲೆಯು 'ಸುಂದರ ತಿರುಮಲೆ'ಯಾಗಿ ಬೆಳೆಯುವ ನಿಟ್ಟಿನಲ್ಲಿ ಹೆಜ್ಜೆ ಹಾಕಬೇಕಾಗಿದೆ.





**ಗೋವಿಂದಾ! ಗೋವಿಂದಾ!! ಗೋವಿಂದಾ!!!**

# ಅಧಿಕ ಮಾಸದ ಮಹಿಮೆ


ಡಾ॥ ಸುಮನ ಬದರೀನಾಥ್
94820 94855

**ಪರ್ವತಗಳಲ್ಲಿ ಮೇರು, ಗ್ರಹಗಳಲ್ಲಿ ಸೂರ್ಯ ನದಿಗಳಲ್ಲಿ ಗಂಗಾ, ಪಕ್ಷಿಗಳಲ್ಲಿ ಗರುಡ, ನಕ್ಷತ್ರಗಳಲ್ಲಿ ಚಂದ್ರ, ಪಶುಗಳಲ್ಲಿ ಗೋವು, ಮನುಷ್ಯರಲ್ಲಿ ಬ್ರಾಹ್ಮಣ ಹೇಗೋ ಹಾಗೆ ಮಾಸಗಳಲ್ಲಿ ಅಧಿಕ ಮಾಸ ಶ್ರೇಷ್ಠವಾದುದು ಎಂದು ಪದ್ಮಪುರಾಣದಲ್ಲಿ ಹೇಳಿದ್ದಾರೆ. ಈ ಬಾರಿ ಅಧಿಕ ಮಾಸವು ಜುಲೈ 18 ರಂದು ಪ್ರಾರಂಭವಾಗಿ ಆಗಸ್ಟ್ 16 ರಂದು ಮುಕ್ತಾಯಗೊಳ್ಳುತ್ತದೆ. ಇಂತಹ ಶ್ರೇಷ್ಠ ಪರ್ವಕಾಲ ಒಂದೊದಗಿದೆ. ಅದರಿಂದ ಎಲ್ಲರೂ ತಮಗೆ ಸಾಧ್ಯವಾದ ರೀತಿಯಲ್ಲಿ ಅಧಿಕಮಾಸದಲ್ಲಿ ವ್ರತ, ಪೂಜೆ, ದಾನಾದಿ ಮಾಲಸ ಧರ್ಮವನ್ನು ಆಚರಿಸಿ ಪುಣ್ಯಭಾಜನರಾಗಲೆಂದು ಹಾರೈಕೆಗಳು.**

ಇದೀಗ ಅಧಿಕ ಶ್ರಾವಣ ಮಾಸದ ವಿಶೇಷ ಪರ್ವಕಾಲ ಬಂದೊದಗಿದೆ. ಮಾಸಗಳಲ್ಲಿ ಅಧಿಕಮಾಸವು ಸಾಧನೆಗೆ ವಿಶಿಷ್ಠವಾದ ಬಹು ಶ್ರೇಷ್ಠವಾದ ಪರ್ವಕಾಲ. ಅಧಿಕಮಾಸವು ಅಧಿಕ ಸಾಧನೆಯಿಂದ ಅಧಿಕ ಫಲ ಪಡೆಯುವ ರಾಜಮಾರ್ಗವಾಗಿದೆ. 'ಅಧಿಕಾಸ್ಯಧಿಕ ಫಲಂ' ಎಂದು ಶ್ರುತಿ ಸ್ಮೃತಿ , ಪುರಾಣಾದಿ ಗ್ರಂಥಗಳಲ್ಲಿ ಉಕ್ತವಾಗಿರುವಂತೆ ಅಧಿಕ ಮಾಸದ ಆಚರಣೆಯಿಂದ ಇತರ ಮಾಸಗಳಲ್ಲಿ ಲಭಿಸದ ವಿಶೇಷ ಫಲ ದೊರೆಯುವುದು. ಒಂದು ವರ್ಷದಲ್ಲಿ ಮಾಡುವ ಸಾಧನೆಯನ್ನು ಈ ಒಂದೇ ತಿಂಗಳಿನಲ್ಲಿ ಮಾಡಬಹುದೆಂದು ಹೇಳಲಾಗಿದೆ. ಅದರಿಂದ ಸಾಧಕರು ಅಧಿಕ ಮಾಸದ ಬರವನ್ನೇ ಎದುರು ನೋಡುತ್ತಿರುತ್ತಾರೆ.

ಅಧಿಕ ಮಾಸವೆಂದರೇನು? ಅದರ ಲೆಕ್ಕಾಚಾರ ಹೀಗಿದೆ. ಭಾರತೀಯ ಸಂವತ್ಸರ ಗಣನೆಯಲ್ಲಿ ಸಾರ್ವತ್ರಿಕವಾಗಿ ಬಳಕೆಯಲ್ಲಿರುವುದು ಸೌರ ಮಾನ ಮತ್ತು ಚಾಂದ್ರಮಾನಗಳು. ಸೌರಮಾನವು ಸೂರ್ಯನ ಚಲನೆಯನ್ನೂ, ಚಾಂದ್ರಮಾನವು ಚಂದ್ರನ ಚಲನೆಯನ್ನು ಅವಲಂಬಿಸಿವೆ. ಆದರೆ ಸೌರಮಾನ ವರ್ಷಕ್ಕೂ ಚಾಂದ್ರಮಾನ ವರ್ಷಕ್ಕೂ 11 ದಿನ 1 ಗಂಟೆ, 14 ನಿಮಿಷಗಳ ವ್ಯತ್ಯಾಸ ಉಂಟಾಗುತ್ತದೆ. ಅಂದರೆ ಸೌರಮಾನ ವರ್ಷದಲ್ಲಿ 365 1/4 ದಿನಗಳಿದ್ದರೆ ಚಾಂದ್ರಮಾನ ವರ್ಷದಲ್ಲಿ 354 ದಿನಗಳಿರುತ್ತವೆ. ಹಾಗಾಗಿ ಸೌರಚಾಂದ್ರಮಾನ ವರ್ಷಗಳ ಸಾಮಂಜಸ್ಯವನ್ನು ತರುವುದಕ್ಕಾಗಿ 32 ತಿಂಗಳು 16 ದಿನ 1 ಗಂಟೆಯ ಮೇಲೆ ಒಂದು ಅಧಿಕಮಾಸವು ಬರುತ್ತದೆ.

ಸೌರಮಾಸಗಳು ಮೇಷ, ವೃಷಭ, ಕರ್ಕ, ತುಲಾ, ಮೀನ ಇತ್ಯಾದಿ. ಚಾಂದ್ರ ಮಾಸಗಳು ಚೈತ್ರ ವೈಶಾಖ, ಕಾರ್ತೀಕ, ಫಾಲ್ಗುಣ ಇತ್ಯಾದಿ. ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶ ಮಾಡುವ



ದನ್ನು ಸಂಕ್ರಮಣ ಎನ್ನುವರು.ಪ್ರತಿಯೊಂದು ಚಾಂದ್ರ ಮಾಸದಲ್ಲೂ ಒಂದು ರವಿ ಸಂಕ್ರಮಣ ಇದ್ದೇ ಇರುತ್ತದೆ.ಒಂದು ರವಿಸಂಕ್ರಮಣವು ಸಂಭವಿಸದ ಚಾಂದ್ರ ಮಾಸವನ್ನು ಅಧಿಕಮಾಸ ಎನ್ನುವರು. ಅಸಂಕ್ರಾಂತ ಮಾಸ ಎಂದು ಕರೆಯುತ್ತಾರೆ. ಈ ವರ್ಷ ಅಧಿಕ ಶ್ರಾವಣ ಮಾಸ ಬಂದಿದೆ.

ಅಧಿಕಮಾಸಕ್ಕೆ ಪುರುಷೋತ್ತಮ ಮಾಸ ಎಂಬ ವಿಶೇಷ ಹೆಗ್ಗಳಿಕೆಯಿದೆ. ಸಂಕ್ರಾಂತಿಯನ್ನು ಹೊಂದಿರುವ ಇತರ ಮಾಸಗಳ ಅಧಿಪತಿ ಸೂರ್ಯ ಹಾಗೂ ಅವನ ಅಂತರ್ಯಾಮಿಯಾದ ಶ್ರೀಹರಿ. ಆದರೆ ಸಂಕ್ರಾಂತಿ ಇರದ ಮಾಸವಾದ ಅಧಿಕ ಮಾಸಕ್ಕೆ ಯಾರೂ ಅಧಿಪತಿಗಳಿರಲಿಲ್ಲ-ರವಿ ಸಂಕ್ರಾಂತಿ ಇರದ ಕಾರಣ ಅಧಿಕಮಾಸ ವಿವಾಹ, ಉಪನಯನ, ಗೃಹ ಪ್ರವೇಶಾದಿ ಶುಭ ಕಾರ್ಯಗಳಿಗೆ ನಿಷಿದ್ಧವಾಗಿದೆ. ಇದರಿಂದ ಅಧಿಕ ಮಾಸದ ದೇವತೆ ಎಲ್ಲರಿಂದ ತಿರಸ್ಕೃತನಾಗಿ ಮಲ ಎಂದು ಅವಮಾನಿತನಾಗಿ ದುಃಖಿಗೊಂಡು ಶ್ರೀಹರಿಯನ್ನು ಮೊರೆ ಹೊಕ್ಕಾಗ, ಭಗವಂತನು ಹನ್ನೆರಡು ಮಾಸಗಳ ಅಧಿ ದೇವತೆಗಳಿಂದ ಅವಮಾನಿತನಾದ ನೀನು ಅವುಗಳೆಲ್ಲಕ್ಕಿಂತಲೂ ಮಹತ್ವದಲ್ಲಿ ಮಿಗಿಲಾಗು ಎಂದು ವರವನ್ನಿತ್ತನು ಮತ್ತು ತಾನೇ ಆ ಮಾಸಕ್ಕೆ ಅಧಿಪತಿಯಾಗುವೆನೆಂದು ಅಭಿಮಾನಿಯಾಗುವೆನೆಂದು ವರವನ್ನಿತ್ತನು.ಅದರಿಂದ ಅಧಿಕ ಮಾಸಕ್ಕೆ ಪುರುಷೋತ್ತಮ ರೂಪಿ ಭಗವಂತನೇ ಅಧಿಪತಿಯಾದ ಮತ್ತು ಅಧಿಕಮಾಸಕ್ಕೆ ಪುರುಷೋತ್ತಮಮಾಸ ಎಂದೇ ಹೆಸರಾಯಿತು.


ಅಧಿಕ ಮಾಸದ ಮಹಿಮೆ, ಮಹಾತ್ಮೆ ಪದ್ಮ ಪುರಾಣ, ಸ್ಕಾಂಧಪುರಾಣ, ಬೃಹನ್ನಾರ ಧೀಯ ಪುರಾಣಭವಿಷ್ಯೋತ್ತರ, ಪುರಾಣ, ಅಧಿಕಮಾಸ ಮಹಾತ್ಮೆಮುಂತಾದ ಪುರಾಣ ಗ್ರಂಥ ಗಳಲ್ಲಿ ವಿಶೇಷವಾಗಿ ನಿರೂಪಿತವಾಗಿದೆ.ಅಧಿಕಮಾಸದಲ್ಲಿ ರವಿ ಸಂಕ್ರಾಂತಿ ಇರದ ಕಾರಣ ಅದು ವಿವಾಹ, ಉಪನಯನ, ಗೃಹಪ್ರವೇಶಾದಿ ಶುಭ ಕಾರ್ಯ ಗಳಿಗೆ ನಿಷಿದ್ಧವಾಗಿದೆ. ಆದರೆ ನಾನಾ ಬಗೆಯ ವ್ರತ, ಪೂಜೆ,ದಾನಗಳ ಮೂಲಕ ಪುಣ್ಯ ಸಂಚಯ ಮಾಡಿಕೊಳ್ಳಲು ಉತ್ತಮ ಸಾಧನವಾಗಿದೆ. ಇತರ ಎಲ್ಲ ಮಾಸಗಳು, ಪಕ್ಷಗಳು, ಪರ್ವಕಾಲಗಳು ಅಧಿಕ ಮಾಸದ ಹದಿನಾರನೇ ಒಂದಂಶಕ್ಕೂ ಸಾಟಿಯೆನ್ನಿಸವು ಎಂದು ಪುರಾಣ ಗ್ರಂಥಗಳು ಸಾರಿ ಹೇಳಿವೆ. ಶ್ರೀಹರಿಯ ಅನುಗ್ರಹದಿಂದ ಈ ಮಾಸಕ್ಕೆ ಇತರ ಸಕಲ ಮಾಸಗಳಿಗಿಂತ ವಿಶೇಷ ಹಿರಿಮೆ ಲಭಿಸಿದೆ. ಅಧಿಕ ಮಾಸವು ಮುಕ್ಕೋಟಿ ದೇವತೆಗಳಿಗೂ ಶ್ರೀಹರಿಯೇ ಸ್ವಾಮಿ ಎಂಬ ತತ್ವಕ್ಕೂ, ಅಧಿಕ ಶಬ್ದ ವಾಚ್ಯವಾದ ಪುಣ್ಯ ಸಂಪಾದನೆಗೂ ಅವಕಾಶವೀಯುವ ಒಂದು ಉತ್ತಮ ಸಾಧನವಾಗಿ ಅಪಾರ ಮಹತ್ವ ಪಡೆದಿದೆ. ಪುರುಷರಂತೆ ಸ್ತ್ರೀಯರಿಗೂ ವಿಹಿತವಾದ ಸಾಧನಾ ಮಾರ್ಗವಾಗಿದೆ.

ಅಧಿಕಮಾಸಕ್ಕೆ ವಿಹಿತವಾದ ಸಂಖ್ಯೆ 33 ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಪ್ರಜಾಪತಿ ಮತ್ತು ವಷಟ್ಕಾರ ಎಂಬ 33 ದೇವತೆಗಳು ಈ ಸಂಖ್ಯೆಗೆ ಅಧಿಪತಿಗಳು.ಅವರಿಗೆ ಅಂತರ್ಯಾಮಿಯಾದ, ನಿಯಾಮಕವಾದ ಶ್ರೀಹರಿಯ ವಿಷ್ಣು,ಜಿಷ್ಣು ಹರಿ, ಕೃಷ್ಣ ಮಾಧವ ಜನಾರ್ದನ ಶ್ರೀಪತಿ ಮೊದಲಾದ 33 ಭಗವದ್ರೂಪಗಳು. ಅದರಿಂದ ಪೂಜೆ, ದಾನಾದಿಗಳನ್ನು 33 ಸಂಖ್ಯೆಯಲ್ಲಿ ಮಾಡುವುದು ಸಹಿತ.



ಅಧಿಕ ಮಾಸದಲ್ಲಿ ಗ್ರಂಥದಾನದ ಮಹತ್ವವನ್ನು ವಿಶೇಷವಾಗಿ ಹೇಳಿದ್ದಾರೆ. ಭಾಗವತ,ರಾಮಾಯಣ,ಭಗವದ್ಗೀತೆ,ಮಹಾಭಾರತ ಮುಂತಾದ ಗ್ರಂಥಗಳನ್ನು ಸತ್ಪಾತ್ರರಿಗೆ ಸದಾಚಾರ ಶೀಲರಿಗೆ, ಆಸಕ್ತರಿಗೆ ದಾನ ಮಾಡುವುದು ಬಹು ಪುಣ್ಯಕರ ಹಾಗೆಯೇ ಭಾಗವತಾದಿ ಗ್ರಂಥಗಳನ್ನು ವಿಶೇಷವಾಗಿ ಭಗವದ್ಗೀತೆಯ ಪುರುಷೋತ್ತಮ ಯೋಗ ಅಧ್ಯಾಯವನ್ನು ನಿತ್ಯವೂ ಶ್ರದ್ಧಾ ಭಕ್ತಿಗಳಿಂದ ಪಾರಾಯಣ ಮಾಡುವುದು ಬಹು ಶ್ರೇಯಸ್ಕರ.







ಹಾಗೆಯೇ ವಿಶೇಷವಾಗಿ ಗೋಪೂಜೆ, ಗೋದಾನ, ಗೋಗ್ರಾಸ ನೀಡುವುದು ಮಾಡಬೇಕು. ಇದಾವುದು ಕಾರಣಾಂತರಗಳಿಂದ ಸಾಧ್ಯವಾಗದಿದ್ದರೆ ಯಥಾ ಶಕ್ತಿ ದ್ರವ್ಯದಾನವನ್ನು ಮಾಡುವುದು ಸುಲಭವಾದ ಆದರೆ ಪುಣ್ಯಕರವೇ ಆದ ಕಾರ್ಯ ವಾಗಿದೆ. ಕಿಂಚಿತ್ ಪುಣ್ಯ ಕಾರ್ಯವು ಮಹತ್ ಫಲ ನೀಡುವುದು. ನಿತ್ಯ ಪೂಜೆ, ಜಪ,ಸ್ತೋತ್ರ ಪಾರಾ ಯಣಗಳನ್ನು ತಪ್ಪದೇ ಮಾಡಬೇಕು. ಅಧಿಕಮಾಸದ ವ್ರತಗಳನ್ನು ಮಾಡುವವರಿಗೆ ಕೈಲಾದ ಸಹಾಯವನ್ನು ಮಾಡುವುದೂ ಪುಣ್ಯಕರವೆಂದೇ ಹೇಳಲಾಗಿದೆ. ಅಧಿಕಮಾಸದ ಮೊದಲ ದಿನ, ಎರಡು ದ್ವಾದಶಿಗಳು, ಹುಣ್ಣಿಮೆ, ಅಮಾ ವಾಸ್ಯೆ, ವೈಧೃತಿ, ವ್ಯತೀಪಾತ ಯೋಗವಿರುವ ದಿನಗಳು, ಆ ಅಧಿಕಮಾಸದ ನಕ್ಷತ್ರವಿರುವ ದಿನ, ಅಂದರೆ ಈ ಬಾರಿ ಅಧಿಕ ಶ್ರಾವಣ ಮಾಸ ಬಂದಿರುವುದರಿಂದ ಶ್ರವಣ ನಕ್ಷತ್ರವಿರುವ ದಿನ ದಾನಗಳಿಗೆ ಬಹು ಶ್ರೇಷ್ಠವಾದ ಪರ್ವಕಾಲವಾಗಿದೆ. ಅಧಿಕಮಾಸದ ಎಲ್ಲ ವ್ರತಗಳನ್ನು ಪೂಜೆಗಳನ್ನು ದಾನಗಳನ್ನೂ, ಸಂಕಲ್ಪ ಪೂರ್ವಕವಾಗಿ ಮಾಡಿ,ಮಾಸ ನಿಯಾಮಕರಾದ ಆನಂದಾ ಪುರು ಷೋತ್ತಮರೂಪಿ ಲಕ್ಷ್ಮೀನಾರಾಯಣರಿಗೆ ಅರ್ಪಿಸಬೇಕು.

**ಪುಸ್ತಕ ಪರಿಚಯ**

## ಕೃಷ್ಣ ಪ್ರಜ್ಞೆ ಜಾಗೃತಗೊಳಿಸಲು ಕೈದೀವಿಗೆ -ಉನ್ನತ ವಿಚಾರಗಳ ಜ್ಞಾನ ಸತ್ರ




**ಕೃತಿ : ಶ್ರೀ ಕೃಷ್ಣಾರ್ಪಣ**
**ಪ್ರಕಾಶಕರು : ಕಾಕೋಳು ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ, ಬೆಂಗಳೂರು**
**ಬೆಲೆ ರೂ : 200/-**
**ಪುಟಗಳು : 250**
**ಪ್ರತಿಗಳಿಗೆ ಸಂಪರ್ಕಿಸಿ : 97393 69621**

ಸಾಧಕರನ್ನು ಸಿದ್ಧರನ್ನಾಗಿಸುವ, ಜಿಜ್ಞಾಸುಗಳನ್ನು ಜ್ಞಾನಿಗಳನ್ನಾಗಿಸುವ,ಮುಮುಕ್ಷುಗಳನ್ನು ಮುಕ್ತರನ್ನಾಗಿಸುವ, ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿಸುವ,ಅಶಾಂತರನ್ನು ಶಾಂತ ರನ್ನಾಗಿಸುವ, ದುಃಖಿಗಳನ್ನು ಸುಖಿಃಗಳನ್ನಾಗಿಸುವ, ಲೌಕಿಕರನ್ನು ವೇದಾಂತಿಗಳನ್ನಾಗಿಸಿ ಪುಣ್ಯ ಪಥದಲ್ಲಿ ಕೊಂಡ್ಯೂಯುವ ಜ್ಞಾನಸಂತರ್ಪಣೆ ಈ ಕೃತಿಯ ವೈಶಿಷ್ಟ್ಯ. 40 ವೈವಿಧ್ಯ ಮಯ ಲೇಖನಗಳಿಂದ ಸಮೃದ್ಧ ಸಂಪುಟವಾಗಿ ಹೊರಹೊಮ್ಮಿರುವ ಈ ಹೊತ್ತಗೆ ಬೆಂಗಳೂರು ಹೊರವಲಯದ ಕಾಕೋಳು ವೇಣುಗೋಪಾಲನ "90ನೇ ಬ್ರಹ್ಮ ರಥೋತ್ಸವ'' ಮತ್ತು ತದಂಗವಾಗಿ ನಡೆದ "ಬೃಹತಿ ಸಹಸ್ರ ಮಹಾಯಾಗ'' ದ ಜ್ಞಾನ ಪ್ರಸಾದವಾಗಿ 'ಪಾಂಚಜನ್ಯ ಪ್ರತಿಷ್ಠಾನ 'ದ ಸಹಯೋಗದಲ್ಲಿ ಬೆಳಕು ಕಂಡಿದೆ. ಸಾಂಸ್ಕೃತಿಕ ಪತ್ರಿಕೋದ್ಯಮದಲ್ಲಿ ವಿಶೇಷ ಅಭಿರುಚಿಯನ್ನು ಬೆಳಸಿಕೊಂಡಿರುವ ಮೌಲ್ಯ ವರ್ಧಿತ ಮಾಧ್ಯಮ ಸಮನ್ವಯಕಾರ ಡಾ॥ ಗುರುರಾಜ ಪೋಶೆಟ್ಟಿಹಳ್ಳಿರವರು ಪುರಾಣ-ಸಮಕಾಲೀನ ಸಂಗತಿಗಳನ್ನು ಮುಂದಿಟ್ಟುಕೊಂಡು ಎಲ್ಲ ಆಯಾಮಗಳನ್ನು ಸ್ಪರ್ಷಿಸಿದ್ದಾರೆ. ಮರೆತು ಹೋಗುತ್ತಿರುವ ಸಂಸ್ಕೃತಿಯ ಮಹತ್ವವನ್ನು ಮುಂದಿನ ಪೀಳಿಗೆಗೆ ವಿವಿಧ ಮಗ್ಗುಲುಗಳಿಂದ ಪರಿಚಯಿಸುವ ರೀತಿ ಕುತೂಹಲಕರವಾಗಿದೆ.

ಶ್ರೀಕೃಷ್ಣಗಾಥೆಯ ವಿಶ್ವರೂಪ ದರ್ಶನದ ಹನಿ ಬಿಂದು ಇದಾಗಿದೆ. ಮಾನಸಿಕ ಕ್ಷೋಭೆ ಹೆಚ್ಚಾಗುತ್ತಿರುವ ಈ ದಿನಮಾನದಲ್ಲಿ ಇಲ್ಲಿನ ಬರಹಗಳಿಂದ ಭಕ್ತಿ ಜಾಗೃತಿಯಾಗುವ ಇಂತಹ ಕೃತಿಯ ಅಗತ್ಯವಿತ್ತು ಎಂಬ ಉದ್ಗಾರ ಓದುಗ ಭಕ್ತರಿಂದ ಹೊರಡುತ್ತದೆ. ನೋಡುತ್ತಲೋ, ಆಡುತ್ತಲೋ, ಕೇಳುತ್ತಲೋ ಹೃದಯ ಗೂಡಿನಲ್ಲಿ ಒಡಮೂಡಿದ ಜ್ಞಾನಾಮೃತದ ಬುತ್ತಿಯನ್ನು ಆಸಕ್ತಿರಿಗೆಲ್ಲ ಬಡಿಸೋಣ ಎಂಬ ಲೇಖಕರ ಔದಾರ್ಯ ಸ್ವಾಗತಾರ್ಹ.ಇಲ್ಲಿರುವ ಮಾಹಿತಿಯ ಆಳ-ವಿಸ್ತಾರ ಅನುಪಮ. ವಿಚಾರ ಸಂಗ್ರಹಣೆ-ಆಕರ್ಷಕ ನಿರೂಪಣೆ-ಪುಟ ವಿನ್ಯಾಸಗಳಿಂದ ಗಮನ ಸೆಳೆಯುವ ಈ ಹೆಬ್ಬೊತ್ತಿಗೆ ಜ್ಞಾನ ದಾಸೋಹವಷ್ಟೇ ಅಲ್ಲ ಭಕ್ತಿ ರಸಾಯನವೂ ಹೌದು.

ವರ್ಣ - ಆಶ್ರಮ, ಲಿಂಗ- ಮತ- ಪಂಥ,ಸಂಪ್ರದಾಯ- ರಾಷ್ಟ್ರೀಯತೆ, ಅಧಿಕಾರ - ಅಂತಸ್ತು, ಸಿರಿತನ - ಬಡತನ ಯಾವ ಭೇದ ವಿಲ್ಲದೆ ಕೃಷ್ಣಾರ್ಪಣ ಭಾವ ಸಂತೃಪ್ತಿ ನೀಡುವ ಪಾವನ ಗ್ರಂಥ ಇದಾಗಿದೆ.

ಆನಂದಮಯ ಜೀವನಕ್ಕೆ ಭಾಷ್ಯ ಬರೆದು ದಿವ್ಯತೆಯ ರಹಸ್ಯವನ್ನರಿತ ಶ್ರೀ ಕೃಷ್ಣ ಭಕ್ತಿಯ ವಾಙ್ಮಯ ನಿರ್ಮಾಪಕರು ಹಲವಾರು ರಹಸ್ಯ; ತತ್ವ ; ಅನುಸಂಧಾನ ; ಉಪಾಸನೆ ಎಂದು ಈ ದರ್ಶನ ಗ್ರಂಥವನ್ನು ವಿಭಾಗಿಸಿ ಯಥಾ ಸಾಧ್ಯ ಸಂಗ್ರಹಿಸಿಕೊಟ್ಟಿರುವ ಪ್ರಯತ್ನ ಸ್ತುತ್ಯಾರ್ಹ.

**- ಕೆ.ವಿ. ಪದ್ಮಾವತಿ**



# ವೇದಗಳಲ್ಲಿ ಭಕ್ತಿಯ ಸ್ವರೂಪ


- ಕಲ್ಯಾಣಿ ಮೂರ್ತಿ ರಾಮನಾಥಪುರ
99720 64322


ವೇದಗಳ ಬಗ್ಗೆ ಅನೇಕ ರೀತಿಯ ಮಿಥ್ಯೆ ಹಾಗೂ ಭ್ರಮೆಗಳು ಹರಡಿವೆ. ಬೇರೆ ಗ್ರಂಥಗಳಲ್ಲಿ ವಿಷದವಾಗಿ ಹರಡಿರುವಷ್ಟು ಭಕ್ತಿ ಪ್ರೇರಕ ಭಾವನೆಗಳು ವೇದಗಳಲ್ಲಿಲ್ಲ ಎಂಬುದೂ ಅವುಗಳಲ್ಲಿ ಒಂದು. ವಿಶೇಷವಾಗಿ ಮಧ್ಯಕಾಲೀನ ಭಕ್ತರ ವಾಣಿಗಳಲ್ಲಿ ಅದು ಹೆಚ್ಚು ಎಂಬ ಭಾವ. ಸಾಮಾನ್ಯ ಜನರು ತಿಳಿಯಲು ವೇದಮಂತ್ರಗಳು ಕ್ಲಿಷ್ಟವೆಂಬ ಧೋರಣೆಯೂ ಸಹ ಇದೆ. ಸಂಸ್ಕೃತ ಭಾಷೆಯ ಮತ್ತು ವಿಶೇಷವಾಗಿ ವೈದಿಕ ಸಂಸ್ಕೃತದ ಸ್ವಲ್ಪವಾದರೂ ಜ್ಞಾನವಿದ್ದರೆ, ಬಹಳಷ್ಟು ಮಂತ್ರಗಳು ಸುಲಭವಾಗಿ ತಿಳಿಯಲ್ಪಡುತ್ತವೆ ಎಂಬುದು ಎಲ್ಲರ ಸಾಮಾನ್ಯ ಗ್ರಹಿಕೆ, ನಾವು ವಾಲ್ಮೀಕಿ ರಾಮಾಯಣ, ಮಹಾಭಾರತ ಮತ್ತು ಗೀತೆಗಳಲ್ಲಿ ಓದುವ ಸಂಸ್ಕೃತಕ್ಕಿಂತ ವೇದಗಳ ಸಂಸ್ಕೃತ ಭಾಷೆ ಹಲವು ಅಂಶಗಳಲ್ಲಿ ಭಿನ್ನ. ಉದಾಹರಣೆ: ದೇವ ಶಬ್ದದ ತೃತೀಯ ವಿಭಕ್ತಿಯ ಬಹುವಚನ ಪ್ರಚಲಿತ ಸಂಸ್ಕೃತದಲ್ಲಿ ದೇವೈ ಎಂದಿದೆ. ಆದರೆ ವೇದದಲ್ಲಿ ಬಹುಶಃ ದೇವೇಭಿಃ ಎಂದು ಪ್ರಯೋಗದಲ್ಲಿದೆ. ವೇದವನ್ನು ವೇದದಿಂದ ತಿಳಿಯುವ ಮತ್ತು ಸಂಪೂರ್ಣ ಶ್ರದ್ಧೆಯೊಂದಿಗೆ ಅಧ್ಯಯನ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಅಲ್ಲಿ ವರ್ಣಿತವಾಗಿರುವ ಭಕ್ತಿ ತತ್ವವನ್ನು ತಿಳಿಯಲು ಎಲ್ಲ ಅಡಚಣೆಗಳು ಖಂಡಿತ ದೂರವಾದಂತೆ. ಆಚಾರ್ಯರುಗಳಿಂದ ಮತ್ತು ವಿದ್ವಾಂಸರುಗಳಿಂದ ನಮ್ರವಾಗಿ ಅನುಮಾನಗಳನ್ನು ನಿವಾರಿಸಿಕೊಳ್ಳಬೇಕಾದ್ದು ಇದ್ದೇ ಇದೆ.

## ಭಕ್ತಿಯ ಸ್ವರೂಪ :

ವೇದ ವಸ್ತುಶಃ ಭಕ್ತಿಯ ಆದಿಸ್ತೋತ್ರ. ನಾವೊಂದು ವೇಳೆ ಭಕ್ತಿಯ ಸ್ವರೂಪವನ್ನು ತಿಳಿದಿದ್ದರೆ, ವೇದಗಳಲ್ಲಿ ವರ್ಣಿತವಾಗಿರುವ ಭಕ್ತಿ ತತ್ವವನ್ನು ಸುಗಮವಾಗಿ ತಿಳಿಯಬಹುದು. ಭಕ್ತಿಯ ಲಕ್ಷಣ ಶಾಸ್ತ್ರಗಳಲ್ಲಿ ಈ ರೀತಿಯಲ್ಲಿದೆ. ಸಾಪರಾನುರಕ್ತಿರೀಶ್ವರೇ. ಅಂದರೆ ಪರಮೇಶ್ವರನಲ್ಲಿ ಅವಿಚಲ ಮತ್ತು ಏಕಾಂತಿಕ ಭಾವನೆ ಹಾಗೂ ಆತ್ಮಸಮರ್ಪಣೆಯ ಉತ್ಕಟ ಆಕಾಂಕ್ಷೆಗಳನ್ನು ಭಕ್ತಿ ಎಂದು ಹೇಳಲ್ಪಟ್ಟಿದೆ. ಇಲ್ಲಿ ನಾವೊಂದು ವಿಷಯವನ್ನು ಮರೆಯಬಾರದು. ಭಕ್ತಿ ಎಂಬ ಶಬ್ದ 'ಭಜ ಸೇವಾಯಾಮ್' ಧಾತುವಿನಿಂದ ಕ್ತಿನ್ ಪ್ರತ್ಯಯವನ್ನು ಹಚ್ಚಿ ಆಗಿರುವುದು. ಅಂದರೆ, ಸಾಧಕನಾದವನು ಒಂದೆಡೆ ಪೂರ್ಣಭಾವದಿಂದ ಬ್ರಹ್ಮನಲ್ಲಿ ಅನುರಕ್ತನಾಗುವ ಭಕ್ತಿ ಹೃದಯದ ಭಾವನೆ ಅದು. ಸರ್ವತೋಭಾವೇನ ತನ್ನನ್ನು ಬ್ರಹ್ಮಾರ್ಣಗೊಳಿಸಿಕೊಳ್ಳುವವನು. ಅಲ್ಲಿ ಜತೆಗೇ ಬ್ರಹ್ಮನ ಮೂಲಕ ರಚಿತವಾದ ಈ ಇಡೀ ಸೃಷ್ಟಿಯ ಬಗ್ಗೆ ಸೇವಾ ಭಾವನೆ ಹೊಂದಿರುವವನೂ ಸಹ ಆಗಿರುತ್ತಾನೆ. ಯಜುರ್ವೇದದ ಶಬ್ದಗಳಲ್ಲಿ ಹೇಳಿದೆ - ದೃತೇ ದೃಹಮಾ ಮಿತ್ರಸ್ಯ ಮಾ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷ್ವಂತಾಮ್ । ಮಿತ್ರ ಸ್ಯಾಹಂ ಚಕ್ಷುಶಾ ಸರ್ವಾಣಿ ಭೂತಾನಿ ಸಮೀಕ್ಷಿ! ಮಿತ್ರ ಸ್ವಚಕ್ಷುಷಾ ಸಮೀಕ್ಷ್ಯಾ ಮಹೇ।

## ವೇದದ ಭಕ್ತಿ :

'ಹೇ ಸಮರ್ಥ! ನನ್ನನ್ನು ಶಕ್ತಿ ಸಂಪನ್ನನನ್ನಾಗಿ ಮಾಡು, ನಾನು ಎಲ್ಲ ಜೀವಿಗಳನ್ನು ಮಿತ್ರ ದೃಷ್ಟಿಯಿಂದ ನೋಡುವಂತಾಗಲಿ, ಎಲ್ಲ ಜೀವಿಗಳು ನನ್ನನ್ನು ಮಿತ್ರ ದೃಷ್ಟಿಯಿಂದಲೇ ನೋಡುವಂತಾಗಲಿ, ನಾವೆಲ್ಲರೂ ಪರಸ್ಪರ ಮಿತ್ರ ದೃಷ್ಟಿಯಿಂದ ನೋಡುವಂತಾಗಲಿ' ಎನ್ನುತ್ತಾನೆ.

## ಭಕ್ತಿ ಮತ್ತು ಶಕ್ತಿಯ ಅನನ್ಯ ಸಂಬಂಧ :

ವೈದಿಕ ಭಕ್ತಿಯ ಮತ್ತೊಂದು ವಿಶೇಷತೆಯೆಂದರೆ, ಅದು ಮುಂದೆ ಮಧ್ಯಕಾಲದಲ್ಲಿ ಕಾಣೆಯಾಗುತ್ತದೆ. ಉಪಾಸಕ, ಸಾಧಕ ಇಲ್ಲವೇ ಭಕ್ತ ತನ್ನನ್ನು ಅಧಮ, ನೀಚ, ಪಾಪಿ, ದುಷ್ಟ ಹಾಗೂ ಪತಿತ ಎಂದು ಕರೆಸಿಕೊಳ್ಳುವ, ಪ್ರಭುವಿಗೆ ಯಾವುದೇ ಉಪಾಲಂಭವನ್ನುಂಟು ಮಾಡುವ ಯಾವುದೇ ಮಂತ್ರಗಳು ವೇದದಲ್ಲಿ ಸಿಗುವುದಿಲ್ಲ. ವೇದದಲ್ಲಿ ಭಕ್ತಿಯೊಂದಿಗೆ ಶಕ್ತಿಯ ಸತತ ಮತ್ತು ಅವಿಚ್ಛಿನ್ನ ಸಂಬಂಧವಿರುವುದೇ ಇದಕ್ಕೆ ಕಾರಣವೆಂದು ತಿಳಿಯಲ್ಪಟ್ಟಿದೆ. ವೇದದ ಮೂಲಕ ಭಗವಂತ ಕೊಡುವ ಆದೇಶವೆಂದರೆ - ದುರ್ಬಲ ಮತ್ತು ಅಶಕ್ತ ಆತ್ಮ ನಿಜವಾದ ಭಕ್ತನಾಗಲು ಸಾಧ್ಯವಿಲ್ಲ. ಹಾಗಾಗಿಯೇ ವೇದದಲ್ಲಿ ಭಕ್ತ ಭಗವಂತನನ್ನು ತೇಜಸ್ಸು, ಶಕ್ತ, ಬಲಿಷ್ಠ, ಓಜಸ್ವ ಮತ್ತು ಸಹನಶಕ್ತಿಯ ಅಸ್ತ್ರಭಂಡಾರವೆಂದು ಭಾವಿಸಿ ಅದೆಲ್ಲವನ್ನು ಕರುಣಿಸಲು ಬಯಸುತ್ತಾನೆ. 'ತೇಜ್ಯೋऽಸಿತೇಜೋ ಮಯಿ ದೇಹಿ, ವೀರ್ಯಮಸಿ ವೀರ್ಯಮಯಿದೇಹಿ, ಬಲಮಸಿ ಬಲಂಮಯಿ ದೇಹಿ, ಸಹೋಸಿಸಹೋಮಯಿ ದೇಹಿ.''

ವೇದದ ಭಕ್ತ ಅದೆಷ್ಟು ಸಶಕ್ತ ಮತ್ತು ಅದೆಷ್ಟು ಆತ್ಮವಿಶ್ವಾಸಿ ಎಂಬುದನ್ನು ಈ ಕೆಳಗಿನ ಮಂತ್ರದಿಂದ ತಿಳಿಯಬಹುದಾಗಿದೆ.

'ಕೃತಂ ಮೇ ದಕ್ಷಿಣೇ ಹಸ್ತೇ ಜಯೋ ಮೇ ಸವ್ಯ ಆಹಿತಃ।
"ನನ್ನ ಬಲಗೈಯಲ್ಲಿ ಕಾರ್ಯಶಕ್ತಿ ಇದೆ ಮತ್ತು ಎಡಗೈಯಲ್ಲಿ ವಿಜಯವಿದೆ."

## ಪ್ರಭುವಿನ ಬಗ್ಗೆ ವಿನಮ್ರಭಾವನೆ :

ವೇದದಲ್ಲಿ ಬ್ರಹ್ಮನ ಬಗ್ಗೆ ಸಾಧಕನ ಪ್ರಣಮ್ಯ, ವಿನಮ್ರ ಮತ್ತು ಆತ್ಮಲಘುತ್ವದ ಭಾವನೆಯ ನಿರಾಕರಣವಿದೆ ಎಂದು ಇದರ ಅರ್ಥವಲ್ಲ. ಕೆಳಗಿನ ಮಂತ್ರಗಳಲ್ಲಿ ಭಕ್ತ ಅದೆಷ್ಟು ತನ್ಮಯತೆಯಿಂದ ವಿಶಾಲವಾದ ಭಗವಂತನ ಚರಣಗಳಲ್ಲಿ ತಾನು ಶಿರಬಾಗಿ ಉಪಸ್ಥಿತನಿದ್ದಾನೆ ಎಂಬ ಸಮ್ಯಕ್ ನಿದರ್ಶನ ಕಾಣಲ್ಪಡುತ್ತದೆ.


ಯೋಭೂತಂ ಚ ಭವ್ಯಂ ಚ ಸರ್ವಂ ಯಶ್ಚಾಧಿತಿಷ್ಠತಿ ।
ಸ್ವರ್ಯಸ್ಯ ಚ ಕೇವಲಂ ತಸ್ಮೈ ಜ್ಯೇಷ್ಠಾಯ ಬ್ರಹ್ಮಣೇ ನಮಃ॥
"ಭೂತ - ಭವಿಷ್ಯತ್ ವರ್ತಮಾನದ ಆ ಪ್ರಭು ಅಂತರ್ಯಾಮಿ ।
ವಿಶ್ವವ್ಯೋಮದಲ್ಲಿ ವ್ಯಾಪ್ತನಾಗಿರುವ ಆತ ತ್ರಿಕಾಲದ ಸ್ವಾಮಿ ॥
ನಿರ್ವಿಕಾರ ಆನಂದ ಕಂದ ಆತನದು ಕೈವಲ್ಯ ರೂಪ ಸುಖಧಾಮ ।
ಆ ಮಹಾನ್ ಜಗದೀಶ್ವರನಿಗೆ ಅರ್ಪಿತವು ನನ್ನ ನಮ್ರಪ್ರಣಾಮ ॥
ಯಸ್ಯ ಭೂಮಿಃ ಪ್ರಮ್ಮಾ ऽ ಂತರಿಕ್ಷಮು ತೋದರಮ್
ದಿವಂ ಯಶ್ಚಕ್ರೇ ಮೂರ್ಧಾನಂ ತಸ್ಮೈ ಜ್ಯೇಷ್ಠಾಯ ಬ್ರಹ್ಮಣೇನಮಃ॥
"ಸತ್ಯ ಜ್ಞಾನದ ಪರಿಚಾಯಕ ಈ ಪೃಥ್ವಿಯ ಚರಣ ಮಹಾನ್
ಈ ವಿಸ್ತೃತ ಅಂತರಿಕ್ಷವನು ಹೊಂದಿರುವ ಆತ ಉದರ ಸಮಾನ್ ।
ಶೀರ್ಷದುತಿಹುದು ಅವನ ಸುಶೋಭಿತ ಈನಕ್ಷತ್ರಲೋಕದ್ಯುತಿಮಾನ್।
ಆ ಮಹಾನ್ ಜಗದೀಶ್ವರನಿಗೆ ಅರ್ಪಿತವು ನನ್ನ ನಮ್ರ ಪ್ರಣಾಮ್"
ಪ್ರಭುವಿನಿಂದ ನಾವು ಬೇಡಬೇಕಾದದ್ದು ಕೆಳಗಿನ ಮಂತ್ರದಲ್ಲಿದೆ :
ಗೂಹತಾ ಗುಹ್ಯಂ ತಮೋ ವಿ ಯಾತ ವಿಶ್ವಮತ್ರಿಣಮ್ ।
ಜ್ಯೋತಿಷ್ಕರ್ತಾ ಯದುತಿಶ್ಮಸಿ ॥

"ಹೇ ಪ್ರಿಯತಮ! ಹೃದಯ ಗುಹೆಯ ಅಂಧಕಾರವನ್ನು ವಿಲೀನಗೊಳಿಸು, ಹಾಳುಮಾಡುವ ಪಾಪವನ್ನು ಓಡಿಸು . ಅಲ್ಲದೇ ಹೇ ಜ್ಯೋತಿರ್ಮಯ ಎಂದು ನಾವು ಬಯಸುವ ಜ್ಯೋತಿಯನ್ನು ನಮಗೆ ಕರುಣಿಸು."

**ಶರಣಾಗತಿಯ ಭಾವನೆ:** ಭಗವಂತ ಅಶರಣರಿಗೆ ಶರಣ. ಅವನ ಕೃಪೆಯಿಂದ ನನ್ನ ಉದ್ಧಾರವಾಗುತ್ತದೆ.

ತ್ವಮಗ್ನೇ ವ್ರತಪಾ ಅಸಿ ದೇವ ಆ ಮರ್ತ್ಯೇಷ್ವಾ ।
ತ್ವಂ ಯಜ್ಞೇಷ್ವೀಡ್ಯ ಃ॥
"ಚತುರ್ದಿಕ್‌ಗಳಲ್ಲಿ ನೀನೇ ಒಡೆಯ ಹರಡಿದ್ದೀಯೆ,
ಮಧುರ ರೂಪವನ್ನು ನಿನ್ನ ಎಲ್ಲೆಡೆ ಹರವಿದ್ದೀಯೆ
ನೀನೇ ವ್ರತ ವಿಧಾತಾ ನಿಯಂತನು ಜಗಕೆ
ಸ್ವತಃ ನಿಯಮ ಎಲ್ಲವನು ನಿರ್ವಹಿಸಿರುವೆ
ಪ್ರಭು ನಿನ್ನದು ದಿವ್ಯ ಅನುಪಮ ಶಕ್ತಿಯು
ನೀ ಹತ್ತಿರ ನೀದೂರ, ನಿನ್ನ ಯುಕ್ತಿಯು ॥
ಮಾಡಿಸಲಿ ನಮ್ಮಿಂದ ಯಜ್ಞಪುಣ್ಯ ಕರ್ಮಗಳೆಷ್ಟೋ
ಎಲ್ಲದರಲಿ ಮೊದಲಿಗನಾಗಿ ಪಡೆದಿರುವೆ ಸಾಕಷ್ಟು
ನಿನಗೆ ಮಾಡುವೆ ಹಗಲು - ರಾತ್ರಿ ವಂದನೆ ದೇವ
ನೀನೇ ಈ ಹೃದಯದಲ್ಲಿ ಒಗ್ಗೂಡಿರುವೆ ಜೀವ ॥
ಮನುಷ್ಯ ನಿರಾಸೆಗೊಳ್ಳದಿರು :

ಯಾವಾಗ ಮನುಷ್ಯನ ಬದುಕೆಂಬ ಹಡಗು ಈ ಭವಸಾಗರ ದಲ್ಲಿ ಮುಳುಗೇಳುತ್ತದೆ, (ಅಲ್ಲೋಲ ಕಲ್ಲೋಲ) ಆಗ ನಿರಾಸೆಗೊಳ್ಳು ತ್ತಾನೆ. ಆ ಸಂದರ್ಭದಲ್ಲಿ ಕರುಣಾಸಾಗರನಾದ ಭಗವಂತ ಆಸೆಯ ಪ್ರೇರಣೆ ನೀಡುತ್ತಾನೆ.



'ಉದ್ಯಾನಂ ತೇ ಪುರುಷನಾವಯಾನಂ ಜೀವಾತುಂ
ತೇದಕ್ಷತಾತಿಂ ಕೃಣೋಮಿ।
ಆ ಹಿ ರೋಹೇಮಮಮೃತಂ ಸುಖಂ ರಥಮಥ
ಜಿರ್ವಿರ್ವಿದಥ ಮಾ ವದಾಸಿ ॥

ಯಾಕಾಗಿ ನಿರಾಸೆ ಆವರಿಸಿತು ?

ಯಾಕಾಗಿ ಮುದುಡಿತು ಹೂವಿನಂತ ನಿನ್ನ ಮುಖ ॥

ನೀನೇ ಸ್ವತಃ ಸೂರ್ಯ! ದುರ್ದಿನದ ಹಾಡು ಹಾಡಬೇಡ ಹೊಂದಿ ಅಳುಮುಖ ಹೇ ಸುದಿವ್ಯ ಮಹಾರಥಿ ಒಂದು ಮಹಾನ್ ಸಂಕಲ್ಪ ಹೊಂದಿ ॥ ಮತ್ತೆ ಮುನ್ನುಗ್ಗು ಮುನ್ನುಗ್ಗು, ಚಿರಂತನ ನಡೆ ಅಭಿಮಾನದಿಂದೆ ॥ ಮತ್ತೆ ನಿನ್ನ ಸೋಲು ಸಹ ಗೆಲುವಾಗಲಿದೆ ವಿಖ್ಯಾತಿ ಹೊಂದಿ॥ ಮತ್ತೆ ನಿನ್ನ ಮೃತ್ಯುವೂ ಮೊಳಗಲಿದೆ ಅಮರ ಸಂಗೀತವಾಗಿ । ಕಾಲ ಈ ಸಂದೇಶ ಹೊತ್ತು ತಂದಿದೆ, ಯಾಕಾಗಿ ನಿರಾಶೆಯ ನೆರಳು ॥

**ಭಗವಂತನ ಈ ಜಗ ಬಲು ರಮಣೀಯ :**

ವೇದದ ಭಕ್ತ ಇದನ್ನು ರಮಣೀಯವೆಂದು ತಿಳಿದಿದ್ದಾನೆ. ಅಲ್ಲದೆ ವಾಸ್ತವಿಕತೆಯನ್ನೇ ಅರಿತಿದ್ದಾನೆ. ಭಗವಂತನಿಂದ ಪ್ರಾರ್ಥಿಸುವುದಿಷ್ಟೇ -

'ವಸಂತ ಇನ್ನು ರತ್ಯ್ವೋ ಗ್ರೀಷ್ಮ ಇನ್ನು ರತ್ನ್ಯಃ।
ವರ್ಷಾಣ್ಯನು ಶರದೋ ಹೇಮಂತಃ ಶಿಶಿರ ಇನ್ನು ರತ್ನ್ಯಃ
ವಸಂತ ರಮಣೀಯ ಸಖೇ, ಗ್ರೀಷ್ಮ ರಮಣೀಯವು।
ವರ್ಷಾ ರಮಣೀಯ ಸಖೇ , ಶರದ ರಮಣೀಯವು।
ಹೇಮಂತ ರಮಣೀಯ ಸಖೇ, ಶಿಶಿರ ರಮಣೀಯವು।
ಮನಸ್ಸು ಸ್ವತಃ ಭಕ್ತನಾಗಲೀ ವಿಶ್ವವು ರಮಣೀಯವು

ವೇದಗಳಲ್ಲಿ ಭಕ್ತಿಯ ಉದಾತ್ತ ಮತ್ತು ಪವಿತ್ರ ಉದ್ಗಾರ ಅನೇಕ ಸ್ಥಳಗಳಲ್ಲಿ ಅಂಕಿತವಾಗಿದೆ. ಇಲ್ಲಿ ಕೆಲವು ಉದಾಹರಣೆಗಳನ್ನು ಮಾತ್ರ ಕೊಡಲಾಗಿದೆ. ಇವುಗಳನ್ನು ಓದಿ ನಮ್ಮ ವೇದಗಳ ಬಗ್ಗೆ ಶ್ರದ್ದೆ ಹೆಚ್ಚಾದರೆ ಅವುಗಳ ಸ್ವಾಧ್ಯಾಯ ದತ್ತ ಮನಸ್ಸು ಮುನ್ನುಗ್ಗಲಿ. ವೇದಗಳ ರಕ್ಷಣೆ ಮತ್ತು ಅವುಗಳ ಪ್ರಚಾರದತ್ತ ನಾವು ತೊಡಗಿಕೊಳ್ಳೋಣ. ಇದರಿಂದ ಖಂಡಿತ ನಮ್ಮ ದೇಶದ ಮತ್ತು ವಿಶ್ವದ ಕಲ್ಯಾಣ ಉಂಟಾಗುತ್ತದೆ. ಮಂಗಳಕರವಾದ ಭಗವಂತ ಅಂತಹ ಕೃಪೆ ದಯಪಾಲಿಸಲಿ.

# ಆಷಾಢ ಶುದ್ಧ ಪೂರ್ಣಿಮೆ

– ಡಾ ॥ ಗುರುರಾಜ ಪೋಶೆಟ್ಟಿಹಳ್ಳಿ

9739369621



ಭರತ ಖಂಡವು ಆಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ವೈಜ್ಞಾನಿಕವಾಗಿ ವಿಶ್ವಕ್ಕೆ ಮಾದರಿಯಾಗಿರುವ ಪುಣ್ಯಭೂಮಿ. ವಿಶ್ವ ಮಾನವತ್ವದ ಮಹಾನ್ ಗುಣಗಳನ್ನೆಲ್ಲ ತನ್ನಲ್ಲಡಗಿಸಿ ಕೊಂಡಿರುವ ಭಾರತೀಯ ಸಂಸ್ಕೃತಿಯ ಹಿರಿಮೆ ಗರಿಮೆ ಜಗತ್ತಿನೆಲ್ಲೆಡೆ ಪಸರಿಸಿದ್ದು ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರವಾಗಿದೆ. ನಮ್ಮ ಭವ್ಯ ಸಂಸ್ಕೃತಿ ಹಾಗೂ ಪರಂಪರೆಯ ವಿಧಿ ವಿಧಾನಗಳು ವೈಜ್ಞಾನಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಔಚಿತ್ಯಗಳನ್ನೇ ಹೊಂದಿದ್ದು ಅವೆಲ್ಲವೂ ದಿನಗಳೆದಂತೆ ಇಡೀ ವಿಶ್ವಕ್ಕೆ ಮನದಟ್ಟಾಗುತ್ತಿವೆ.ಇಂತಹ ಭವ್ಯ ಸಂಸ್ಕೃತಿಯನ್ನು ಕಟ್ಟಿ ಬೆಳೆಸಿ,ಲೋಕ ವಿಖ್ಯಾತಗೊಳಿಸುವಲ್ಲಿ ಹಲವಾರು ಮಂದಿ ಗುರುಗಳ ಪಾತ್ರ ಮಹತ್ವ ಪೂರ್ಣವಾದುದಾಗಿದೆ. ಆದ್ದರಿಂದಲೇ ನಮ್ಮ ಸಂಸ್ಕೃತಿಯಲ್ಲಿ ಶ್ರೀಗುರುವಿಗೆ ಮಹತ್ವದ ಸ್ಥಾನವಿದೆ.


ಸುರರಿಗೆ ಬೃಹಸ್ಪತ್ಯಾಚಾರ್ಯರು, ಅಸುರರಿಗೆ ಶುಕ್ಲಾಚಾರ್ಯರು ಗುರುಗಳಾಗಿದ್ದುಕೊಂಡು ಮಾರ್ಗದರ್ಶನ ಮಾಡಿದಂತೆಯೇ ಶ್ರೀ ವಿದ್ಯಾತೀರ್ಥರ ಆಶೀರ್ವಾದ ಪಡೆದು ಹರಿಹರ - ಬುಕ್ಕರನ್ನು ಪ್ರೇರೇಪಿಸಿ, ಮಾರ್ಗದರ್ಶನ ಮಾಡಿ ಅವರಿಂದ ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದಳು. ಅವರಂತೆಯೇ ವಿಜಯನಗರ ಅರಸರಾದ ಶ್ರೀಕೃಷ್ಣದೇವರಾಯ ಶ್ರೀಅಚ್ಯುತರಾಯ ಮುಂತಾದ ರಾಜರಿಗೆ ರಾಜ ಗುರುಗಳಾಗಿ ಮಾರ್ಗದರ್ಶನ ಮಾಡಿದ ಶ್ರೀ ವ್ಯಾಸರಾಯರು... ಹೀಗೆ ನೂರಾರು ಮಂದಿ ಗುರುಗಳನ್ನು ಹೆಸರಿಸಬಹುದು. ನಮ್ಮ ವೇದೋಪನಿಷತ್ತುಗಳು ಗುರುವನ್ನು ಸಾಕ್ಷಾತ್ ಪರಬ್ರಹ್ಮನಿಗೆ ಹೋಲಿಸಿವೆ. ಶ್ರೀಗುರುವನ್ನು, ಶ್ರೀ ಗುರು ಮಹಿಮೆಯನ್ನು ಕುರಿತು ನಮ್ಮ ವೇದೋಪನಿಷತ್ತುಗಳು, ಶ್ರುತಿ, ಶಾಸ್ತ್ರಗಳು ಬಹಳಷ್ಟು ಹೇಳಿವೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದಿದ್ದಾರೆ ಪುರಂದರದಾಸರು. ಗುರುವೆಂದರೆ ಅರಿವು. ಗುರುವೆಂದರೆ ಜ್ಞಾನನಿಧಿ. ಅಜ್ಞಾನದ ಗಾಢ ಅಂಧಕಾರದಲ್ಲಿ ಮುಳುಗಿರುವ ಮನುಷ್ಯನಿಗೆ ಜ್ಞಾನವೆಂಬ ಬೆಳಕನ್ನು ನೀಡಿ ಅವನಲ್ಲಿರುವ ಆಂತರಿಕ ಶಕ್ತಿಯನ್ನು ಅರಿಯುವಂತಾಗಲು ಗುರು ಬೇಕು. ಅಂದರೆ ಬ್ರಹ್ಮ ಜ್ಞಾನವನ್ನು ಅರಿತ, ಪರಬ್ರಹ್ಮದ ಅರಿವನ್ನೊಂದಿ ಮುಕ್ತಿಗೆ ಅವಶ್ಯಕವೂ, ಶ್ರೇಷ್ಠವೂ ಆದ ಜ್ಞಾನಮಾರ್ಗವನ್ನು ತಿಳಿಸಿಕೊಡುವ ಸನ್ಮಾರ್ಗದರ್ಶಕರಾದ ಗುರು ಬೇಕು.

ಅಜ್ಞಾನವೆಂಬ ಕತ್ತಲೆಯಲ್ಲಿ ಕಲುಷಿತಗೊಂಡಿರುವ ಮಾನವನನ್ನು ನಿರ್ಮಲಗೊಳಿಸಿ ಜ್ಞಾನವೆಂಬ ಬೆಳಕನ್ನು ನೀಡಿ ಅವನನ್ನು ಸುಜ್ಞಾನಿಯನ್ನಾಗಿ ಮಾಡಲು ಒಬ್ಬ ಸಮರ್ಥ ಗುರು ಬೇಕು. ಶ್ರೀ ಕಬೀರದಾಸರು ಗುರುವಿನ ಮಹಿಮೆನ್ನು ಕುರಿತು ಹೇಳುತ್ತಾರೆ. ಗುರು ಹಾಗೂ ಗೋವಿಂದ ಇಬ್ಬರೂ ನನ್ನ ಮುಂದೆ ನಿಂತಿರೆ ನಾನು ಮೊದಲು ಗುರುವಿಗೇ ನಮಸ್ಕರಿಸುತ್ತೇನೆ. ಏಕೆಂದರೆ ಗೋವಿಂದನೆಡೆಗೆ ಹೋಗಲು ಮಾರ್ಗದರ್ಶನ ತೋರಿದ ಗುರುವೇ ದೊಡ್ಡವನಾದ್ದರಿಂದ ನಾನು ಗುರುವಿಗೇ ನಮಸ್ಕರಿಸುತ್ತೇನೆ ಎಂದಿದ್ದಾರೆ. ಹೌದು, ಶ್ರೀ ಗುರು ಕರುಣೆ ಇಲ್ಲದೇ ಹೋದರೆ ಜ್ಞಾನವಾಗಲಿ ಮುಕ್ತಿಯಾಗಲೀ ದೊರೆಯುವುದಕ್ಕೆ ಸಾಧ್ಯವಾಗುವುದಿಲ್ಲ "ಗುರುವಿನಾ ಜ್ಞಾನ ನಹೀ। ಜ್ಞಾನ ವಿನಾಮುಕ್ತಿ ಕೈಸೀ " ಸಮರ್ಥ ಗುರು ಇಲ್ಲದೇ ಹೋದರೆ ಜ್ಞಾನ ದೊರೆಯುವುದಿಲ್ಲ. ಜ್ಞಾನವೇ ಇಲ್ಲ ಎಂದರೆ ಮುಕ್ತಿ ದೊರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಜ್ಞಾನ,ಮುಕ್ತಿಗೆ ಮೂಲ,ಜ್ಞಾನಕ್ಕೆ, ಗುರುಕಾರಣೀಭೂತ, ಜ್ಞಾನ ಪರಂಪರೆಯನ್ನು ಅನುಸರಿಸುವ ಮೂಲಕ ಮುಕ್ತಿಯನ್ನು ಪಡೆಯುವುದು ಅತ್ಯಂತ ಶ್ರೇಷ್ಠ. ಗುರು ಇಲ್ಲದೇ ಹೋದರೆ ಶಾಸ್ತ್ರ ವಿಹಿತವಾದ ಜ್ಞಾನ ಶಿಷ್ಯನಿಗೆ ದೊರಕುವುದಿಲ್ಲ.ಯಾವಾತ ಶ್ರೀಗುರುವಿನ ಪದತಲದಲ್ಲಿ ಕುಳಿತು ಜ್ಞಾನವನ್ನು ಪಡೆಯುತ್ತಾನೋ ಅಂತಹ ಜ್ಞಾನ ಮುಕ್ತಿಗೆ ದಾರಿ ದೀವಿಗೆಯಾಗುತ್ತದೆ. ಅಂತಹ ಪರಮ ಶ್ರೇಷ್ಠವಾದ ಜ್ಞಾನವನ್ನು ಸಂಪಾದಿಸಲು ಮನುಷ್ಯನಿಗೆ ಸಮರ್ಥರಾದ ಗುರುಗಳ ಆಶ್ರಯ ದೊರೆಯಲೇ ಬೇಕು.

ಗುರುಗಳು ಮನುಷ್ಯನಲ್ಲಿರುವ ದುರ್ಗುಣಗಳನ್ನು ತೊಡೆದು ಸದ್ಗುಣವನ್ನು ಬಿತ್ತಿ ಸಮಾಜವನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತಾರೆ. ಜನತೆ

ಪಾಪಕಾರ್ಯಗಳನ್ನು ಮಾಡದಂತೆ ತಡೆದು ಪುಣ್ಯಕಾರ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಾರೆ. ಮನುಷ್ಯನಲ್ಲಿರುವ ರಾಗದ್ವೇಷಾದಿ ಮಾಲಿನ್ಯವನ್ನು ತೊಡೆದು ಹಾಕುವಂಥ ಸದ್ಗುರು ದೊರೆತಾಗ ಮನುಷ್ಯ ಸನ್ಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ. ಸಮುದ್ರದಲ್ಲಿ ಮುಳುಗುತ್ತಿರುವ ಮನುಷ್ಯನನ್ನು ಪಾರು ಮಾಡಬೇಕಾದರೆ ಹಡಗಿನ ಅಥವಾ ದೋಣಿಯ ನೆರವು ಅಗತ್ಯ. ಅಂತೆಯೇ ಸಂಸಾರವೆಂಬ ಭವ ಬಂಧನದಲ್ಲಿ ಸಿಲುಕಿ ತೊಳಲಾಡುತ್ತಿರುವ








ಮನುಷ್ಯನಿಗೆ ವೈರಾಗ್ಯದ ದಾರಿ ತೋರಿ ಮುಕ್ತಿ ಮಾರ್ಗದತ್ತ ಕರೆದೊಯ್ಯಲು ಶ್ರೀಗುರುವಿನ ಕೃಪಾಕಟಾಕ್ಷ ಬೇಕೇ ಬೇಕು.

ಆಷಾಢ ಶುದ್ಧ ಪೂರ್ಣಿಮೆ 'ಗುರು ಪೂರ್ಣಿಮೆ'ಎಂದೇ ಪ್ರಸಿದ್ಧ. ಇದನ್ನು 'ವ್ಯಾಸ ಪೂರ್ಣಿಮೆ'ಎಂದೂ ಕರೆಯುತ್ತಾರೆ. ಗುರುವಿನ ಕೃತಜ್ಞತೆ ಸಲ್ಲಿಸಲು ವೇದಿಕೆ ಆಗುವ ಆಷಾಢ ಮಾಸದ ಈ ಹುಣ್ಣಿಮೆ ಅತ್ಯಂತ ಪವಿತ್ರ ದಿನ. ಆಷಾಢ ಮಾಸದಲ್ಲಿ ಯಾವುದೇ ಶುಭಕಾರ್ಯಗಳು ನಡೆಯುವುದಿಲ್ಲ. ಆದರೆ ಗುರುವಿಗೆ ಕೃತಜ್ಞತೆ ಸಲ್ಲಿಸುವ ಮಹಾನ್ ಕಾರ್ಯಕ್ಕೆ ಆಷಾಢ ಪೂರ್ಣಿಮೆಯನ್ನೇ ಆರಿಸಿಕೊಂಡದ್ದು ವಿಶೇಷ. ಅಂದರೆ ಗುರು - ಶಿಷ್ಯರ ಸಂಬಂಧ ಅಭಾದಿತ ಎಂಬುದೇ ಇದರರ್ಥ. ಅದು ದೇಶ ಕಾಲಗಳನ್ನು ಮೀರಿ ನಿಂತಿರುವ ಮಹಾ ಸಂಬಂಧ. ಈ ಮಹಾ ಸಂಬಂಧಕ್ಕೆ ವೇದಿಕೆ ಆಗುವುದೇ ಆಷಾಢ ಮಾಸ ಪೂರ್ಣಿಮೆ.ವಿದ್ಯಾದಾನದ ಮೂಲಕ ನಮ್ಮ ಜೀವನವನ್ನು ಸಾರ್ಥಕಗೊಳಿಸಿದ ಗುರುವನ್ನು ಸ್ಮರಿಸುವ ಮಹಾ ದಿನವಿದು.

ಮಾಂಸದ ಮುದ್ದೆಯಂತಿರುವ ಕಂದನಿಗೆ ತಾಯಿ ಮಾತು ಕಲಿಸಿ ಕೊಟ್ಟರೆ ಗುರು ತನ್ನ ಶಿಷ್ಯನಿಗೆ ಬದುಕಿನ ಭವ್ಯತೆಯ ಪಾಠವನ್ನೇ ಕಲಿಸಿ ಕೊಡುತ್ತಾನೆ. ದೇಶವನ್ನು ಕಾಯುವ ಉತ್ತಮ ನಾಗರಿಕರನ್ನಾಗಿಸುತ್ತಾನೆ. ಮಗು ಒಂದು ಶಿಲೆಯಾದರೆ ಗುರು ಒಬ್ಬ ಶಿಲ್ಪಿ . ಆ ಶಿಲೆಯನ್ನು ಕಡೆದು ಅದಕ್ಕೊಂದು ಸುಂದರ ರೂಪ ಕೊಡುವ ಮಹದೇವ ಈ ಗುರು. ಇಂದಿನ ಬಾಲಕರನ್ನು ನಾಳಿನ ನಾಗರಿಕರನ್ನಾಗಿಸುವ ಮಹಿಮರು.ಅವರು ಸಮಾಜದ ಆಸ್ತಿ .ಬದುಕಿನ ದಾರಿ ಕಲಿಸಿಕೊಡುವ ಅಕ್ಷರ ಬ್ರಹ್ಮ ಅವನಿಗೆ ಸರಿಸಾಟಿ ಯಾರು? ಅದಕ್ಕೆ ನಮ್ಮ ಸಮಾಜ ಗುರುಗಳನ್ನು ತ್ರಿಮೂರ್ತಿಗಳ ಸ್ಥಾನದಲ್ಲಿರಿಸಿ ಪೂಜಿಸುತ್ತ ಬಂದಿದೆ. ಅವರಿಗಿಂತ ಗುರು ಶ್ರೇಷ್ಠ. ಏಕೆಂದರೆ ದೇವರ ಮಹಿಮೆಯನ್ನು ಪರಿಚಯ ಮಾಡಿಸಿದವನೇ ಗುರು.

ವಿವೇಕ ಚೂಡಾಮಣಿ ಹೀಗೆ ಹೇಳುತ್ತದೆ. ಗುರುವಿನ ಗುರುತ್ವಕ್ಕೆ ಅಪ್ಪಟ ಸಾಕ್ಷಿ ಶಿಷ್ಯ ಏಕಲವ್ಯ, ಗುರುವಿನ ನೇರ ಸಂಪರ್ಕದಲ್ಲಿ ಇರದಿದ್ದರೂ, ತಾನು ಮನ ಸಾರೆ ಸ್ವೀಕರಿಸಿದ ಗುರುವಿನಲ್ಲಿ ಅಚಲ ಭಕ್ತಿ. ಶ್ರದ್ಧೆಗಳಿದ್ದರೆ ಶಿಷ್ಯ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಏಕಲವ್ಯ ಉತ್ತಮ ಉದಾಹರಣೆ. ಹಸ್ತಿನಪುರದ ಸನಿಹದ ಕಾಡಿನವಾಸಿ. ಹಿರಣ್ಯ ಧನುಷ್ಯನ ಮಗನೇ ಏಕಲವ್ಯ. ಮಗನಿಗೆ ಬಿಲ್ಲುವಿದ್ಯೆಯಲ್ಲಿ ವಿಶೇಷವಾದ ಆಸಕ್ತಿ. ಕಾಡಿನ ಮಧ್ಯ ಬೇಡರ ಕುಲದಲ್ಲಿ ಹುಟ್ಟಿದ ಏಕಲವ್ಯನಿಗೆ ಬಿಲ್ಲುವಿದ್ಯೆ ಕರಗತವಾಗುತ್ತಲೇ ನಡೆದಿತ್ತು ಬಿಲ್ಲುಗಾರಿಕೆಯಲ್ಲಿ ವಿಶೇಷ ಪರಿಣಿತಿಯುಳ್ಳ ಕೌರವ - ಪಾಂಡವರ ಗುರು ದ್ರೋಣಾಚಾರ್ಯರೆಂದರೆ ಈ ಮಗುವಿಗೆ ತುಂಬ ಮೆಚ್ಚುಗೆ ವಿಶ್ವಾಸ. ಒಂದು ದಿನ ಆಚಾರ್ಯರ ಬಳಿಗೆ ಹೋಗಿ ತನ್ನನ್ನು ಶಿಷ್ಯನಾಗಿ ಸ್ವೀಕರಿಸಲು ಕೇಳಿದ. ದ್ರೋಣಚಾರ್ಯ ಒಪ್ಪಲಿಲ್ಲ. ಕಾರಣ ಕೀಳು ಕುಲ ಎಂಬುದು. ಆದರೆ ಏಕಲವ್ಯ ದ್ರೋಣಾಚಾರ್ಯನೇ ತನ್ನ ಗುರು ಎಂದು ಎಂದೋ ನಿರ್ಧರಿಸಿ ಆಗಿತ್ತು. ಗುರುವಿನಿಂದ ತಿರಸ್ಕರಿಸಲ್ಪಟ್ಟ ಏಕಲವ್ಯ ದೃಢ ಮನಸ್ಸಿನಿಂದ ಹಿಂದಿರುಗಿದ. ಗುರು ದ್ರೋಣಾಚಾರ್ಯರ ಮೂರ್ತಿಯೊಂದನ್ನು ಮಾಡಿದ. ಅದಕ್ಕೆ ನಿತ್ಯಪೂಜೆ ಸಲ್ಲಿಸುತ್ತ, ಗುರುವನ್ನು ಮನದಲ್ಲಿ ನೆನೆಯುತ ಸ್ವತಃ ಅಭ್ಯಾಸಕ್ಕೆ ತೊಡಗಿದ. ದಿನದಿಂದ ದಿನಕ್ಕೆ ಅವನು ಬಿಲ್ಲು ವಿದ್ಯೆಯಲ್ಲಿ ಪಾರಂಗತನಾಗುತ್ತ ನಡೆದ. ಹೀಗಿರುವಾಗ ಒಂದು ದಿನ ಪಾಂಡವ ಪುತ್ರರು ಅದೇ ಕಾಡಿಗೆ ಬೇಟೆಗಾಗಿ ಬಂದರು. ಅದೇ ಸಮಯದಲ್ಲಿ ಏಕಲವ್ಯ ಬಿಲ್ಲು ವಿದ್ಯೆಯ ಅಭ್ಯಾಸಕ್ಕೆ ತೊಡಗಿದ್ದ. ಪಾಂಡವರೊಂದಿಗೆ ಬಂದಿದ್ದ ನಾಯಿಯೊಂದು ಒಂದೇ ಸಮನೇ ಬೊಗಳಲಾರಂಭಿಸಿತ್ತು. ಏಕಲವ್ಯ ಏಕಾಗ್ರತೆಗೆ ಭಂಗ ಬಂತು, ತಡೆಯಲಾಗಲಿಲ್ಲ. ನಾಯಿಯು ಬೊಗಳುತ್ತಿದ್ದ ಧ್ವನಿಯನ್ನು ಅನುಸರಿಸಿ ಒಂದರ ಹಿಂದೆ ಒಂದರಂತೆ ಏಳು ಬಾಣಗಳನ್ನು ನಾಯಿಯ ಬಾಯಿಯೊಳಗೆ ತುಂಬಿಸಿ ಅದು ಬೊಗಳದಂತೆ ಮಾಡಿದ. ನಾಯಿ ಬೊಗಳಲಾಗದೇ ಕುಂಯಿಗುಡುತ್ತಾ ಪಾಂಡವರ ಬಳಿ ಬಂತು. ಅದನ್ನು ನೋಡಿದ ಪಾಂಡವರು ವಿಸ್ಮಯಗೊಂಡರು. ಅರ್ಜುನನಿಗಂತೂ ತಡೆಯಲಾಗಲಿಲ್ಲ. ಈ ಅಸಾಮಾನ್ಯ ಬಿಲ್ಲುಗಾರ ಯಾರೆಂದು ಹುಡುಕಿಕೊಂಡು ಹೋದರು. ಏಕಲವ್ಯ ಬಿಲ್ಲು ವಿದ್ಯೆಯ ಅಭ್ಯಾಸದಲ್ಲಿ ತೊಡಗಿದ್ದ. ಅರ್ಜುನ "ನಿನ್ನ ಗುರು



ಯಾರು? ಎಂದು ಪ್ರಶ್ನಿಸಿದ. ''ದ್ರೋಣಾಚಾರ್ಯ' ಎಂದು ಅಲ್ಲಿರುವ ದ್ರೋಣಾಚಾರ್ಯರ ಮೂರ್ತಿಯನ್ನು ಪಾಂಡವರು ನೋಡಿದರು. ಹೌಹಾರಿದರು, ಅರ್ಜುನನಿಗೆ ' ಈ ಭೂಮಿಯ ಮೇಲೆ ಬಿಲ್ಲು ವಿದ್ಯೆಯಲ್ಲಿ ನಿನ್ನನ್ನು ಮೀರಿಸುವವರು ಯಾರು ಇಲ್ಲ ಎಂದು ಹೇಳಿದ್ದ ದ್ರೋಣಾಚಾರ್ಯರ ಮಾತು ನೆನಪಾಯಿತು. ಮತ್ಸರ ಬೆಳೆಯಿತು. ಗುರುವಿನ ಮುಂದೆ ಆಲವತ್ತು ಕೊಂಡು ಅರ್ಜುನ. ಗುರು ದ್ರೋಣಾಚಾರ್ಯ ಬಂದು ನೋಡುತ್ತಾರೆ. ಅವರದೇ ಮೂರ್ತಿಯ ಪೂಜೆಯಲ್ಲಿ ಏಕಲವ್ಯ ತೊಡಗಿದ್ದ. ಆಚಾರ್ಯರು ಮನದಲ್ಲೇ 'ಭಲೇಶಿಷ್ಯ' ಅಂದು ಕೊಂಡರು. ಆದರೆ ಅರ್ಜುನನಿಗೆ ಕೊಟ್ಟ ಮಾತು ಉಳಿಸಿಕೊಳ್ಳಬೇಕಲ್ಲವೇ? ದ್ರೋಣರು ಏಕಲವ್ಯನನ್ನು ಕರೆದು ಹೇಳಿದರು. ಗುರುದಕ್ಷಿಣೆ ಕೊಡುವಿಯಾ? ಏಕಲವ್ಯ ಸಂತಸದಿಂದ ಉಬ್ಬಿ 'ಕೇಳಿ ಗುರುವರ್ಯ. ನಿಮಗೆ ಬೇಕಾದುದನ್ನು ತಕ್ಷಣ ಕೊಡುತ್ತೇನೆ' ದ್ರೋಣಾಚಾರ್ಯ ಒಲ್ಲದ ಮನಸ್ಸಿನಿಂದ ಭಾರವಾದ ಧ್ವನಿಯಿಂದ ಕೇಳಿದ - ನಿನ್ನ ಬಲಗೈ ಹೆಬ್ಬೆರಳನ್ನು ಕತ್ತರಿಸಿ ಕೊಡು'' ಏಕಲವ್ಯನಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. 'ಬಿಲ್ಲುಗಾರಿಕೆಯೇ ನನ್ನ ಉಸಿರು. ಅದಕ್ಕೆ ಬಳಕೆ ಆಗುವುದೇ ಹೆಬ್ಬೆರಳು. ಅದೇ ಇಲ್ಲವೆಂದ ಮೇಲೆ ಬದುಕಿದ್ದರೂ ಸತ್ತಂತೆಯೇ. ಆದರೆ ಗುರುದಕ್ಷಿಣೆಯಿಂದ ಹಿಂದೆ ಸರಿಯುವುದೇ? ಇದು ಗುರುವಿಗೆ ಅಪಚಾರ ಮಾಡಿದಂತೆ ಅಲ್ಲವೇ? ಮರುಕ್ಷಣವೇ ಸೊಂಟದಲ್ಲಿ ಕತ್ತಿಯನ್ನು ತೆಗೆದ. ತನ್ನ ಬಲಗೈ ಹೆಬ್ಬೆರಳನ್ನು ಕತ್ತರಿಸಿದ. ಗುರುವಿನ ಪಾದಗಳಡಿ ಇರಿಸಿದ. ದ್ರೋಣರ ಕಂಗಳಿಂದ ಕಂಬನಿ ಸುರಿದವು. ನಮ್ಮದು ಅವಿಚ್ಛಿನ್ನವಾದ ಗುರು-ಶಿಷ್ಯ ಪರಂಪರೆ. ಮನಸ್ಸಿನಲ್ಲಿ ಧ್ಯಾನಿಸಿದರೂ ಸಾಕು ಗುರು ಸನ್ಮಾರ್ಗದರ್ಶಿ ಆಗುತ್ತಾನೆ.

### ಸರ್ವಗುರು ವೇದವ್ಯಾಸ

ಗುರು ಪೂರ್ಣಿಮೆಯನ್ನು ವ್ಯಾಸಪೂರ್ಣಿಮಾ ಎಂದು ಕರೆಯುತ್ತಾರೆ. ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಗುರು ಪರಂಪರೆಗೆ ಪೂಜೆ ಸಲ್ಲಿಸುವ ಅಮೋಘ ದಿನವಿದು. ಆಚಾರ್ಯ ಪರಂಪರೆಯಲ್ಲಿ ಅಗ್ರಗಣ್ಯರು ವ್ಯಾಸಮಹರ್ಷಿಗಳು. ಶ್ರೀಮದ್‌ಭಾಗವತ, ಮಹಾಭಾರತ ವೇದ ವಿಂಗಡನೆ,ಬ್ರಹ್ಮಸೂತ್ರಾದಿಗಳಂತಹ ಅಪೂರ್ವ ಜ್ಞಾನವಾರಿಧಿ ಗ್ರಂಥಗಳನ್ನು ರಚಿಸಿ, ಭಾರತೀಯ ಸಂಸ್ಕೃತಿಯ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳನ್ನು ಎತ್ತಿ ಹಿಡಿದು, ಅವುಗಳ ನಿರಂತರತೆಗೆ ಚೈತನ್ಯ ತುಂಬಿದ ಮಹಾಜ್ಞಾನಿಗಳು. ಜ್ಞಾನಿರಾಶಿಗಳಾದ ವೇದಗಳನ್ನು ಸುಸಂಬದ್ಧವಾಗಿ ಅಧ್ಯಯನ ಮಾಡಲು ಅನುಕೂಲವಾಗುವಂತೆ 'ಋಗ್,ಯಜು,ಸಾಮ,ಅಥರ್ವಗಳೆಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಿ ವೇದವ್ಯಾಸರೆನಿಸಿಕೊಂಡವರು. ಅವರು ರಚಿಸಿದ ನಮ್ಮ ಮಹಾಕಾವ್ಯ ಮಹಾಭಾರತವೂ ಪಂಚಮ ವೇದ ಎಂದು ಕರೆಯಿಸಿಕೊಂಡದ್ದು ಅವರ ಅಮೋಘ ಜ್ಞಾನಕ್ಕೆ ಸಾಕ್ಷಿ. ಮಾನವ ಕುಲ ಕೋಟಿಯನ್ನು ಉದ್ಧಾರ ಮಾಡಲೆಂದೇ ಬರೆದ ಪಂಚಮವೇದ ಒಂದು ಲಕ್ಷ ಶ್ಲೋಕಗಳಿಂದ ಕೂಡಿದೆ. ನೈತಿಕ ತತ್ವಗಳ ಅಪೂರ್ವ ರೋಚಕ ಕಥಾನಕಗಳ ಭಾಗವತವೂ ಅವರ ಪಾಂಡಿತ್ಯಕ್ಕೆ ಹಿಡಿದ ಕನ್ನಡಿ. ಇಷ್ಟೇ ಅಲ್ಲ ಭಾಗವತ ಸೇರಿದಂತೆ 18 ಪುರಾಣಗಳನ್ನು ನೀಡಿದ ಲೋಕ ಗುರು ವೇದವ್ಯಾಸರು. ಇಂತಹ ಮಹಿಮರನ್ನು ಪುಣ್ಯಾತ್ಮರನ್ನು ಕೃತಜ್ಞತೆಯಿಂದ ನೆನೆಯುವುದೇ ವ್ಯಾಸಪೂರ್ಣಿಮೆ ಆಚರಣೆಯ ಮೂಲ ಉದ್ದೇಶ.

ವ್ಯಾಸರು ಧರ್ಮಶಾಸ್ತ್ರ ಕೋವಿದರಾದ ಪರಾಶರ ಮಹರ್ಷಿಗಳ ಸುಪುತ್ರ ಪರಾಶರರು ಒಂದು ದಿನ ಯಮುನಾ ನದಿಯನ್ನು ದಾಟಿ ಆಚೆಯ ಊರಿಗೆ ಕಾರ್ಯನಿಮಿತ್ತ ಹೋಗಲು ದೋಣಿ ಏರಿ ಕುಳಿತರು. ದಶರಾಜ ಎಂಬ ನಾವಿಕ ಜನರನ್ನು ಧರ್ಮಾರ್ಥವಾಗಿ ನಿತ್ಯ ನದಿ ದಾಟಿಸುತ್ತಿದ್ದ. ಅಂದು ಅವನಿಗೆ ಬೇರೆ ಕೆಲಸವಿದ್ದುದ್ದರಿಂದ ಅವನ ಮಗಳು ಸತ್ಯವತಿ ದೋಣಿ ನಡೆಸಲು ಬಂದಿದ್ದಳು. ಅವಳನ್ನು ಮತ್ಸ್ಯಗಂಧಿ ಎಂದೂ ಕರೆಯುತ್ತಿದ್ದರು. ಅವಳು ಆಕಸ್ಮಿಕವಾಗಿ ಪರಾಶರರನ್ನು ನೋಡಿ ಮೋಹಿತಳಾದಳು. ಪರಾಶರ ಮಹರ್ಷಿಗಳಿಗೂ ಅವಳಲ್ಲಿ ಅನುರಾಗ ಉಂಟಾಯಿತು.ಮನಸ್ಸು-ಮನಸ್ಸುಗಳ ಸಮಾಗಮವಾಯಿತು. ಅಷ್ಟಕ್ಕೇ ಆಕೆ ಗರ್ಭವತಿ ಆಗದೇ ಪುತ್ರವತಿ ಆದಳು. ಆ ಸುಪುತ್ರರೇ ವ್ಯಾಸರು, ಹುಟ್ಟುತ್ತಲೆ ದೊಡ್ಡವರಾದರು.ತಂದೆಯಿಂದಲೇ ವೇದ,ವೇದಾಂತ, ಧರ್ಮಶಾಸ್ತ್ರಗಳನ್ನು ಕಲಿತರು. ಮಗನು ಸರ್ವವಿದ್ಯಾಪಾರಂಗತರಾದ ಮೇಲೆ ತಂದೆ ತಪಸ್ಸು ಮಾಡಲು ಹಿಮಾಲಯದತ್ತ ಪ್ರಯಾಣ ಬೆಳೆಸುತ್ತಾರೆ. ಮಗನೂ ತಂದೆಯನ್ನೂ ಹಿಂಬಾಲಿಸಿ ಬದರಿಯವರೆಗೂ ಬಂದು, ಅಲ್ಲಿಯೇ ನೆಲೆಸಿ ವೇದಗಳನ್ನು 4 ಭಾಗಗಳಾಗಿ ವಿಂಗಡಿಸುತ್ತಾರೆ. ಅವರ ಕೃತಿಗಳೆಲ್ಲಾ ಇಲ್ಲಿಯೇ ಜನ್ಮತಾಳಿದವು. ಬದರಿಯಲ್ಲಿ ಅವರಿದ್ದ ಗುಹೆ 'ವ್ಯಾಸಗುಹೆ'ಎಂದು ಈಗಲೂ ಹೆಸರಾಗಿದೆ.ಇಂತಹ ಜ್ಞಾನವಾರಿಧಿ ಕಾರ್ಯವನ್ನು ಅವರು ಪೂರ್ಣಗೊಳಿಸಿದ್ದ ಮಹಾ ಸುದಿನವೇ ಆಷಾಢ ಹುಣ್ಣಿಮೆಯ ದಿನ. ಅದಕ್ಕೆ ಇದನ್ನು ವ್ಯಾಸ ಪೂರ್ಣಿಮಾ ಎಂದು ಕರೆಯುತ್ತಾರೆ.



ಧಾರಾವಾಹಿ

ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# “ಅನುದಿನ ಭವಾಬ್ಧಿಯಲ್ಲಿ ಭವತರಂಗ ರಾಶಿಯಲ್ಲಿ”

## ಆತ್ಮನೀವೇದನೆ ಕೀರ್ತನೆಯ ಒಳನೋಟ

– ಡಾ|| ಸುಭಾಸ ಕಾಖಂಡಕಿ
7975442458

ದಾಸರು ಈ ಕೀರ್ತನೆಯಲ್ಲಿ, ಮನುಷ್ಯಜೀವಿ, ಈ ಭೂಮಿಯ ಮೇಲೆ ಜನ್ಮತಳೆದು ಬಂದಗಳಿಗೆಯಿಂದಲೇ, ಸಂಸಾರ ಸಾಗರದ, ಲೌಕಿಕ ಬಂಧನಗಳ ಸಾಗರದಲ್ಲಿ ಬಿದ್ದು ಒದ್ದಾಡುವಾಗ ಹೇಗೆ ದಡಸೇರಲು ದಾರಿ ಕಾಣದೆ, ಸಂಕಟದಿಂದ ತಾಪ ಪಡುತ್ತಾನೆ, ಮತ್ತು ದಡ ಸೇರುವ ಪರಿಹಾರದ ಹಾದಿಗೆ, ಆ ಸರ್ವೋತ್ತಮನಾದ ಭಗವಂತನನ್ನೇ ಮೊರೆ ಹೋಗಬೇಕು ಎನ್ನುವ ಸಂದೇಶವನ್ನು ಕೊಡುತ್ತ, ಇಲ್ಲಿ ತಮ್ಮನ್ನು ತಾವೇ ಭವತಾಪ ಪಡುವ ಜೀವಿಯಾಗಿ ಸಂಬೋಧನೆಗೊಂಡು, ಭಗವಂತನನ್ನು ಮೊರೆಹೋಗುವ ಒಂದು ಮಾರ್ಗ ತೋರಿಸಿದ್ದಾರೆ. ಇದು ಎಲ್ಲ ಮನುಷ್ಯ ಜೀವಿಗಳಿಗೂ ಅನ್ವಯವಾಗುವ ರೀತಿಯಲ್ಲಿದೆ.

ಅನುದಿನ ಭವಾಬ್ಧಿಯಲ್ಲಿ ಭವತರಂಗ ರಾಶಿಯಲ್ಲಿ
ಮುಳುಗುತಿಹೆ ಕೈಯ ಪಿಡಿಯೊ ಜನಕ ಕೃಷ್ಣಯ್ಯ ||ಪ||

ದಾಸರು ಇಲ್ಲಿ ‘ಹೇ! ಭಗವಂತ ನನ್ನ ಜನ್ಮಕ್ಕಂಟಿಕೊಂಡು ಬಂದ ಈ ಭವ ಬಂಧನದಲ್ಲಿ ದಿನ-ದಿನವೂ ಕ್ಷಣ-ಕ್ಷಣಕ್ಕೂ ಇಂಥಹ ಭವದ-ಸಾಗರದಲ್ಲಿ ಮುಳುಗಿ ಮುಳಗಿ ಎಳುತ್ತಿರುವೆ. ಇದರಿಂದ ನನ್ನನ್ನು ಪಾರು ಮಾಡುವ ಪರಮಾಪ್ತ ಬಂಧು ನೀನೆ ಕೃಷ್ಣ, ನನ್ನನ್ನು ಕೈ ಹಿಡಿದು ಕಾಪಾಡು” ಎಂದಿದ್ದಾರೆ.

**ನುಡಿ - 1 ರಲ್ಲಿ -**

ಶ್ರೀನಿವಾಸ ನಿನ್ನ ಭಕ್ತಿ ಮಾಡದ ಅಘವಂತನೆಂದು
ಹೀನ ಜನರ್ಪಾಳಕಿಟ್ಟರೇನು ಹೇಳಲೊ
ನೀನು ಪಾಲಿಪ ರಾಜ್ಯದಲ್ಲಜ್ಞಾನಿ ದೇಶಿಗನೊಬ್ಬ ಕೆಡಲು
ಹಾನಿ ಹೆಚ್ಚಳ ನಿನ್ನದಲ್ಲೆ ದೀನ ದಯಾಳು ||1||

ಈ ನುಡಿಯಲ್ಲಿ ದಾಸರು ಆತ್ಮನಿವೇದನೆ ಸಂದೇಶದ ಜೊತೆಗೆ ಲೋಕನೀತಿ ಸಂದೇಶವನ್ನು ನೀಡಿದ್ದಾರೆ. ಮೊದಲು ಆತ್ಮ ನಿವೇದನೆ ದೃಷ್ಟಿಕೋನದಲ್ಲಿ ಅರ್ಥೈಸೋಣ.“ ಸ್ವಾಮಿ ಶ್ರೀನಿವಾಸ! ನಾನು ನಿನ್ನಲ್ಲಿ ಭಕ್ತಿಯನ್ನು ಮಾಡದೆ, ನಿನ್ನ ಭಕ್ತನೆಂದು ಅನಿಸಿಕೊಳ್ಳದ ಪರಮಪಾಪಿ (ಅಘವಂತ), ಅನೇಕ ತಪ್ಪುಗಳನ್ನು ಮಾಡಿದೆನೆಂದು ನನ್ನನ್ನು ಹೀನಜನರೊಳಗೆ ಇಟ್ಟರೇನು ಹೇಳಲೋ ಸ್ವಾಮಿ,

ನೀನು ಪಾಲಿಸುವ ರಾಜ್ಯದಲ್ಲಜ್ಞಾನಿ ದೇಶಿಗ (ಪರದೇಶಿ ಪ್ರಜೆ)ನೊಬ್ಬ ಕೆಡಲು ನಿನಗೆ ಹಾನಿಯಲ್ಲವೇ?” ಎಂದು ತಮ್ಮನ್ನು ತಾವೇ ಸಂಬೋಧಿಸಿ ಆತ್ಮನೀವೇದನೆ ಮಾಡಿಕೊಂಡಿದ್ದಾರೆ. ಇನ್ನು ಲೋಕನೀತಿ-ದೃಷ್ಟಿಯಲ್ಲಿ ಅರ್ಥೈಸಿದರೆ- “ನಾನು ಅನೇಕ ತಪ್ಪುಗಳನ್ನು ಮಾಡಿದವನೆಂದು ಹೀನನೆಂದು ಪರಿಗಣಿಸಿ ಪರೀಕ್ಷೆಗೆ ಒಡ್ಡಬೇಡ ಸ್ವಾಮಿ ಜಗ ದೊಡೆಯನಾದ ನೀನು ಪಾಲಿಸುವ ಇಂಥ ರಾಜ್ಯದಲ್ಲಿ ಒಬ್ಬ ಜ್ಞಾನವಂತ ಕೆಡಲು ಇಡಿ ಜನಮನವೆ ಕೆಟ್ಟು ಪರಿತಾಪದಿಂದ ಹಾನಿಗೊಳಗಾಗಿ ಸಮಾಜದಲ್ಲಿ ಆಗುವ ಸಂಕಷ್ಟವನ್ನು ತಪ್ಪಿಸುವ ಭಾರ ನಿನ್ನದು ದಯಾಳು ಶ್ರೀಹರಿಯೇ ಎನ್ನುವ ಅರ್ಥವನ್ನೂ ಮಾಡಬಹುದು.

**ನುಡಿ - ೨ ರಲ್ಲಿ**

ಚಿತ್ತ ವೇಗಕ್ಕೆ ವಧಿ ಇಲ್ಲ ಹೊತ್ತು ಕೊಂಡು ಕಂಡಕಡೆಗೆ
ಸುತ್ತುತಿದೆ ತನ್ನ ದಳವ ಕೂಡಿ ರಂಗಯ್ಯ.

ಕರ್ತನಿನ್ನ ಪಾದದೆಡೆಗೆ ಒತ್ತಿ ನೀನದನಾಳಬೇಕು
ಹೆತ್ತ ತಾಯಿ ನೀನೆ ಗಡಾನೆತ್ತಿಕೊಳ್ಳಯ್ಯ ॥2॥

ಇಲ್ಲಿ ದಾಸರು, ಬಹಳ ಸಂದರ್ಭೋಚಿತವಾದ ಸುಂದರ ಉಪಮೇಯನ್ನು ಕೊಡುತ್ತ, ತಮ್ಮ ಮನಸ್ಥಿತಿಯನ್ನು ತಾವೇ ಅಲವತ್ತು ಕೊಳ್ಳುತ್ತ ಭಗವಂತನಲ್ಲಿ ಅತಿಹಂಬಲದಲ್ಲಿ ಕೇಳಿ ಕೊಳ್ಳುತ್ತಿದ್ದಾರೆ.

"ಹೇ! ಭಗವಂತ ಈ ಮನಸ್ಸಿನ ವೇಗಕ್ಕೆ ಮಿತಿಯಿಲ್ಲ, ಅವಧಿಯ ಗತಿಯನ್ನು ಮೀರಿ, ಈ ಚಿತ್ತ ಎಲ್ಲೆಲ್ಲೊ ಸುತ್ತಿ ಕೊಳ್ಳುತ್ತ ತನ್ನ ಸುಳುವಿನಲ್ಲಿ ತಾನೇ ಸಿಕ್ಕಿ ಹಾಕಿ ಕೊಳ್ಳುತ್ತಿದೆ. ನನ್ನ ಕೈಗೆ ಸಿಗದೆ ಮಿತಿ ಇಲ್ಲದೆ ಓಡುತ್ತಿದೆ.ರಂಗಯ್ಯ-ಎಲ್ಲ ಚರಾಚರ ಜೀವಿಗಳ ಚಲನೆಗೆ ಕರ್ತನಾದ ನೀನು,ಗುರಿಯಿಲ್ಲದೆಡೆ ಓಡುತ್ತಿದ್ದ ಈ ಮನಸ್ಸನ್ನು ನಿನ್ನ ಪಾದದೆಡೆಗೆ ಚಲಿಸುವಂತೆ ಮಾಡಿ ಅದನ್ನು ಅಲ್ಲಿಯೇ ಸ್ಥಿರವಾಗಿ ನಿಲ್ಲಿಸಿ,ಹೆತ್ತ ತಾಯಿಯಂತೆ ಅದನ್ನು ಎತ್ತಿ ಕೊಂಡು ನಿನ್ನ ಅಧೀನದಲ್ಲಿ ಇಟ್ಟಿಕೋ ಸ್ವಾಮಿ" ಎಂದು ಪ್ರಾರ್ಥಿಸಿದ್ದಾರೆ.

ಇನ್ನು ಕೊನೆಯ ನುಡಿಯಲ್ಲಿ -

ಹುಳುವಿನೊಳು ದಾರಿಕಾಣಿ ಸೆಳವಿನೊಳಾಶ್ರಯವ ಕಾಣೆ
ನಳಿನ ನೇತ್ರ ನೀನೆ ಕಾಯೋ ಸುಲಭರೊಡೆಯ
ನೆಲೆಯ ತೋರಾತಂಕಹಾರಿ ಒಲಿದು
ವರಾಭಯವ ಬೀರಿ
ಒಲಿಯೋ ಪ್ರಸನ್ವೆಂಕಟಾದ್ರಿನಿಲಯ ಉದಾರಿ ॥3॥

ದಾಸರು ಇಲ್ಲಿ-ಮತ್ತೆ-ಮತ್ತೆ ತಮ್ಮ ಅಂತರಂಗ ಪರಾಭವದ ಸ್ಥಿತಿಯನ್ನು ಹೇಳಿಕೊಳ್ಳುತ್ತಾರೆ. ಸುಳಿಯಲ್ಲಿ ಸಿಕ್ಕ ನನಗೆ ದಾರಿ ಕಾಣದಾಗಿದೆ. ಭವದ ಅಂಬುಧಿಯ ಸೆಳೆವಿನಲ್ಲಿ ತೇಲಿ ಕೊಂಡು ಹೋಗುತ್ತಿದ್ದೇನೆ.ಸ್ವಾಮಿ ! ನನ್ನ ಕೈ ಹಿಡಿದು ನಡೆಸುವ ಯಾವ ಆಶ್ರಯವು ಕಾಣುತ್ತಿಲ್ಲ. ಎಲ್ಲ ಭೂಮಂಡಲವನ್ನು ನಿನ್ನ ನೇತ್ರಗಳಿಂದ ಕಾಯ್ದುಕೊಳ್ಳುವ ಸ್ವಾಮಿ ನೀನು, ನಂಬಿದವರಿಗೆ ಸುಲಭವಾಗಿ ಕೈಹಿಡಿದು ನಡೆಸುವ ಜಗದೊಡೆಯನೆ ನನ್ನ ನೆಲೆಯನ್ನು ತೋರಿ, ನನ್ನನ್ನು ಕೈ ಹಿಡಿದು ಎತ್ತಿ ಸಂರಕ್ಷಣ ಮಾಡು ಶ್ರೀಹರಿಯೋ " ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



# ದಿನಚರ್ಯೆ - ಆಯುರ್ವೇದದ ಆರೋಗ್ಯ ಸೂತ್ರ

ಡಾ॥ ಎಸ್.ಬಿ.ಎ.ಸಂಧ್ಯಾ
94495 05577

**ದಂತ ಭಾವನ ೧**

**ವೈದ್ಯ:** ಏನೋ ವಿವೇಕ, ಎಲ್ಲಿಗೆ ಹೊರಟೆ?

**ವಿವೇಕ:** ಅಯ್ಯೋ, ಅದಾ ಡಾಕ್ಟರೆ, ನಮ್ಮ ತಾತ ಇದ್ದಾರಲ್ಲಾ ಅವರಿಗೆ ಡಯಾಬಿಟೀಸ್ ಟೂಕ್ ಪೇಸ್ಟ್ ಬೇಕಂತೆ, ಅದನ್ನು ತರಲು ಅಂಗಡಿಗೆ ಹೋಗುತ್ತಾಯಿದ್ದೀನಿ.

**ವೈದ್ಯ:** ಅದೇ ಈಗ ಹೊಸದಾಗಿ ಮಾರುಕಟ್ಟೆಗೆ ಬಂದಿದ್ಯಲ್ಲಾ ಅದಾ॥

**ವಿವೇಕ:** ಹೌದು, ಅದೇ ಪೇಸ್ಟು, ಏನು ಡಾಕ್ಟರೆ, ಆ ಪೇಸ್ಟ್ ಏನು ಮಧುಮೇಹನ ವಾಸಿ ಮಾಡುತ್ತಾ?

**ವೈದ್ಯ:** ಅದು ಮಧುಮೇಹವನ್ನು ಕಮ್ಮಿ ಮಾಡಲ್ಲಾ, ಡಯಾ ಬಿಟೀಸ್ ಇರುವವರಿಗೆ ಆಗುವ ಒಸಡಿನ ತೊಂದರೆಯನ್ನು ಹತೋಟಿಗೆ ತರುತ್ತದೆ ಎಂದು ಕಂಪನಿಯವರು ಹೇಳುತ್ತಾರೆ.

**ವಿವೇಕ:** ಇದು ಎಷ್ಟು ನಿಜಾ !! ಅಷ್ಟಲ್ಲದೇ ಒಸಡುಗಳಿನ ತೊಂದರೆ ಮಧುಮೇಹಿಗಳಿಗಷ್ಟೇ ಅಲ್ಲದೆ, ಬೇರೆಯವರಿಗೂ ಆಗಬಹುದು ಅಲ್ಲವಾ?

**ವೈದ್ಯ:** ಎಷ್ಟು ಸಮಂಜಸವಾದ ಪ್ರಶ್ನೆ ಕೇಳಿದೆ, ಇದಕ್ಕೆ ಉತ್ತರ ನಾವು ನಡೆಸುತ್ತಿದ್ದ ದಿನಚರ್ಯೆಯ ಸಂಭಾಷಣೆಯನ್ನು ಮುಂದುವರಿಸಿದರೆ ಸಿಗುತ್ತದೆ.

**ವಿವೇಕ:** ಹೌದಲ್ಲವಾ.... ಬೆಳಗ್ಗಿನ ನಿತ್ಯ ಕರ್ಮವಾದ ನಂತರ ಹಲ್ಲನ್ನು ತಾನೆ ನಾವು ಉಜ್ಜುವುದು , ಇವತ್ತು ಇದರ ಬಗ್ಗೆ ನನಗೆ ತಿಳಿಸಿ.

**ವೈದ್ಯ:** ಹಲ್ಲನ್ನು ಉಜ್ಜುವ ಕ್ರಿಯೆಗೆ ದಂತಧಾವನ ಎಂದು ಆಯುರ್ವೇದ ಶಾಸ್ತ್ರದಲ್ಲಿ ತಿಳಿಸಿದ್ದಾರೆ. ದಂತ ಎಂದರೆ ಹಲ್ಲು, ಧಾವನ ಎಂದರೆ ತೊಳೆಯುವುದು ಎಂದು ಅರ್ಥ. ಬೆಳಗ್ಗೆ ಎದ್ದ ಮೇಲೆ ನಿತ್ಯ ಕರ್ಮ ಮಾಡಿ ಹಲ್ಲು, ಒಸಡು, ನಾಲಿಗೆಗಳನ್ನು ಉಜ್ಜಬೇಕು.

**ವಿವೇಕ:** ಆಗೇನು ಈಗಿನ ತರಹ ಟೂತ್ ಪೇಸ್ಟ್, ಟೂತ್ ಬ್ರಶ್ ಇತ್ತಾ!! ಕೈಯಲ್ಲಿ ತಾನೆ ಹಲ್ಲನ್ನು ಉಜ್ಜುತ್ತಿದ್ದರು.

**ವೈದ್ಯ:** ನಿನಗೆ ಆಶ್ಚರ್ಯವಾಗಬಹುದು. ಆದರೆ ಯೋಗರತ್ನಾಕರ ಎಂಬ ನಮ್ಮ ಆಯುರ್ವೇದ ಗ್ರಂಥದಲ್ಲಿ ಟೂತ್ ಬ್ರಶ್ ಬಗ್ಗೆ ಅಷ್ಟೇ ಅಲ್ಲದೇ ಅದು ಎಷ್ಟು ದಪ್ಪ, ಎಷ್ಟು ಉದ್ದ ಇರಬೇಕು ಎಂಬ ಅಳತೆಯನ್ನು ಹೇಳಿದ್ದಾರೆ.

**ವಿವೇಕ:** ಹೌದಾ !!

**ವೈದ್ಯ:** ಎಕ್ಕ, ಆಲ, ಮತ್ತಿ, ಹೊಂಗೆ ಹೀಗೆ ಕಹಿ, ಖಾರ ಮತ್ತು ಒಗಚು ರಸ (ರುಚಿ)ಗಳುಳ್ಳ ಮರಗಳ ಕಡ್ಡಿಗಳನ್ನು ಹಲ್ಲನ್ನು ಉಜ್ಜಲು ಬಳಬೇಕು. ಇವುಗಳು ೧೨ ಅಂಗುಲ ಉದ್ದ ಮತ್ತು ಕಿರುಳು ಬೆರಳಿ ನಷ್ಟು ದಪ್ಪ ಇರಬೇಕು. ಕಡ್ಡಿಯ ಒಂದು ತುದಿಯನ್ನು ಜಜ್ಜಿ



**ಹಲ್ಲನ್ನು ಉಜ್ಜುವ ಕ್ರಿಯೆಗೆ ದಂತಧಾವನ ಎಂದು ಆಯುರ್ವೇದ ಶಾಸ್ತ್ರದಲ್ಲಿ ತಿಳಿಸಿದ್ದಾರೆ. ದಂತ ಎಂದರೆ ಹಲ್ಲು, ಧಾವನ ಎಂದರೆ ತೊಳೆಯುವುದು ಎಂದು ಅರ್ಥ.**











ಕುಂಚದಂತೆ ಮಾಡಿ, ಈ ಭಾಗದಿಂದ ಹಲ್ಲನ್ನು ಉಜ್ಜಬೇಕು. ಈ ಕಡ್ಡಿಗಳು ನೀಳವಾಗಿ ಗಂಟಲ್ಲದೇ ಇರಬೇಕೆಂದು ಒತ್ತಿ ತಿಳಿಸಿದ್ದಾರೆ.

**ವಿವೇಕ:** ಬ್ರಶ್ ಬಗ್ಗೆ ಏನೋ ಆಯಿತು ಮತ್ತೆ ಪೇಸ್ಟ್‌ಟು?

**ವೈದ್ಯ:** ಅದರ ಬಗ್ಗೆಯೂ ಉಲ್ಲೇಖವಿದೆ, ದಾಲಚಿನ್ನಿ, ಶುಂಠಿ, ಮೆಣಸು, ಹಿಪ್ಪಲಿ ಮತ್ತು ಉಪ್ಪು, ಕೆಲವು ಕಹಿ, ಖಾರ ಮತ್ತು ಒಗಚು ರಸ ಪ್ರಧಾನವಾದ ಗಿಡ ಮೂಲಿಕೆಗಳ ಸೂಕ್ಷ್ಮ ಚೂರ್ಣ ವನ್ನು ಜೇನು ಅಥವಾ ಎಳ್ಳೆಣ್ಣೆಯೊಂದಿಗೆ ಬೆರಸಿ ಪೇಸ್ಟ್‌ನ ರೀತಿ ಕಡ್ಡಿಯ ಬ್ರಶ್ ಮೇಲೆ ಹಾಕಿ ಹಲ್ಲನ್ನು ಉಜ್ಜಲು ತಿಳಿಸಿ ದ್ದಾರೆ.

**ವಿವೇಕ:** ಅದೇನು ಡಾಕ್ಟರೆ ಪದೇ ಪದೇ ಕಹಿ, ಖಾರ ಒಗಚು ರುಚಿ ಅಂತ ಹೇಳ್ತಾನೇ ಇದ್ದೀರಾ?

**ವೈದ್ಯ:** ಇದರಲ್ಲಿ ಒಂದು ವೈಜ್ಞಾನಿಕ ಅಂಶವಿದೆ. ಈಗ ಸಾಧಾ ರಣವಾಗಿ ಬಾಯಿಯ ವಾತಾವರಣ ಹೇಗಿರುತ್ತದೆ?

**ವಿವೇಕ:** ಹೇಗಿರುತ್ತದೆ ಅಂದ್ರೆ, ಬಾಯಿಯಲ್ಲಿ ಯಾವಾಗಲೂ ಜೊಲ್ಲು ಇರುವುದರಿಂದ ಸ್ವಲ್ಪ ಸಿಹಿ ರುಚಿಯಿರುತ್ತದೆ ಮತ್ತು ತೇವಾಂಶ ಹೆಚ್ಚಾಗಿದ್ದು, ಅಂಟಿನ ರೀತಿ ಇರುತ್ತದೆ.

**ವೈದ್ಯ :** ಸರಿಯಾಗಿ ಹೇಳಿದೆ. ಬಾಯಿಯು ಕಫ ದೋಷ ಪ್ರಧಾನವಾದ ಭಾಗ,ಇಲ್ಲಿರುವ ಸಿಹಿರುಚಿ ಅಂಟುಗಳು ಹೋಗ ಬೇಕೆಂದರೆ, ಕಫ ದೋಷವನ್ನು ಹೋಗಲಾಡಿಸುವ ಸಿಹಿಗೆ ವಿರುದ್ಧವಾದ ಕಹಿ,ಖಾರ,ಒಗಚು ರಸ, (ರುಚಿ) ಪ್ರಧಾನವಾದ ದ್ರವ್ಯಗಳನ್ನು ಉಪಯೋಗಿಸಬೇಕು.

**ವಿವೇಕ:** ಈಗಿನ ಕಾಲದಲ್ಲಿ ಕಡ್ಡಿಯನ್ನೆಲ್ಲಾ ಎಲ್ಲಿಂದ ತರುವುದು, ದಿನದಲ್ಲಿ ಇದನ್ನೆಲ್ಲಾ ಹೇಗೆ ಮಾಡುವುದು?

**ವೈದ್ಯ:** ಕಾಲಕ್ಕೆ ತಕ್ಕಂತೆ ನಾವೂ ಬದಲಾಗಬೇಕು, ಈ ಎಲ್ಲಾ ಗಿಡ ಮೂಲಿಕೆಗಳನ್ನು ಒಳಗೊಂಡ ಹಲ್ಲು ಪುಡಿ ಮಾರುಕಟ್ಟೆ ಯಲ್ಲಿ ಲಭ್ಯವಿದೆ. ಅವುಗಳನ್ನು ಟೂತ್ ಬ್ರಶ್ ಬಳಸಿ, ಹಲ್ಲು ಒಸಡು ಗಳನ್ನು ಉಜ್ಜಲು ಬಳಸಬಹುದು.

**(ಸಶೇಷ)**

ಅಕಿಂಚನಸ್ಯ ದಾಂತಸ್ಯ ಶಾಂತಸ್ಯ ಸಮಚೇತಸಃ
ಮಯಾ ಸಂತುಷ್ಟಮನಸಃ ಸರ್ವಾಃ ಸುಖಮಯಾಃ ದಿಶಃ॥

(ಮಹಾಭಾರತ)

“ಯಾರಿಗೆ ತನ್ನದೆಂಬುದಾವುದೂ ಇಲ್ಲವೋ,ಯಾರು ಸಂಯಮಿಯೂ ಶಾಂತನೂ ಸಮಚಿತ್ತನೂ ಸದಾ ಸಂತೃಪ್ತ ಮನಸ್ಕನೂ ಆಗಿರುತ್ತಾನೋ ಅವನಿಗೆ ಎಲ್ಲ ದಿಕ್ಕುಗಳೂ ಸುಖ ಮಯವಾಗಿರುತ್ತವೆ.”

# ಮಹರ್ಷಿ ಋಷ್ಯ ಶೃಂಗರು

ಡಾ॥ ಪ್ರದೀಪ್‌ಕುಮಾರ್ ಹೆಬ್ರಿ
98440 18457

ಜಿಂಕೆಯಂತೆ ಕೊಂಬುಳ್ಳ ಮಹಾ ಋಷಿಯೇ ಋಷ್ಯ ಶೃಂಗರು. ಇವರು ಪಾದವಿಟ್ಟಲ್ಲಿ ಮಳೆಯಾಗಿ ದೇಶ ಸುಭಿಕ್ಷ ಎಂಬ ಕಥೆ ಪುರಾಣದಲ್ಲಿ ಕಂಡು ಬರುತ್ತದೆ.

ಕಾಶ್ಯಪ ವಂಶದಲ್ಲಿ ವಿಭಾಂಡಕ ಎಂಬ ಋಷಿಯೋರ್ವರಿದ್ದರು. ಇವರು ಮಹಾತಪಸ್ವಿಗಳು,ಇವರೊಮ್ಮೆ ತಿರುಗಾಟಕ್ಕೆ ಮುಂದಾದರು. ತಿರುಗಿ ತಿರುಗಿ ಬಳಲಿದರು. ಮೈ ಕೈ ತೊಳೆದು ಹಗುರವಾಗೋಣ ಎಂದು ಎದುರಿಗೆ ಕಂಡು ಬಂದ ಕೊಳವೊಂದಕ್ಕೆ ಇಳಿದರು.ಆ ಕೊಳದಲ್ಲಿ ಅಪ್ಸರೆ ಊರ್ವಶಿಯು ನೀರಾಟವಾಡುತ್ತಿದ್ದಳು. ಕೊಳಕ್ಕಿಳಿದ ವಿಭಾಂಡಕರು ಕಾಲ್ತೊಳೆದು ಮನ - ದೇಹದ ಮಲಿನತೆ ನೀಗಿಕೊಂಡರು. ಮೇಲೆದ್ದಾಗ ಅಲ್ಲೇ ನೀರಾಟವಾಡುತ್ತಿದ್ದ ಊರ್ವಶಿಯನ್ನು ಕಂಡರು. ತಕ್ಷಣ ಕಾಮೋದ್ರಿಕ್ತಗೊಂಡು ಸ್ಖಲಿಸಿದರು.

ಅದೇ ಸಮಯಕ್ಕೆ ಶಾಪಗ್ರಸ್ಥಳಾದ ದೇವಕನ್ಯೆ ಓರ್ವಳು ಜಿಂಕೆಯ ರೂಪದಲ್ಲಿ ಅಲ್ಲಿಗೆ ಬಂದಳು.ನೀರು ಕುಡಿಯಲು ಕೊಳಕ್ಕಿಳಿದಳು. ನೀರಿನೊಂದಿಗೆ ಋಷಿರೇತಸ್ಸು ಸೇವಿಸಿದಳು. ಗರ್ಭವತಿಯಾದಳು ಮುಂದೆ ಗಂಡು ಮಗುವೊಂದನ್ನು ಹೆತ್ತಳು. ಜಿಂಕೆಯ ಗರ್ಭದಿಂದ ಆ ಮಗುವು ಕೊಂಬಿನೊಡನೆಯೇ ಹುಟ್ಟಿತ್ತು. ಇದರಿಂದ ಮಹರ್ಷಿ ಋಷ್ಯಶೃಂಗ ಎಂದು ಕರೆಸಿಕೊಂಡಿತು.

ಮಹರ್ಷಿ ವಿಭಾಂಡಕರು ತಮ್ಮೀ ಪುತ್ರನನ್ನು ಅರಿತಿದ್ದರು. ಜನ್ಮರಹಸ್ಯವ ತಿಳಿದಿದ್ದರು.ಹಾಗಾಗಿ ತಮ್ಮೀ ಪುತ್ರನ ಸದಾ ಕಾಲದ ಸಂಗಾತಿಯಾದರು. ಋಷ್ಯಶೃಂಗ ತನ್ನ ಪಿತನನ್ನು ಹೊರತು ಮತ್ತಾರನ್ನೂ ಅರಿಯದವನಾಗಿದ್ದನು. ಯೋಗ್ಯ ವಿದ್ಯಾಭ್ಯಾಸ ಪಡೆದೂ ಋಷ್ಯಶೃಂಗನ ಮನದಲ್ಲಿ ಏನೋ ಗೊಂದಲ, ಏನೋ ಕಸಿವಿಸಿ ! ಹಾಗಾಗಿ ಸದಾ ಅನ್ಯಮನಸ್ಕನಾಗಿರುತ್ತಿದ್ದನು. ಬ್ರಹ್ಮಚರ್ಯ ಧರ್ಮದಲ್ಲೇ ಮುಂದುವರಿಯುತ್ತಿದ್ದನು.

ಋಷ್ಯಶೃಂಗನ ಸಾಧನೆ ಸಿದ್ಧಿ - ಮಹಿಮೆಯನ್ನು ಅಂಗ ದೇಶಾಧಿಪತಿ ಲೋಮಪಾದರು ಅರಿತಿದ್ದರು. ಅವರು ದಶರಥ ಮಹಾರಾಜನ ಬಂಧುವಾಗಿದ್ದರು. ಲೋಮಪಾದರು ಉಪಾಯದಿಂದ ಋಷ್ಯಶೃಂಗನನ್ನು ತಮ್ಮಲ್ಲಿಗೆ ಬರಮಾಡಿಕೊಂಡರು. ಋಷ್ಯಶೃಂಗ ಅವರು ನೆಲದಲ್ಲಿ ಕಾಲಿಡುತ್ತಿದ್ದಂತೆ ಅನಾವೃಷ್ಟಿ ಪೀಡಿತವಾದ ರಾಜ್ಯದಲ್ಲಿ ಸುವೃಷ್ಟಿಯಾಯಿತು.

ಲೋಮಪಾದನು ಸಂತಸಗೊಂಡನು. ಆತ ಋಷ್ಯಶೃಂಗರ ಅನ್ಯಮನಸ್ಕತೆಯನ್ನು ಅರಿತಿದ್ದನು. ಅವನನ್ನು ಸಂತೋಷಗೊಳಿಸಲು ತನ್ನಾಪ್ತಮಿತ್ರ ದಶರಥನ ಪುತ್ರಿಯೂ,ತನ್ನ ಸಾಕು ಮಗಳೂ ಆದ ಶಾಂತ ಎಂಬುವವಳನ್ನು ಋಷ್ಯ ಶೃಂಗರಿಗೆ ಮದುವೆ ಮಾಡಿಕೊಟ್ಟು ತನ್ನ ರಾಜ್ಯವನ್ನು ಆತನಿಗೇ ವಹಿಸಿಕೊಟ್ಟನು. ಋಷ್ಯಶೃಂಗ ಬದುಕಿನ ಹೊಸ ಆನಂದವನ್ನು ಅನುಭವಿಸುತ್ತ ಸುಖದಿಂದಿದ್ದನು.

ಕೆಲ ಕಾಲನಂತರ ದಶರಥನು ತನ್ನ ಕುಲಗುರು ವಶಿಷ್ಟ ಮುನಿಗಳ ಆದೇಶದಂತೆ ಮಹರ್ಷಿ ಋಷ್ಯ ಶೃಂಗರಿಂದ ಪುತ್ರಕಾಮೇಷ್ಟಿ ಯಾಗವನ್ನು ಮಾಡಿಸಿದನು.ಯಜ್ಞಾಂತ್ಯದಲ್ಲಿ ಅಗ್ನಿಯಿಂದ ಬಂದ ಚರುವನ್ನು ಸ್ವೀಕರಿಸಿ ನಾಲ್ವರು ಮಕ್ಕಳನ್ನು ಪಡೆದನು. ಅವರೇ ಶ್ರೀರಾಮ, ಭರತ, ಲಕ್ಷ್ಮಣ ಮತ್ತು ಶತ್ರುಘ್ನರು.

ಇಂದಿನ ತುಂಗಾನದೀ ತೀರದ ಶೃಂಗೇರಿ ಋಷ್ಯಶೃಂಗ ಮುನಿಗಳ ಆಶ್ರಮವಿದ್ದ ಸ್ಥಳ ಎಂಬ ನಂಬಿಕೆಯಿದೆ. ಕೌಶಕೀ ನದೀ ತೀರದಲ್ಲಿ ಋಷ್ಯಶೃಂಗಾಶ್ರಮ ಇತ್ತೆಂದು ಹೇಳುತ್ತಾರೆ. ಇದು ಭಾಗಲ್ಪುರ ಜಿಲ್ಲೆಯ ಸಿಂಘೇಶ್ವರದಲ್ಲಿ ಕೂಸೀನದಿಯ ದಡದಲ್ಲಿದೆ.

ಋಷ್ಯಶೃಂಗ ಮಹರ್ಷಿಯು ಮಹಾಪ್ರತಾಪಿ. ಯಜ್ಞನಿಷ್ಠರು ಮಾರ್ಕಂಡೇಯ ಪುರಾಣದ ಅನುಸಾರ ಸಾವರ್ಣಿಕ ಮನ್ವಂತರದ ಸಪ್ತರ್ಷಿಗಳಲ್ಲಿ ಋಷ್ಯಶೃಂಗರೂ ಒಬ್ಬರು.

# ಅಷ್ಟಾವಕ್ರರ ಕತೆ

- ಪ್ರೊ. ಪದ್ಮನಾಭರಾವ್
9916173302



ಮಹಾಭಾರತದ ವನ ಪರ್ವದಲ್ಲಿ ಪಾಂಡವರನ್ನು ಅರಣ್ಯದಲ್ಲಿ ಸಂಧಿಸಿ, ಅವರಿಗೆ ಧೈರ್ಯ, ಮನೋಬಲ ತುಂಬಲು ಹಲವು ಋಷಿಗಳು, ಸಿದ್ಧರು ಬರುತ್ತಿದ್ದರು. ಆಗೊಮ್ಮೆ ಲೋಮಶರು ಪಾಂಡವರಿಗೆ ಅಷ್ಟಾವಕ್ರರ ಪ್ರಸಂಗವನ್ನು ತಿಳಿಸಿದರು.

ಮಿಥಿಲೆಯ ಸಮೀಪದ ಕಾಡಿನಲ್ಲಿ ಹಲವು ತಪಸ್ವಿಗಳಿದ್ದರು. ಅವರಲ್ಲಿ ಉದ್ದಾಲಕರೂ ಒಬ್ಬರೂ. ಅವರಿಗೊಬ್ಬ ಮೆಚ್ಚಿನ ಶಿಷ್ಯರಿದ್ದರು.ಕಹೋಡ ಎಂಬ ಇವರು ಹೊರ ನೋಟಕ್ಕೆ ದಡ್ಡರಂತೆ ತೋರಿ ಇತರ ಶಿಷ್ಯರ ಅಪಹಾಸ್ಯಕ್ಕೆ ಗುರಿಯಾಗಿದ್ದರು. ಆದರೆ ಅವರ ಶ್ರದ್ಧಾ ಭಕ್ತಿಗಳಿಂದ ಗುರು ಕೃಪೆಗೆ ಪಾತ್ರರಾಗಿದ್ದರು. ಅವರ ವೇದಭ್ಯಾಸ ಮುಗಿದ ನಂತರ ಗುರುಗಳು ತನ್ನ ಮಗಳಾದ ಸುಜಾತೆಯನ್ನೇ ಅವರಿಗೆ ಕೊಟ್ಟು ಮದುವೆ ಮಾಡಿದರು.

ಸುಜಾತೆ - ಕಹೋಡರಿಗೆ ಒಬ್ಬ ಮಗ ಜನಿಸಿದ. ಈ ಮಗು ತಾಯ ಗರ್ಭದಲ್ಲಿ ಇದ್ದಾಗಲೇ ತನ್ನ ತಾತನಂತೆ ವೇದಗಳ ಜ್ಞಾನಗಳಿಸಿದ.ಆದರೆ ತನ್ನ ತಂದೆ ಕಹೋಡರ ತಪ್ಪಾದ ಉಚ್ಚಾರ ಆ ಮಗುವಿಗೆ ಇಷ್ಟವಾಗದೆ,

ತಾಯಿಯ ಗರ್ಭದಲ್ಲೇ ಉರುಳಾಡುತ್ತಿತ್ತು. ಇದರಿಂದ ಜನಿಸುವ ಮೊದಲು ಅದರ ಶರೀರ ಎಂಟು ಕಡೆ ಡೊಂಕಾಗಿ, ಈ ಮಗುವನ್ನು ಅಷ್ಟಾವಕ್ರ ಎಂದೇ ನಾಮಕರಣ ಮಾಡಿದರು. ಈ ಮಗು ಮಹಾನ್ ಮೇಧಾವಿ ಯಾಗುವನೆಂದು ತಾತ ಉದ್ದಾಲಕರಿಗೆ ಗೊತ್ತಿತ್ತು. ತನ್ನ ತಂದೆಗೆ ಮೀರಿದ ಜ್ಞಾನಿ ಆತನೆಂದು ಅವರು ಬಲ್ಲರು.

ಕಹೋಡರು ಮುಂದೊಂದು ದಿನ ಮಿಥಿಲೆಯ ರಾಜನ ಆಸ್ಥಾನಕ್ಕೆ ಒಂದು ಸ್ಪರ್ಧೆಯಲ್ಲಿ ಭಾಗವಹಿಸಲು ತೆರಳಿ, ಅಲ್ಲಿ ಸ್ಪರ್ಧೆಯಲ್ಲಿ ಸೋತು ಅಪಮಾನದಿಂದ ನೀರಿನಲ್ಲಿ ಮುಳುಗಿಸತ್ತರು. ಅಷ್ಟಾವಕ್ರ ಮಗುವಾಗಿದ್ದಾಗಲೇ ತಂದೆಯನ್ನು ಕಳೆದು ಕೊಂಡರೂ, ಉತ್ತಮ ಸಂಸ್ಕಾರ ಬಲದಿಂದ ನುರಿತ ವೇದ ವಿದ್ವಾಂಸನಾದ ತನ್ನ 12 ನೆಯ ವಯಸ್ಸಿನಲ್ಲೇ ಈ ಮಗು ಮತ್ತೊಬ್ಬರನ್ನು ಮೀರಿಸುವಂತೆ ಜ್ಞಾನಿಯಾಗಿದ್ದ. ಈಗ ಮಗುವಿಗೆ ತನ್ನ ತಂದೆಯ ಸಾವಿನ ಬಗ್ಗೆ ಸ್ವಲ್ಪ ಅರಿ ವಿತ್ತು.ತಾಯಿ ಅದನ್ನು ಪೂರ್ತಿ ತಿಳಿಸ ದಿದ್ದರೂ ನೀನು ಪಂಡಿತಜ್ಞಾನಿಯಾದರೆ ಮಾತ್ರ ಗೌರವ ಇಲ್ಲದಿದ್ದರೆ ಅಪಮಾನ ಆಗಬಹುದು ಎಂದು ಆಗಾಗ ತಿಳಿಸುತ್ತಿದ್ದಳು.

ಒಮ್ಮೆ ಅಷ್ಟಾವಕ್ರರಿಗೆ ಮಿಥಿಲೆಯ ದೊರೆ ಜನಕರಾಜನು ವೇದ,ಉಪನಿಷತ್ತುಗಳ ಸಂವಾದ ಚರ್ಚೆಯನ್ನು ಏರ್ಪಡಿಸಿದ್ದಾನೆ ಎಂದು ತಿಳಿಯಿತು.ಯುವ ಪಂಡಿತರಾದ ಅವರಿಗೆ ತಾನು ಇದರಲ್ಲಿ ಭಾಗವಹಿಸಲೇಬೇಕು ಎನಿಸಿ ತಾಯಿಯ ಅಪ್ಪಣೆ, ಆಶೀರ್ವಾದ ಪಡೆದು,ಮಿಥಿಲೆಗೆ ಹೊರಟರು. ಶಾಸ್ತ್ರಗಳಲ್ಲಿ ಪಂಡಿತರೊಡನೆ ಸೆಣಸುವುದು ಎಂದರೆ ಈ ಯುವಕನಿಗೆ ತೀವ್ರ ಆಸಕ್ತಿ, ಕಾತುರವಿತ್ತು.ದಾರಿಯಲ್ಲಿ ರಾಜ ಪರಿವಾರ ಅವರಿಗೆದುರಾಯಿತು. ಮಹಾರಾಜರಿಗೆ ದಾರಿ ಕೊಡಿ, ಪಕ್ಕಕ್ಕೆ ಸರಿಯಿರಿ ಎಂದು ಘೋಷಿಸುತ್ತಾ ಸೇವಕರು ಮುನ್ನಡೆದು, ರಾಜನು ಹಿಂದೆ ಸಾಗುತ್ತಿದ್ದ. ಅಷ್ಟಾವಕ್ರರು ಆ ಸೇವಕರ ಬಳಿ. ನನಗೂ ದಾರಿ ಕೊಡಿ ಮಹಾರಾಜರನ್ನು ಭೇಟಿಯಾಗಿ ಸಂವಾದ ನಡೆಸಬೇಕಾಗಿದೆ ಎಂದಾಗ ಅವರು ಈ ಹುಡುಗರೆಲ್ಲಾ ಇಲ್ಲಿಗೆ ಬರಬಾರದು, ಇದ ವಿದ್ವತ್ ಸಭೆ ಎಂದು ಅಡ್ಡಿಪಡಿಸಿದರು.

ಅಷ್ಟಾವಕ್ರರು ಇಲ್ಲಿ ನೋಡಿ ರಾಜನಾದರು ಕುರುಡ ಅಂಗವಿಕಲ, ಸ್ತ್ರೀಯರು. ವೇದ ವಿದ್ವಾಂಸರಿಗೆ ದಾರಿ ಕೊಡಬೇಕು ಎಂದು ಶಾಸ್ತ್ರಗಳಲ್ಲಿ ತಿಳಿಸಿದೆ. ನಾವು ಕೇವಲ ಬಾಲಕರಲ್ಲ. ವ್ಯಕ್ತಿಯ ಯೋಗ್ಯತೆ ಅವನ ರೂಪ. ಹೊರನೋಟದಿಂದ

ಅಳೆಯಬಾರದು. ವೇದ ಪಾರಂಗತರಾಗಿ ಇಲ್ಲಿಗೆ ಬಂದಿದ್ದೇವೆ. ನಾವು ಬಂದಿರುವುದು ಪಂಡಿತರ ಜೊತೆಯಲ್ಲಿ ವಾದ ಮಾಡಲು ಎಂದು ಗಂಭೀರವಾಗಿ ತಿಳಿಸಿದ್ದು. ಜನಕ ರಾಜನಿಗೂ ಕೇಳಿಸಿ, ಅವರನ್ನು ಇಲ್ಲಿಗೆ ಬರಲು ಹೇಳಿ ಎಂದು ಆಜ್ಞೆ ಮಾಡಿದನು. ರಾಜನಿಗೆ ಅಷ್ಟಾವಕ್ರರ ಬಗ್ಗೆ ಕೇಳಿ ಗೊತ್ತಿತ್ತು. ರಾಜನೇ ಅವರನ್ನು ಬಾಗಿಲಲ್ಲಿ ಸ್ವಾಗತಿಸಿದ.

ಅಷ್ಟಾವಕ್ರರು ಶ್ವೇತಕೇತುವಿನ ಜೊತೆ ಒಳಗೆ ಹೋಗಿ ರಾಜ ಸಭೆಯಲ್ಲಿ ಅಸೀನರಾದರು. ಅದು ರಾಜನ ಯಾಗ ಶಾಲೆಯಾಗಿ ವಿದ್ವಾಂಸರು ನೆರೆದಿದ್ದರು. ಅವರ ನಡುವೆ ಗಂಭೀರ ಚರ್ಚೆ ಸಾಗಿತ್ತು. ಪಂಡಿತರೂ ಅಲ್ಲಿ ಹೆಮ್ಮೆಯಿಂದ ಆಸೀನರಾಗಿ ತಾವೇ ಪಂಡಿತರೆಂದು ಬೀಗುತ್ತಿದ್ದರು. ರಾಜನು ಹೇಳಿದ, ನೋಡಿ ಯುವ ವಿದ್ವಾಂಸರೇ, ನಮ್ಮ ಪಂಡಿತರು ಹಲವಾರು ವಿದ್ವಾಂಸರನ್ನು ಸೋಲಿಸಿ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಮಾಡಿದ್ದಾರೆ, ಮತ್ತೊಮ್ಮೆ ಯೋಚಿಸಿ ಎಂದನು.


ರಾಜನ್ ! ನಿಮ್ಮ ಪಂಡಿತರು ಬಹುಶಃ ನಮ್ಮಂಥವರನ್ನು ಭೇಟಿಯಾಗಿಲ್ಲವೆಂದು ತೋರುತ್ತದೆ. ಅವರನ್ನು ವಾದದಲ್ಲಿ ಸೋಲಿಸಿ ನಮ್ಮ ತಂದೆಯ ಋಣ ತೀರಿಸಬೇಕಾಗಿದೆ. ಅವರನ್ನು ಕರೆಸಿ ಎಂದು ಅಷ್ಟಾವಕ್ರರು ಹೇಳಿದರು. ಅವರಿಬ್ಬರ ನಡುವೆ ವಾದ ನಡೆಯಿತು. ಅಷ್ಟಾವಕ್ರರ ಜ್ಞಾನಕ್ಕೆ ಮಣಿದು ಸೋಲನ್ನೊಪ್ಪಿದವಾದ ನಿಯಮದಂತೆ ಆತನೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಬೇಕಾಯಿತು. ಆಗ ಕಹೋಡ ಋಷಿಯ ಆತ್ಮ ಮಗನ ವಿಜಯ ನೋಡಿ ಆಶೀರ್ವದಿಸಿತು.

**ಇಲ್ಲಿ ನಮಗೆ ಸಿಗುವ ಸಂದೇಶ :**

ವ್ಯಕ್ತಿಯ ಬಾಹ್ಯ ರೂಪಕ್ಕಿಂತ ಆತನ ಜ್ಞಾನ, ಪಾಂಡಿತ್ಯ ಗಮನಿಸಬೇಕು. ಒಬ್ಬ ದುರ್ಬಲ, ದಡ್ಡ ತಂದೆಗೆ ಜಾಣ ಮಗು ಜನಿಸಬಹುದು. ಯಾರನ್ನೇ ಆಗಲಿ, ಹೊರನೋಟದಿಂದ ಹೀಗಳೆಯಬಾರದು.


## ಒಂದು ಕ್ಲಿಕ್ ಮಾಡಿ ಸ್ವಾಮಿ ದರ್ಶನ ಮಾಡಿ

## ತಿ.ತಿ.ದೇವಸ್ಥಾನಗಳು ಮೊಬೈಲ್ ಆ್ಯಪ್




ತಿ.ತಿ.ದೇವಸ್ಥಾನಗಳು ಎಂಬ ಹೆಸರಿನಿಂದ ರಚಿಸಲಾದ ಮೊಬೈಲ್ ಆ್ಯಪ್ ಅನ್ನು ತಿ.ತಿ.ದೇ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿದರು. ಇದುವರೆಗೆ ಭಕ್ತರಿಗಾಗಿ ಗೋವಿಂದ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದರು. ಈಗ ಅದನ್ನು ಆಧುನೀಕರಿಸಲಾಗಿದೆ ಮತ್ತು ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸಲು ಹೊಸ ಅಪ್ಲಿಕೇಶನ್ ಅನ್ನು ರಚಿಸಲಾಗಿದೆ. ಈ ಮೊಬೈಲ್ ಆ್ಯಪ್ ಮೂಲಕ ಭಕ್ತರು ತಿರುಮಲೆ ಸ್ವಾಮಿಯವರ ದರ್ಶನ, ಸೇವೆಗಳು, ವಸತಿ,ಅಂಗಪ್ರದಕ್ಷಿಣೆ,ಸರ್ವದರ್ಶನವನ್ನು ಈ ಅಪ್ಲಿಕೇಶನ್ ಮುಖಾಂತರ ಬುಕ್ ಮಾಡಿಕೊಳ್ಳಬಹುದು. ಅದೇ ಆ್ಯಪ್ ಮುಖಾಂತರ ದೇಣಿಗೆಯನ್ನು ನೀಡಬಹುದು. ಭಕ್ತರು ಲಾಗಿನ್ ಆಗಲು ಓ.ಟಿ.ಪಿ. ಜೊತೆಗೆ ಬಳಕೆದಾರರ ಹೆಸರನ್ನು ನಮೂದಿಸಬೇಕು,ಯಾವುದೇ ಪಾಸ್‌ವರ್ಡ್‌ನ ಅಗತ್ಯವಿಲ್ಲ.



32

# ಮುದುಗೆರೆಯ ಶ್ರೀ ಲಕ್ಷ್ಮೀಚನ್ನಕೇಶವ ದೇವಾಲಯ

-ಕೆಂಗೇರಿ ಚಕ್ರಪಾಣಿ
94483 86886

ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಹೊಸೂರು ಹೋಬಳಿಯ ಒಂದು ಗ್ರಾಮ ಮುದುಗೆರೆ. ಇದು ಗೌರಿಬಿದನೂರು ಮಧುಗಿರಿ ರಸ್ತೆಯಲ್ಲಿ ಕಸಬೆಯಿಂದ ಏಳು ಕಿ.ಮೀ. ದೂರದಲ್ಲಿದೆ. ಇಲ್ಲಿ ಸುಂದರವಾದ ಚನ್ನಕೇಶವನ ಮೂರ್ತಿಯನ್ನು ಹೊಂದಿರುವ ಬೃಹತ್ ದೇವಾಲಯವಿದೆ.

ಮುದುಗೆರೆಯ ಲಕ್ಷ್ಮೀ ಚನ್ನಕೇಶವ ದೇವಾಲಯವು ಊರ ನಡುವೆ ಇದ್ದು ಗರ್ಭಗೃಹ, ಅಂತರಾಳ ನವರಂಗ ಎರಡು ಹಂತಗಳ ಮುಖಮಂಟಪ, ದೊಡ್ಡ ವಿಶಾಲವಾದ ಮತ್ತೊಂದು ಮುಖಮಂಟಪ ಹಾಗೂ ಪ್ರವೇಶ ಮಂಟಪಗಳನ್ನು ಹೊಂದಿರುವ ಬೃಹತ್ ರಚನೆಯಾಗಿದೆ. ಗರ್ಭಗುಡಿಯಲ್ಲಿ ಶಂಖ, ಚಕ್ರ,ಗದಾ, ಪದ್ಮಧಾರಿಯಾದ ಹೊಯ್ಸಳ ಶೈಲಿಯ ಸುಂದರವಾದ ಕೇಶವನ ಮೂರ್ತಿಯಿದೆ. ಕೇಶವನು ಐದು ಅಡಿಗಳಷ್ಟು ಎತ್ತರವಿದ್ದು ಸರ್ವಾಲಂಕಾರಗಳಿಂದ ಭೂಷಿತನಾಗಿರುವನು. ಕಿರೀಟ ಮಕುಟ ಧಾರಿಯಾದ ಕೇಶವನ ಸುತ್ತಲೂ ಅಲಂಕೃತ ಪ್ರಭಾವಳಿಯಿದೆ. ದೇವಾಲಯವು ಮೂಲತಃ ವಿಜಯನಗರ ಕಾಲಕ್ಕೆ ಸೇರಿದ್ದರು ಗರ್ಭಗುಡಿಯಲ್ಲಿರುವ ಪ್ರಧಾನ ಮೂರ್ತಿಯು ಹೊಯ್ಸಳರ ಕಾಲದ್ದು. ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಯ್ಸಳರು ಆಡಳಿತ ನಡೆಸಿದ್ದಕ್ಕೆ ಕುರುಹುಗಳು ಶಾಸನಗಳಲ್ಲಿ ದೊರೆಯುತ್ತದೆ. ಇಲ್ಲಿಯ ಒಂದು ಪ್ರದೇಶಕ್ಕೆ ಬಲ್ಲಾಳಪುರವೆಂಬ ಹೆಸರು ಇತ್ತು ಸಮೀಪದ ಹೊಸೂರು ಹೊಯ್ಸಳರ ಕಾಲದಲ್ಲಿ ಹೊಸ ಊರು ಆಗಿತ್ತು. ಮೂರ್ತಿ ಶಿಲ್ಪದ ಲಕ್ಷಣಗಳಿಂದ ಸುಮಾರು ಹದಿಮೂರನೆಯ ಶತಮಾನಕ್ಕೆ ಸೇರಬಹುದಾದ ಕೇಶವನು ಹೊಯ್ಸಳರ ಕೊಡುಗೆ ಎಂದು ಖಚಿತವಾಗಿ ಹೇಳಬಹುದು.

ಕ್ರಿ.ಶ. 1525 ರ ಶಾಸನದಲ್ಲಿ ಈ ದೇವಾಲಯದ ಉಲ್ಲೇಖ ಬರುತ್ತದೆ. ಆವತಿ ನಾಡಪ್ರಭು ಸೊಣ್ಣಪ್ಪಗೌಡರು ತಮ್ಮ ದೊರೆ ವಿಜಯನಗರದ ಅರಸು ಸದಾಶಿವರಾಯ ಮತ್ತು ಅವನ ಕುಮಾರ ತಿರುಮಲರಾಯನಿಗೆ ಪುಣ್ಯವಾಗಬೇಕೆಂದು ಮತ್ತು ತಮ್ಮ ಮಾತಾಪಿತೃಗಳಿಗೆ ಪುಣ್ಯವಾಗಬೇಕೆಂದು ಹೊಸ ಊರ ನಾಡ ಮುದುಗೆರೆಯ ಶ್ರೀ ಚನ್ನಕೇಶವ ದೇವರ ಅಮೃತಪಡಿಗೆ, ಪಂಚಪರ್ವ, ರಥೋತ್ಸವ ಮುಂತಾದ ಸೇವೆಗಳು ನಿರಂತರವಾಗಿ ನಡೆಯಬೇಕೆಂದು ಮುದುಗೆರೆ ಗ್ರಾಮವನ್ನೇ ದೇವಾಲಯಕ್ಕೆ ದತ್ತಿ ಬಿಟ್ಟಿರುವನು, ಹೀಗಾಗಿ ಹದಿನೈದನೆಯ ಶತಮಾನಕ್ಕಾಗಲೇ ಈ ದೇವಾಲಯವಿದ್ದುದು ಖಚಿತ ಪಡಿಸುತ್ತದೆ.

ಮುದುಗೆರೆಯ ಸ್ಥಳಪುರಾಣದ ಪ್ರಕಾರ ಶ್ರೀಚನ್ನಕೇಶವ ಸ್ವಾಮಿಯನ್ನು ಮುಚಕುಂದ ಮಹರ್ಷಿಗಳಿಂದ ಪ್ರತಿಷ್ಠಾಪಿಸಲಾಗಿದ್ದು ಜನಮೇಜರಾಯನಿಂದ ಜೀರ್ಣೋದ್ಧಾರವಾಯಿತೆಂಬ ಐತಿಹ್ಯವಿದೆ. ಮುಖಮಂಟಪವು ಬಹಳ ವಿಶಾಲವಾಗಿದ್ದು ಸುಮಾರು ಇಪ್ಪತ್ತು ಕಂಬಗಳನ್ನು ಹೊಂದಿದ್ದು ವಿಜಯನಗರೋತ್ತರ ಕಾಲದಲ್ಲಿ ಸ್ಥಳೀಯ ಪಾಳೆಯಗಾರರಿಂದ ನಿರ್ಮಿತವಾಗಿದೆ. ಮುಖಮಂಟಪದ ಎರಡು ಕಂಬಗಳ ಬುಡದಲ್ಲಿ ಪ್ರಣಾಮ ಮುದ್ರೆಯಲ್ಲಿರುವ ಸ್ಥಳೀಯ ನಾಯಕರ ಮೂರ್ತಿಗಳಿವೆ. ಮುಖಮಂಟಪದ ಕಂಬಗಳ ಬುಡದಲ್ಲಿ ಚತುರಸ್ರ-ಬಹುಕೋನ,ಚತುರಸ್ರ ನಂತರ ವೃತ್ತದ ರೂಪದಲ್ಲಿವೆ. ಕೆಲವು ಕಂಭಗಳಲ್ಲಿ ವಾದ್ಯಗಾರರು ಗಣಪತಿ, ಯೋಗಾನರಸಿಂಹ, ಬಾಲಕೃಷ್ಣ ಮುಂತಾದ ದೇವತಾ ಮೂರ್ತಿಗಳ ಉಬ್ಬು ಕೆತ್ತನೆಗಳಿವೆ. ಮುಖಮಂಟಪದ ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಆನೆಯ

ಶಿಲ್ಪಗಳನ್ನಿರಿಸಲಾಗಿದೆ.ದೇವಾಲಯದ ಗರ್ಭಗುಡಿಗೆ ಅಂದವಾದ ಇತ್ತೀಚಿಗೆ ನಿರ್ಮಿಸಿದ ಶಿಖರವಿದೆ. ಪ್ರವೇಶ ಮಂಟಪದ ಒಂದು ಗುಡಿಯಲ್ಲಿ ಮಾರುತಿಯ ಮೂರ್ತಿಯಿದೆ. ಚನ್ನ ಕೇಶವನ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಮತ್ತೊಂದು ಗುಡಿಯಲ್ಲಿ ಮಹಾಲಕ್ಷ್ಮಿಯ ಅಂದದ ಮೂರ್ತಿಯಿದೆ. ಆದ್ದರಿಂದ ದೇವಾಲಯವು ಲಕ್ಷ್ಮೀ ಚನ್ನಕೇಶವ ದೇವಾಲಯವೆಂದು ಪ್ರಸಿದ್ಧಿಯನ್ನು ಹೊಂದಿದೆ.

ಮುದುಗೆರೆಯ ಲಕ್ಷ್ಮೀ ಚನ್ನಕೇಶವನು ಅಪಾರ ಸಂಖ್ಯೆಯ ಭಕ್ತವೃಂದವನ್ನು ಹೊಂದಿದ್ದು, ಅನೇಕ ಕುಟುಂಬಗಳ ಕುಲದೈವವು ಸಹಾ ಆಗಿರುವನು. ದೇವಾಲಯವು ಶಿಥಿಲವಾಗಿ ನೆಲಕಚ್ಚುವ ಹಂತವನ್ನು ತಲುಪಿತ್ತು, ಆದರೆ ಇಲ್ಲಿಯ ಭಕ್ತಾದಿಗಳು "ಶ್ರೀ ಲಕ್ಷ್ಮೀಚನ್ನಕೇಶವಸ್ವಾಮಿ ದೇವಾಲಯ ಜೀರ್ಣೋದ್ಧಾರ ಸಮಿತಿ" ಎಂದು ರಚಿಸಿಕೊಂಡು ಕರ್ನಾಟಕ ಸರ್ಕಾರದಿಂದ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಜೀರ್ಣೋದ್ಧಾರ ಮಾಡಿ ದಿನಾಂಕ 24-01-2011 ರಂದು ಲೋಕಾರ್ಪಣೆ ಮಾಡಿರುವರು.



ದೇವಾಲಯದಲ್ಲಿ ನಿತ್ಯ ಪೂಜೆ, ಪಕ್ಷ ಪೂಜೆಗಳು ಸಾಂಗವಾಗಿ ನಡೆಯಲು ಮುಕ್ತವಾತಾವರಣವನ್ನು ಕಲ್ಪಿಸಲಾಗಿದೆ. ದೇವಾಲಯದ ಪೂಜಾ ಕೈಂಕರ್ಯಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕೆ ಇತ್ತೀಚೆಗೆ ಆಧುನಿಕ ಸೌಲಭ್ಯಗಳುಳ್ಳ ಛತ್ರವನ್ನು ನಿರ್ಮಿಸ ಲಾಗಿದೆ.


ಮುದುಗೆರೆಯ ಲಕ್ಷ್ಮೀಚನ್ನಕೇಶವ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿ ವರ್ಷವು ಫಾಲ್ಗುಣ ಮಾಸದಲ್ಲಿ (ಮಾರ್ಚ್-ತಿಂಗಳಲ್ಲಿ) ಬರುವ ಕಾಮನ ಪೌರ್ಣಮಿಯ ದಿನ ಬಹು ವಿಜೃಂಭಣೆಯಿಂದ ನೆರವೇರುತ್ತದೆ. ಉತ್ಸವದ ಅಂಗವಾಗಿ ಸ್ವಾಮಿಗೆ ಸಿಂಹವಾಹನೋತ್ಸವ, ಪುಷ್ಪವಾಹನೋತ್ಸವ, ಹನುಮದ್ವಾಹನೋತ್ಸವ, ಗರುಡೋತ್ಸವ, ಕಲ್ಯಾಣೋತ್ಸವಗಳು ವೈಖಾನಸಾಗಮ ರೀತ್ಯಾ ಸಾಂಗವಾಗಿ ನೆರವೇರುತ್ತದೆ.

**ಹೀಗೆ ಬನ್ನಿ:**

ಗೌರಿಬಿದನೂರು ತಾಲ್ಲೂಕು ಮುದಿಗೆರೆಯು, ಗೌರಿಬಿದನೂರು-ಮಧುಗಿರಿ ರಸ್ತೆಯಲ್ಲಿ ಗೌರಿಬಿದನೂರಿನಿಂದ ಏಳು ಕಿ.ಮೀ . ದೂರದಲ್ಲಿದೆ.

## ಆಣಿವಾರ ಆಸ್ಥಾನಂ

ವೇಂಕಟೇಶ್ವರ ಸ್ವಾಮಿಗೆ ವರ್ಷಕ್ಕೆ ಒಂದು ಬಾರಿ ತಮಿಳುಕಾಲಮಾನದ ಪ್ರಕಾರ ಅಡಿಮಾಸದಲ್ಲಿ (ಆಷಾಢ) ನಡೆಯುತ್ತಾದರಿಂದ ಆಣಿವಾರ ಆಸ್ಥಾನ ಎಂದು ಹೆಸರು ಬಂದಿದೆ. ಈ ಉತ್ಸವದಂದು ಬೆಳಗ್ಗೆ ಬಂಗಾರದ ಬಾಗಿಲು ಮುಂದೆ ಇರುವ ಘಂಟಾ ಮಂಟಪದಲ್ಲಿ ಸರ್ವ ಭೂಪಾಲವಾಹನದಲ್ಲಿ ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪಸ್ವಾಮಿ ವಿರಾಜಮಾನವಾಗಿರುತ್ತಾರೆ. ಮತ್ತೊಂದು ಪಕ್ಕದಲ್ಲಿ ಶ್ರೀವಿಶ್ವಕ್ಸೇನರನ್ನು ಪೀಠದ ಮೇಲೆ ಕುಳ್ಳಿರಿಸುತ್ತಾರೆ. ಇವರೆಲ್ಲರನ್ನು ಗರುಡನ ಎದುರಿನಲ್ಲಿ ಅಸೀನರಾಗಿರಿಸುತ್ತಾರೆ. ಆಣಿವಾರ ಆಸ್ಥಾನವು ನಡೆಯುವ ಹಿಂದಿನ ದಿನ ಕೋಯಿಲ್ ಆಳ್ವಾರ್‌ತಿರುಮಂಜನಂ ನಡೆಯುತ್ತದೆ. ಆಣಿವಾರ ಆಸ್ಥಾನದ ದಿನ ಆ ವರ್ಷದ ಪೂರ್ತಿ ದೇವಸ್ಥಾನದಲ್ಲಿ ನಡೆಯುವ ಹಳೆಯ ಲೆಕ್ಕಾಚಾರದ ವಿವರಣೆಯನ್ನು ಸ್ವಾಮಿಯವರಿಗೆ ಸಮರ್ಪಿಸುತ್ತಾರೆ. ಮತ್ತೆ ಹೊಸ ವರ್ಷದ ಲೆಕ್ಕಾಚಾರವು ಪ್ರಾರಂಭವಾಗುತ್ತದೆ. ಅಂದು ಉಭಯದೇವಿಯರೊಂದಿಗೆ ಮಲೆಯಪ್ಪಸ್ವಾಮಿ ಸುಗಂದ ಪುಷ್ಪಗಳಿಂದ ಕೂಡಿದ ಪುಷ್ಪಪಲ್ಲಕ್ಕಿಯಲ್ಲಿ ಮಾಢ ಬೀದಿಯಲ್ಲಿ ಭಕ್ತರಿಗೆ ದರ್ಶನವನ್ನು ನೀಡುತ್ತಾರೆ. ವೇಂಕಟೇಶ್ವರ ಸ್ವಾಮಿಯವರಿಗೆ ಆ ದಿನ ಪ್ರತ್ಯೇಕ ಆಭರಣಗಳಿಂದ ಅಲಂಕರಿಸುತ್ತಾರೆ.





ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

**ಏಳನೆಯ ಸಂದರ್ಶನ :-**

ಏಳನೆಯ ಹಾಗೂ ಕಡೆಯ ಬಾರಿಗೆ ಕೃಷ್ಣದೇವ ರಾಯನು ಶಕವರ್ಷ 1442 ರ ವಿಕ್ರಮ ಸಂವತ್ಸರ ಪಾಲ್ಗುಣ ಮಾಸದ ಶುಕ್ಲ ಏಕಾದಶಿಯಂದು ಭಾನು ವಾರ (17-2-1521) ದಂದು ತಿರುವೆಂಗಳ ನಾಥ ನನ್ನು ಸಂದರ್ಶಿಸಿ ಪೂಜಿಸಿದ.ಸ್ವಾಮಿಗೆ ಪೀತಾಂಬರ ವನ್ನೂ, ನವರತ್ನಗಳನ್ನೂ,ಮುತ್ತು,ರತ್ನ, ಹವಳ,ನೀಲ, ಪಚ್ಚೆಗಳಿಂದ ಕೂಡಿದ ಕುಲಾವಿಯನ್ನು ಎರಡು ವಜ್ರ ಖಚಿತ ವಿಂಜಾಮರಗಳು,ಒಂದು ಪದಕ ಹಾಗೂ 10,000 ವರಹಗಳನ್ನು ನೀಡಿದ.ಆತನ ರಾಣಿ ತಿರುಮಲದೇವಿಯು ಒಂದು ನವರತ್ನ ಪದಕವನ್ನು ನೀಡಿದಳು. ಈ ಕಾಣಿಕೆಗಳು ತಿ.ತಿ.578 ರಲ್ಲೂ ವಿಮಾನದ ಗಿಲೀಟಿಗಾಗಿ 30,000 ವರಹಗಳ ದಾನದ ನಂತರದ ಕಾಣಿಕೆಯಾಗಿ ದಾಖಲಾಗಿವೆ. ಇದೇ ದಿನದಲ್ಲಿ ಈ ದಾನಗಳನ್ನು ಗುರುತಿಸುವ ಇನ್ನೂ ನಾಲ್ಕು ಶಾಸನಗಳಿವೆ. ತಿ.ತಿ.301 ಹಾಗೂ 594 ಗಳು ಕನ್ನಡ ದಲ್ಲಿಯೂ,ತಿ.ತಿ.302 ತಮಿಳಿನಲ್ಲೂ,ತಿ.ತಿ.586 ತೆಲುಗು ಹಾಗೂ ನಂದಿನಾಗಿರಿ ಲಿಪಿಯಲ್ಲಿಯೂ, ಇವೆಯಾದರೂ ಇವಾವುದೂ 578 ರಂತೆ ಗಜಪತಿಯ ಮೇಲಿನ ದಂಡಯಾತ್ರೆಯ ವಿವರಗಳನ್ನು ನೀಡುವು ದಿಲ್ಲ.

ಕೃಷ್ಣರಾಯನು ತಿರುಮಲೆಗೆ ನೀಡಿದ ಕಾಣಿಕೆಗಳ ಕೊನೆಯ ಉಲ್ಲೇಖವನ್ನು ತಿ.ತಿ.246 ರಲ್ಲಿ (1524 ಜನವರಿ 12 ರಂದು) ಶಕವರ್ಷ 1445 ರ ಸ್ವಭಾನು ಸಂವತ್ಸರದ ಮಕರಮಾಸದ ಶುಕ್ಲ ಸಪ್ತಮಿ ಯಂದು ಮಂಗಳವಾರ ಅಶ್ವಿನಿ ನಕ್ಷತ್ರವಿದ್ದ ದಿನದಲ್ಲಿ ಕಾಣಬಹುದು. ಈ ಶಾಸನವು ತಿರುಮಲೆಯ ಹಾಗೂ ತಿರುಪತಿಯಲ್ಲಿನ ಸ್ಥಾನತ್ತಾರರ ಎರಡು ಮನೆಗಳು ಹಾಗೂ ಮನೆ ನಿವೇಶನಗಳನ್ನು ಮಾಧ್ವಯತಿಗಳಾದ ವ್ಯಾಸತೀರ್ಥ ಶ್ರೀಪಾದ ಒಡೆಯರಿಗೆ ವರ್ಗಾ ಯಿಸಿದ್ದನ್ನು ತಿಳಿಸುತ್ತದೆ. ಇದರ ಜೊತೆಗೇ ಪುರಟ್ಟಾಸಿ ತಿರುನಾಳ್ ಉತ್ಸವದ ಪ್ರಸಾದವನ್ನು ನೀಡಲೆಂದು ಉಳ್ ಮಂಡ ಲದ ಕಡೈಕುಟ್ಟಿನ್ ಪಾಡಿ ಗ್ರಾಮಾದಾಯದ ಅರ್ಧ ಭಾಗ ಹಾಗೂ ತಾಳ್ಳಪಾಕ, ಪರಿಟಂ, ದಾರತ್ತೂರ್, ಮುಡಿಯೂರ್, ಚತ್ರವಾಡಿ ಮತ್ತು ತುರೈಯೂರು (ಎಲ್ಲವೂ ಪುರಮಂಡಲದಲ್ಲಿರುವವು) ಗ್ರಾಮಗಳ ಪೂರ್ಣ ಆದಾಯವನ್ನು ಕೃಷ್ಣರಾಯನು ನೀಡಿದನು. ಈ ಶಾಸನದಿಂದ ತಿಳಿದು ಬರುವ ಅಂಶ ವೆಂದರೆ ದಾನಿಯ ಭಾಗಕ್ಕೆ ಬರುವ ಪ್ರಸಾದ ಭಾಗದಿಂದ ಬ್ರಾಹ್ಮಣ ಭೋಜನವಾಗುವ ಸತ್ರವೊಂದು ನಡೆಯುತ್ತಿದ್ದಿತೆಂದೂ, ಕೃಷ್ಣದೇವರಾಯನು ಈ ಪ್ರಸಾದದ ಭಾಗವನ್ನು ವ್ಯಾಸತೀರ್ಥರಿಂದ,ಅವರಿಗೆ ನೀಡಲಾದ ಈ ನಿವೇಶನ ದಲ್ಲಿ ನಿರ್ಮಿಸಲಾಗುವ ಮಠದಲ್ಲಿ ವಿತರಣೆ ಯಾಗ ಬೇಕೆಂದು ಆಜ್ಞೆ ಮಾಡಿದ. ಈಗ ವ್ಯಾಸತೀರ್ಥರಿಗೆ ನೀಡಿದ ನಿವೇಶನವು ಮೊದಲಿಗೆ ಆಲಯದ ಅರ್ಚಕ ನಾಗಿದ್ದ ನಂಬಿ ಸಿರ್‌ಪ್ಪಯ್ಯನಿಗೆ ಸೇರಿದ್ದಿತು. ಆತ ದೇವಾಲಯದ ಹಲವು ಆಭರಣಗಳ ದುರುಪಯೋಗ

ಮಾಡಿದ್ದರಿಂದ ಸಾಳುವ ನರಸಿಂಹ-ನರಸಿಂಹರಾಯ ಮಹಾರಾಯರು-ಆತನ ಆಸ್ತಿಯನ್ನು ಮುಟ್ಟುಗೋಲು ಮಾಡಿಸಿ ಆಲಯಕ್ಕೆ ಸೇರಿಸಿದ್ದನು ಮೇಲೆ ಹೇಳಿದ ಗ್ರಾಮಗಳಲ್ಲಿ ದಾರತ್ತೂರು, ಚತ್ರವಾಡಿ, ತುರೈಯೂರು ಗಳನ್ನು 13-6-1513 ರಲ್ಲಿ ಕೃಷ್ಣದೇವರಾಯನು ದಾನ ನೀಡಿದವು ಗಳಾದರೆ (ತಿ.ತಿ.330,459) ತಾಳ್ಳಪಾಕ 6-7-1514 (ತಿ.ತಿ.201, 254,256) ರಲ್ಲಿಯೂ, ಮುಡಿಯೂರು ನಂತರದಲ್ಲಿ ಚಿನ್ನಾಜಿ ದೇವಿಯಿಂದಲೂ (ತಿ.ತಿ.202,257,262) ಪರಿಟಂ- (ಪ್ರಾಯಶಃ ಪಿರಾಟಿಕೊಳತೂರು) ತಿರುಮಲದೇವಿಯಿಂದಲೂ, (ತಿ.ತಿ.203,255, 261) ನೀಡಿದವಾಗಿವೆ. ಕಡೈಕುಟ್ಟನ್ ಪಡಿಯು ಬೇರಾವ ಶಾಸನದಲ್ಲೂ ಕಂಡುಬರದು.ಕರಕನಂಬಾಡು ಮಾತ್ರ ತಿ.ತಿ.330 ಹಾಗೂ 459 ರಲ್ಲಿ ಕಂಡುಬಂದರೂ ಇಡೀ ಪಟ್ಟಿಯಿರುವ ತಿ.ತಿ.246 ಯಲ್ಲಿ ಕಂಡುಬರದು. ಪ್ರಾಯಶಃ ತಿ.ತಿ.246 ಯಲ್ಲಿ ಕಂಡುಬರುವ ಕಡೈಕುಟ್ಟನ್ ಪಡಿಗೇ ಇವೆಲ್ಲ ಬೇರೆ ಬೇರೆ ಹೆಸರುಗಳಾಗಿರಬೇಕು.

### ಅಚ್ಯುತರಾಯ ಹಾಗೂ ತಿರುಮಲೆ

ಕೃಷ್ಣದೇವರಾಯನ ಮಲ ಸಹೋದರನೂ,ಉತ್ತರಾಧಿ ಕಾರಿಯೂ ಆದ ಅಚ್ಯುತರಾಯನು ಹೆಚ್ಚಿನ ಶಾಸನಗಳಲ್ಲಿ ಹೆಸರಿಸಲ್ಪ ಟ್ಟಿದ್ದಾನೆ. ಇವನ ಅತಿ ಪ್ರಾಚೀನ ಶಾಸನವೆಂದರೆ ಜಿ.ಟಿ.318 ಆಗಿದ್ದು ಇಲ್ಲಿ ರಘುನಾಥ ಸ್ವಾಮಿಗೆ ಎಂದರೆ ತಿರುಪತಿಯ ಶ್ರೀರಾಮ ಅಥವಾ ಕೊದಂಡರಾಮಸ್ವಾಮಿಗೆ,ಅಚ್ಯುತರಾಯನ ಮೇಲ್ಮೆಗಾಗಿ ಕುಮಾರ ರಾಮಾನುಜಯ್ಯಂಗಾರ್ಯನು ರಥವನ್ನು ನಿರ್ಮಿಸಿದುದನ್ನು ಹೇಳ ಲಾಗಿದೆ.ಇದರ ಕಾಲ (1530 ರ ಜನವರಿ 14 ರ ಶುಕ್ರವಾರ) ಶಕವರ್ಷ 1451 ರ ವಿರೋಧಿ ನಾಮ ಸಂವತ್ಸರದ ತೈ ಮಾಸದ 18 ನೇ ದಿನ. ಆದರೆ ಅಚ್ಯುತರಾಯನು ಈ ಹಿಂದೆಯೆ ಶ್ರೀ ವೆಂಕಟೇಶ್ವರ ಸ್ವಾಮಿಯ ಶಂಖೋದಕದಿಂದ ಸ್ನಾತಗಾಗಿ ತಿರುಮಲೆಯಲ್ಲಿ ಪಟ್ಟಾಭಿ ಷಿಕ್ತನಾದಾಗಿ ನಿಂದಲೇ ರಾಜ್ಯವಾಳಲಾರಂಭಿಸಿದ್ದ.

### ಮೊದಲ ಸಂದರ್ಶನ:-

ಅಚ್ಯುತರಾಯನು ತಿರುಮಲೆಯಲ್ಲೂ, ತಿರುಪತಿಯಲ್ಲೂ ಹಲ ವಾರು ರೀತಿಯ ಬೆಲೆಬಾಳುವ ಕಾಣಿಕೆ ದೇಣಿಗೆಗಳನ್ನು ನೀಡಿದ್ದರೂ ಕೃಷ್ಣ ದೇವರಾಯನಂತೆ ಪದೇ ಪದೇ ತಿರುಮಲೆಗೆ ಬಂದು ಸ್ವಾಮಿಯನ್ನು ಸೇವಿಸಿದವನಲ್ಲ. ಸ್ಪಷ್ಟವಾಗಿ ಕಂಡುಬರುವ ಒಂದು ಭೇಟಿಯೆಂದರೆ (1533 ರ ಜನವರಿ 31 ರಂದು) ಶಕವರ್ಷ 1454 ರ ನಂದನ ಸಂವತ್ಸ ರದ ಕುಂಭ ಮಾಸದ್ದು. ಆತ ತಿರುವೆಂಕಟ ಮುಡೈಯಾನನ ದರ್ಶನಕ್ಕೆ ಈ ಬಾರಿ ತನ್ನ ಪತ್ನಿ ವರದಾಜಿ ಅಮ್ಮ ಹಾಗೂ ಮಗ ಕುಮಾರ ವೆಂಕಟಾದ್ರಿ ಅವರೊಡನೆ ಬಂದಿದ್ದ. ಕಪಿಲ ಪಶು (ಕಪಿಲಧೇನು) ಸ್ವರ್ಣವರ್ಷ (ಸ್ವರ್ಣಮೇರು ಅಥವಾ ಕಾಂಚನಮೇರು ಅಥವಾ ಮಹಾಮೇರು) ದಾನಗಳನ್ನು ಮಾಡಿ, ಶ್ರೀ ವೆಂಕಟೇಶ್ವರಸ್ವಾಮಿಗೆ, ಮುತ್ತು, ರತ್ನ,ವಜ್ರ, ವೈಢೂರ್ಯ ಖಚಿತವಾದ ನಿಲುವಂಗಿಯನ್ನು ಅರ್ಪಿಸಿ, ನಾಲ್ಕು ಪೊನ್ ವಳೈಯಲ್,(ಚಿನ್ನದ ಬಾಹು ವಲಯ) ವಜ್ರಖಚಿತವಾದ ಜೋಡಿ ಉಚ್ಚಿಪ್ಪುಗಳನ್ನೂ,ಕಿರೀಟದ ಕೊನೆಗೆ ವಜ್ರಖಚಿತ ಕೂಟವನ್ನೂ , ವಿವಿಧ ಆಕಾರದ ಚಿನ್ನದ ಮಣಿಗಳ ನೀಳವಾದ ಹಾರವನ್ನೂ ಸಮರ್ಪಿಸಿದ. ಈ ಬಾರಿ ಅರ್ಚಕರು ಶ್ರೀನಿವಾಸ ಸಹಸ್ರ ನಾಮವನ್ನು ಹೇಳುತ್ತಿರಲು ತಾನೇ ಸ್ವಾಮಿಗೆ ಅರ್ಚನೆಯನ್ನು ಮಾಡಿದ. (ತಿ.ತಿ.-453) 1533 ರ ಜನವರಿ 31 ರಲ್ಲಿನ ಅಚ್ಯುತರಾಯನು ಈ ಸ್ವಾಮಿ ಸಂದರ್ಶನವೂ, ಆತ ತಿರುವಾಂ ಕೂರಿನ ಮೇಲೆ ಧಾಳಿಮಾಡಿ ಅಲ್ಲಿನ ತಿರುವಾಡಿಯಿಂದ ಕಪ್ಪಗಾಣಿಕೆ ವಸೂಲು ಮಾಡಿ,ತಂಬುಚ್ಚಿ ನಾಯಕ ಸಾಳುವ ನಾಯಕರನ್ನು ಅಧೀನ ಪಡಿಸಿಕೊಂಡು,ಪಾಂಡ್ಯರಾಜ ಕುವರಿಯನ್ನು ಮದುವೆಯಾಗಿ, ತಾಮ್ರ ಪರ್ಣಿ ನದಿಯ ದಡದಮೇಲೆ ವಿಜಯ ಸ್ತಂಭವನ್ನು ನಿಲ್ಲಿಸಿದ ನಂತರ, ತನ್ನ ರಾಣಿ ವರದಾಂಬಿಕೆ ಮತ್ತು ಮಗ ಚಿಕ್ಕ ವೆಂಕಟಾದ್ರಿಯವರೊಡನೆ ಶಕವರ್ಷ 1455 ನಂದನ ಸಂವತ್ಸರದಲ್ಲಿ (14-7-1532) ಕಂಚಿಯ ಶ್ರೀಹರಿಯ ಸನ್ನಿಧಿಯಲ್ಲಿ ತನ್ನ ವಿಜಯದ ಗುರುತಿಗೆ ಮಾಡಿದ ಮುಕ್ತ ತುಲಾಭಾರ ಸೇವೆಯ ಒಂದು ವರ್ಷದ ನಂತರದ್ದು. (ಮ.ಶಾ.ವ-1924. ಪ್ಯಾರ - 45 ಹಾಗೂ 1924ಏ - 178.)

ಎರಡನೆಯ ಸಂದರ್ಶನ: ಮನ್ಮಥನಾಮ ಸಂವತ್ಸರದ ಶಕ 1457ರ (1535 ರ ಡಿಸೆಂಬರ್ 26) ಎರಡು ದಾಖಲೆಗಳ ಮೂಲಕ (ತಿ.ತಿ.544,546) ಅಚ್ಯುತರಾಯನು ವೆಂಕಟೇಶ್ವರಸ್ವಾಮಿಯನ್ನು ಎರಡನೆಯ ಬಾರಿ ದರ್ಶಿಸಿದ್ದನ್ನು ತಿಳಿಯಬಹುದು. ಈ ಬಾರಿ ಆತ ಎರಡು ಹೊಸ ಉತ್ಸವಗಳನ್ನು ಏರ್ಪಡಿಸಿದ. ತಿರುವೆಂಕಟ ಮುಡೈಯಾನ್ ಹಾಗೂ ಅಲಮೇಲುಮಂಗೈ ನಾಚ್ಚಿಯಾರುಗಳಿಗೆ ವರ್ಷದಲ್ಲಿ ಐದು ದಿನ ನಡೆಸುವ ಲಕ್ಷ್ಮೀದೇವಿ ಮಹೋತ್ಸವ ಹಾಗೂ ವರ್ಷದಲ್ಲಿ ಪುನರ್ವಸು ನಕ್ಷತ್ರವಿರುವ ಹದಿಮೂರು ದಿನಗಳಲ್ಲಿ ರಘುನಾಥ (ಶ್ರೀರಾಮ) ಸೀತಾದೇವಿ ಹಾಗೂ ಇಳೆಯ ಪೆರುಮಾಳ್ (ಲಕ್ಷ್ಮಣ) ಗಳಿಗೆಂದು ಪುನರ್ವಸು ತಿರುನಾಳ್ ಉತ್ಸ ವದ ಏರ್ಪಾಡು ಮಾಡಿದನು.ಈ ಎರಡೂ ಉತ್ಸವಗಳಿಗಾಗಿ ಕೊಂಡ ವೀಡು ಸೀಮೆಯಲ್ಲಿನ ಎರಡು ಗ್ರಾಮಗಳ 300 ಹಾಗೂ 60 ರೇಖೈ ಪೊನ್‌ಗಳ ಉತ್ತರಾಯವನ್ನು ಆಲಯಕ್ಕೆ ನೀಡಬೇಕೆಂದೂ,ಶ್ರೀ ಭಂಡಾರದಿಂದ ಎಲ್ಲ ವಸ್ತುಗಳನ್ನೂ ನೀಡಬೇಕೆಂದು ಏರ್ಪಡಿಸಿದ.

### ಮೂರನೆಯ ಸಂದರ್ಶನ:

ಶಕ 1448 ನೇ ದುರ್ಮುಖಿ ವರ್ಷದಲ್ಲಿ ಅಚ್ಯುತರಾಯನು ಶ್ರೀ ವೆಂಕಟೇಶ್ವರಸ್ವಾಮಿ ಆಲಯಕ್ಕೆ ಬಂದಿರಬೇಕು ಎಂಬುದು ಅವನ ಹಲವು ಅಧಿಕಾರಿಗಳು-ಬಚ್ಚರಸಯ್ಯ,ರಾಮಭಟ್ಲು,ಅಡೈಯಪ್ಪಂ ವಿಶ್ವನಾಥ

ನಾಯಕ,ಸಲಕರಾಜ ಸಿಂಗರಾಜ,ಇಮ್ಮಡಿಎಲ್ಲಪ್ಪಯ್ಯ ಹಾಗೂ ಕೃಷ್ಣಪ್ಪ ನಾಯಕ-ಮೊದಲಾದವರು ತಮ್ಮಗಳಲ್ಲಿನ ಪ್ರತಿಯೊಬ್ಬರ ಹೆಸರಿನಲ್ಲೂ ವರ್ಷಕ್ಕೆ ಒಮ್ಮೆ 300 ಅಪ್ಪಪಡಿಗಳನ್ನು ದೇವರಿಗೆ ನೈವೇದ್ಯ ಮಾಡ ಬೇಕೆಂದು ಪ್ರತಿಯೊಬ್ಬರೂ 15000 ನರ್ಪಣಗಳನ್ನು ಶ್ರೀ ಭಂಡಾರಕ್ಕೆ ನೀಡಿದರು ಎಂಬುದರಿಂದ ನಿರ್ಧಾರವಾಗುತ್ತದೆ. (ಕ್ರಿ.ಶ.12-1-1537) ತಿ.ತಿ.396 ಶಾಸನವು ಹೆಸರು ಲುಪ್ತವಾದ ಒಬ್ಬ ಅಧಿಕಾರಿಯು, ಅಚ್ಯುತ ರಾಯನ ಅಪ್ಪಣೆಯಂತೆ ತಿರುವೆಂಕಟಮುಡ್ಯೆಯಾನನಿಗೆ ತಿರುಮಲೆ ಯಲ್ಲಿ ವರ್ಷದಲ್ಲಿ ನಡೆಯುವ ಎಂಟು ತಿರುಕ್ಕೊಡಿ ತಿರುನಾಳುಗಳ ಏಳನೇ ದಿನಗಳಲ್ಲಿ ನೈವೇದ್ಯಕ್ಕಾಗಿ ಮಲ್ಲಪುರಂ ಗ್ರಾಮವನ್ನು ದತ್ತಿ ಹಾಕಿ ಕೊಟ್ಟಿದ್ದನ್ನೂ, ದಾನಿಯ ಭಾಗದ ಪ್ರಸಾದದ ಕಾಲ ಸೋಲವನ್ನು ಒಬ್ಬಾ ನೊಬ್ಬ ಅಪ್ಪಯ್ಯನಿಗೆ ನೀಡಬೇಕೆಂದೂ ಕಟ್ಟು ಮಾಡಿದ್ದನ್ನು ದಾಖಲಿ ಸುತ್ತದೆ.

ಶಕವರ್ಷ 1454ರ ನಂದನ ಸಂವತ್ಸರದಲ್ಲಿ ತಾನು ತಿರುಮಲೆ ಯನ್ನು ಮೊದಲಬಾರಿ ದರ್ಶಿಸುವುದಕ್ಕೂ ಮೊದಲು ಒಂದೂವರೆ ವರ್ಷದ ಹಿಂದೆ ಅಚ್ಯುತರಾಯನು ಕಪಿಲ ತೀರ್ಥದ ಪುಷ್ಕರಿಣಿಗೆ ಹಾಸು ಗಲ್ಲು ಮೆಟ್ಟಿಲುಗಳನ್ನು ಮಾಡಿಸಿ ಅದಕ್ಕೆ ಚಕ್ರತೀರ್ಥವೆಂದು ಪುನ ರ್ನಾಮಕರಣ ಮಾಡಿ,ಅದರ ಎಡ ಬಲ ಭಾಗಗಳಲ್ಲಿ- ಸಂಧ್ಯಾವಂದನ ಮಂಟಪಗಳನ್ನು ಕಟ್ಟಿಸಿ, ಪುಷ್ಕರಿಣಿಯ ನಾಲ್ಕೂ ಕಡೆಯಲ್ಲೂ ಕಲ್ಲಿನಲ್ಲಿ ಸುದರ್ಶನ ಚಕ್ರವನ್ನು ಕೆತ್ತಿಸಿದ. ಇವುಗಳಲ್ಲಿನ ಮೂರು ಕಂಡು ಬರುತ್ತಿದ್ದು ನಾಲ್ಕನೆಯದು ನಂತರದ ಕಾಲದ ಕಟ್ಟಡದ ಗೋಡೆಯಲ್ಲಿ ಸೇರಿ ಹೋಗಿದೆ. ಇವು ಶಕ 1453 ರ ಖರ ಸಂವತ್ಸರವಾಗಿದ್ದು (25-ಜೂನ್-1531) ತೆಲುಗು, ಕನ್ನಡ, ತಮಿಳುಗಳಲ್ಲಿ ಅಚ್ಯುತರಾಯನ ಚತುರ್ವಿಧ ಪುರುಷಾರ್ಥ ಸಿದ್ಧಿಗಾಗಿ ಈ ಧರ್ಮಕಾರ್ಯ ನಡೆಯಿತೆಂದು ದಾಖಲು ಮಾಡುತ್ತವೆ.ಈ ದಾನ ಕಾರ್ಯಗಳ ಜೊತೆಗೇ ಅಚ್ಯುತರಾಯನು ತಿರುಪತಿಯಲ್ಲಿ ಅಚ್ಯುತರಾಯ ಪೆರುಮಾಳ್ ದೇವಾಲಯವನ್ನು ಕೊತ್ತೂರು ಗ್ರಾಮದಲ್ಲಿನ (ತಿರುವೆಂಗಡ ಮುಡ್ಯೆಯಾನನ ತಿರುವಿಡ್ಯೆ ಯಾಟದ ಗ್ರಾಮದ ಈ ಸ್ಥಳಕ್ಕೆ ಪರಿಹಾರವಾಗಿ 2400 ನರ್ಪಣಗಳನ್ನು ಶ್ರೀ ಭಂಡಾರಕ್ಕೆ ಸಲ್ಲಿಸಿ,) ಆಲಯದ ಸುತ್ತಲೂ 120 ಮನೆಗಳ ಒಂದು ಅಗ್ರಹಾರವನ್ನೂ,ನಿರ್ಮಿಸಿದ. ಈ ಆಲಯದ ನಿತ್ಯಪೂಜೆಗಾಗಿ ಪರಟಿ ಪುತ್ತೂರು ಗ್ರಾಮವನ್ನು ದತ್ತವಾಗಿಸಿ ಅದರ ಆದಾಯವನ್ನು ಇಪ್ಪತ್ತು ಭಾಗಗಳನ್ನಾಗಿ ಮಾಡಿ ಆಲಯಕ್ಕೆ ನೀಡಿದ. ಶಕ 1450ರ ವಿಳಂಬಿ ಸಂವತ್ಸ ರದಲ್ಲಿ (8-2-1539) 120 ಮನೆಗಳಲ್ಲಿ ನೂರು ಮನೆಗಳನ್ನು ಅಲ್ಲಿ ವಾಸಿಸುವವರಿಗೆ ಎಲ್ಲ ವಿಧ ಹಕ್ಕುಗಳೊಡನೆ ದಾನಮಾಡಿ,ಆಲಯದ ನಿತ್ಯಪೂಜೆ ಕೈಂಕರ್ಯಗಳನ್ನು ನೋಡಿಕೊಂಡು,ಆದಾಯದ ಇಪ್ಪತ್ತು ಭಾಗದ ಹಕ್ಕುದಾರರಾದ ಇಪ್ಪತ್ತು ಕುಟುಂಬಗಳಿಗೆ ಮಾತ್ರ ವಾಸಿಸುವ ಹಕ್ಕಿನೊಡನೆ ಇಪ್ಪತ್ತು ಮನೆಗಳನ್ನು ನೀಡಿದ. ಹೀಗೆ ಕಟ್ಟಲೆಗಳನ್ನು ವಿಧಿಸಲು ಕಾರಣ ಮನೆಗಳ ಪರಭಾರೆಯಿಂದಾಗಿ ಭವಿಷ್ಯದಲ್ಲಿ ಅರ್ಚಕ ಸೇವಾ ಸಿಬ್ಬಂದಿ ಮನೆಯಿಲ್ಲದವರಾದಾಗಿ ಆಲಯದ ನಿತ್ಯಪೂಜೆ,ಸೇವೆಗಳು ನಿಂತು ಹೋಗಬಹುದು ಎಂಬ ಭಯವೇ ಆಗಿರಬೇಕು. ಅಚ್ಯುತರಾಯಪುರವೆಂಬ ಈ ಅಗ್ರಹಾರವು ತಿರುಪತಿಯ ಉತ್ತರದ ಭಾಗದಲ್ಲಿ ಕಪಿಲತೀರ್ಥದ ಬಳಿ ಉಂಟಾಗಿರಬೇಕು.ಈಗ ಅಲ್ಲಿ ಜೀರ್ಣಶೀರ್ಣವಾದ ಒಂದು ಮಹಾ ದ್ವಾರಗೋಪುರ ಮಾತ್ರವೇ ನಿಂತಿದ್ದು ಅದರ ಪಶ್ಚಿಮಕ್ಕೆ ಧರಾಶಾಯಿಯಾದ ತಳಗಟ್ಟು ಜೀರ್ಣವಾದ ಕಲ್ಲಿನ ಮೂರ್ತಿಗಳು ಮಾತ್ರವೇ ಇವೆ.

(ಶಿಥಿಲವಾದ ಈ ಮಹಾದ್ವಾರ ಗೋಪುರವನ್ನು 1998 ರಲ್ಲಿ ತಿರು ಮಲೆಯ ಮೆಟ್ಟಿಲಹಾದಿಯ ಮೊಣಕಾಲುಮುರಿ ಸ್ಥಳದಲ್ಲಿ ಬೆಟ್ಟಕ್ಕೆ ಹೋಗುವ ಹಾಗೂ ಬೆಟ್ಟದಿಂದ ಇಳಿಯುವ ವಾಹನ ಮಾರ್ಗಗಳ ಸಂಧಿ ಸ್ಥಾನದಲ್ಲಿ ಸ್ಥಾಪಿಸಲಾಗಿದೆ - ಅನುವಾದಕ)

(ಮುಂದುವರೆಯುತ್ತದೆ)



ಶ್ರೀಮದ್ವದೇವ ಪದಪದ್ಮ ನಿಷೇವಕೇಣ
ಶ್ರೀವೇಂಕಟಾದ್ರಿ ರಮಣೇನ ಸುಭಕ್ತಿನಾಲಂ
ಸ್ತುತ್ಯಾ ಮಯಾಚರಿತಯಾ ಪರಮಾದರೇಣ ಯಃ
ಸ್ತೌತಿ ತಂ ನರವರಂ ನ ಜಹಾತಿ ಮಧ್ವಃ ॥12॥

ಆಚಾರ್ಯ ಮಧ್ವರ ಪಾದಸೇವಕನಾದ, ಕೇವಲ ಶ್ರೀವೇಂಕಟೇಶನ ಪದಪದ್ಮಗಳಲ್ಲಿನ ಭಕ್ತಿಯಿಂದ, ಆದರ ಪೂರ್ವಕವಾಗಿ ನನ್ನಿಂದ ರಚಿಸಲ್ಪಟ್ಟ ಈ ಸ್ತುತಿಯನ್ನು ಯಾರು ಭಕ್ತಿಯಿಂದ ಪಠಿಸುತ್ತಾರೋ ಅವರನ್ನು ಶ್ರೀ ಮಧ್ವರು ಎಂದೂ ಕೈ ಬಿಡುವುದಿಲ್ಲ.

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ




Artist-K.Viswanathan, New Delhi



ಕಟಕ ಮಾಸ ಶುಕ್ಲ ಪಕ್ಷದ್ವಾದಶಿ
(30-07-2023) ರಂದು
ತುಲಸಿ ಮಹಾತ್ಮ್ಯ ಆಸ್ಥಾನ
ನಡೆಯಲಿದೆ.
ಈ ದಿನ ತಿರುಪತಿ
ಶ್ರೀ ಗೋವಿಂದರಾಜ  ಸ್ವಾಮಿಯವರಿಗೆ
ಪ್ರಾತಃ ಕಾಲಾರಾಧನೆ
ನಂತರ  ಗರುಡವಾಹನಾರೂಢನಾಗಿ
ತಿರುಬೀದಿಗಳಲ್ಲಿ  ಉತ್ಸವಕ್ಕೆ
ಬರುತ್ತಾರೆ.
ಹಿಂತಿರುಗಿ ಆಲಯಕ್ಕೆ
ಬರುವಾಗ ಜಯವಿಜಯರ
ದ್ವಾರದ ಮುಂದೆ ಸ್ವಾಮಿಯವರಿಗೆ
ಆಸ್ಥಾನ ನಡೆಯುತ್ತದೆ.
ಆಸ್ಥಾನದಲ್ಲಿ ತುಲಸಿ ಮಹಾತ್ಮ್ಯ
ಪುರಾಣವನ್ನು ಪಠಿಸುತ್ತಾರೆ.
ನಂತರ ಆಸ್ಥಾನವನ್ನು ಪೂರ್ಣಗೊಳಿಸಿ
ಸನ್ನಿಧಿಗೆ ಉಪಸ್ಥಿತಿಗೆ
ಆಹ್ವಾನಿಸಲಾಗುತ್ತದೆ.
ನಂತರ ಎಂದಿನಂತೆ  ನಿತ್ಯ
ಕೈಂಕರ್ಯಗಳು ನಡೆಯುತ್ತದೆ.
ಈ ಸಂದರ್ಭದಲ್ಲಿ
ಸಪ್ತಗಿರಿ ಓದುಗರಿಗಾಗಿ
ತುಲಸೀ ಮಾತಾ
ಅಷ್ಟೋತ್ತರ
ಶತನಾಮಾವಳಿಯನ್ನು
ನೀಡುತ್ತಿದೆ.

# ಓಂ ಶ್ರೀ ತುಲಸೀ ಅಷ್ಟೋತ್ತರ ಶತನಾಮಾವಳಿಃ

ಓಂ ತುಲಸ್ಯೈ ನಮಃ
ಓಂ ಪಾವನ್ಯೈ ನಮಃ
ಓಂ ಪೂಜ್ಯಾಯೈ ನಮಃ
ಓಂ ಬೃಂದಾವನನಿವಾಸಿನ್ಯೈ ನಮಃ
ಓಂ ಜ್ಞಾನದಾತ್ರ್ಯೈ ನಮಃ
ಓಂ ಜ್ಞಾನಮಯ್ಯೈ ನಮಃ
ಓಂ ನಿರ್ಮಲಾಯೈ ನಮಃ
ಓಂ ಸರ್ವಪೂಜಿತಾಯೈ ನಮಃ
ಓಂ ಸತ್ಯೈ ನಮಃ
ಓಂ ಪತಿವ್ರತಾಯೈ ನಮಃ 10
ಓಂ ಬೃಂದಾಯೈ ನಮಃ
ಓಂ ಕ್ಷೀರಾಬ್ಧಿಮಥನೋದ್ಭವಾಯೈ ನಮಃ
ಓಂ ಕೃಷ್ಣವರ್ಣಾಯೈ ನಮಃ
ಓಂ ರೋಗಹಂತ್ರ್ಯೈ ನಮಃ
ಓಂ ತ್ರಿವರ್ಣಾಯೈ ನಮಃ
ಓಂ ಸರ್ವಕಾಮದಾಯೈ ನಮಃ
ಓಂ ಲಕ್ಷ್ಮೀಸಖ್ಯೈ ನಮಃ
ಓಂ ನಿತ್ಯಶುದ್ಧಾಯೈ ನಮಃ
ಓಂ ಸುದತ್ಯೈ ನಮಃ
ಓಂ ಭೂಮಿಪಾವನ್ಯೈ ನಮಃ 20
ಓಂ ಹರಿದ್ರಾನ್ನೈಕನಿರತಾಯೈ ನಮಃ
ಓಂ ಹರಿಪಾದಕೃತಾಲಯಾಯೈ ನಮಃ
ಓಂ ಪವಿತ್ರರೂಪಿಣ್ಯೈ ನಮಃ
ಓಂ ಧನ್ಯಾಯೈ ನಮಃ
ಓಂ ಸುಗಂಧಿನ್ಯೈ ನಮಃ
ಓಂ ಅಮೃತೋದ್ಭವಾಯೈ ನಮಃ
ಓಂ ಸುರೂಪಾರೋಗ್ಯದಾಯೈ ನಮಃ
ಓಂ ತುಷ್ಟಾಯೈ ನಮಃ
ಓಂ ಶಕ್ತಿತ್ರಿತಯರೂಪಿಣ್ಯೈ ನಮಃ
ಓಂ ದೇವ್ಯೈ ನಮಃ 30
ಓಂ ದೇವರ್ಷಿಸಂಸ್ತುತ್ಯಾಯೈ ನಮಃ
ಓಂ ಕಾಂತಾಯೈ ನಮಃ
ಓಂ ವಿಷ್ಣುಮನಃಪ್ರಿಯಾಯೈ ನಮಃ
ಓಂ ಭೂತವೇತಾಲಭೀತಿಘ್ನ್ಯೈ ನಮಃ
ಓಂ ಮಹಾಪಾತಕನಾಶಿನ್ಯೈ ನಮಃ
ಓಂ ಮನೋರಥಪ್ರದಾಯೈ ನಮಃ
ಓಂ ಮೇಧಾಯೈ ನಮಃ
ಓಂ ಕಾಂತ್ಯೈ ನಮಃ
ಓಂ ವಿಜಯದಾಯಿನ್ಯೈ ನಮಃ
ಓಂ ಶಂಖಚಕ್ರಗದಾಪದ್ಮಧಾರಿಣ್ಯೈ ನಮಃ 40
ಓಂ ಕಾಮರೂಪಿಣ್ಯೈ ನಮಃ
ಓಂ ಅಪವರ್ಗಪ್ರದಾಯೈ ನಮಃ
ಓಂ ಶ್ಯಾಮಾಯೈ ನಮಃ
ಓಂ ಕೃಶಮಧ್ಯಾಯೈ ನಮಃ
ಓಂ ಸುಕೇಶಿನ್ಯೈ ನಮಃ
ಓಂ ವೈಕುಂಠವಾಸಿನ್ಯೈ ನಮಃ
ಓಂ ನಂದಾಯೈ ನಮಃ
ಓಂ ಬಿಂಬೋಷ್ಠ್ಯೈ ನಮಃ
ಓಂ ಕೋಕಿಲಸ್ವರಾಯೈ ನಮಃ
ಓಂ ಕಪಿಲಾಯೈ ನಮಃ 50
ಓಂ ನಿಮ್ನಗಾಜನ್ಮಭೂಮ್ಯೈ ನಮಃ
ಓಂ ಆಯುಷ್ಯದಾಯಿನ್ಯೈ ನಮಃ
ಓಂ ವನರೂಪಾಯೈ ನಮಃ
ಓಂ ದುಃಖನಾಶಿನ್ಯೈ ನಮಃ
ಓಂ ಅವಿಕಾರಾಯೈ ನಮಃ
ಓಂ ಚುತುರ್ಭುಜಾಯೈ ನಮಃ
ಓಂ ಗುರುತ್ಮದ್ವಾಹನಾಯೈ ನಮಃ
ಓಂ ಶಾಂತಾಯೈ ನಮಃ
ಓಂ ದಾಂತಾಯೈ ನಮಃ
ಓಂ ವಿಘ್ನನಿವಾರಿಣ್ಯೈ ನಮಃ 60

ಓಂ ಶ್ರೀವಿಷ್ಣುಮೂಲಿಕಾಯೈ ನಮಃ
ಓಂ ಪುಷ್ಟ್ಯೈ ನಮಃ
ಓಂ ತ್ರಿವರ್ಗಫಲದಾಯಿನ್ಯೈ ನಮಃ
ಓಂ ಮಹಾಶಕ್ತ್ಯೈ ನಮಃ
ಓಂ ಮಹಾಮಾಯಾಯೈ ನಮಃ
ಓಂ ಲಕ್ಷ್ಮೀವಾಣೀಸುಪೂಜಿತಾಯೈ ನಮಃ
ಓಂ ಸುಮಂಗಳ್ಯರ್ಚನಪ್ರೀತಾಯೈ ನಮಃ
ಓಂ ಸೌಮಂಗಳ್ಯವಿವರ್ಧಿನ್ಯೈ ನಮಃ
ಓಂ ಚಾತುರ್ಮಾಸ್ಯೋತ್ಸವಾರಾಧ್ಯಾಯೈ ನಮಃ
ಓಂ ವಿಷ್ಣುಸಾನ್ನಿಧ್ಯದಾಯಿನ್ಯೈ ನಮಃ 70
ಓಂ ಉತ್ಥಾನದ್ವಾದಶೀಪೂಜ್ಯಾಯೈ ನಮಃ
ಓಂ ಸರ್ವದೇವಪ್ರಪೂಜಿತಾಯೈ ನಮಃ
ಓಂ ಗೋಪೀರತಿಪ್ರದಾಯೈ ನಮಃ
ಓಂ ನಿತ್ಯಾಯೈ ನಮಃ
ಓಂ ನಿರ್ಗುಣಾಯೈ ನಮಃ
ಓಂ ಪಾರ್ವತೀಪ್ರಿಯಾಯೈ ನಮಃ
ಓಂ ಅಪಮೃತ್ಯುಹರಾಯೈ ನಮಃ
ಓಂ ರಾಧಾಪ್ರಿಯಾಯೈ ನಮಃ
ಓಂ ಮೃಗವಿಲೋಚನಾಯೈ ನಮಃ
ಓಂ ಅಮ್ಲಾನಾಯೈ ನಮಃ 80
ಓಂ ಹಂಸಗಮನಾಯೈ ನಮಃ
ಓಂ ಕಮಲಾಸನವಂದಿತಾಯೈ ನಮಃ
ಓಂ ಭೂಲೋಕವಾಸಿನ್ಯೈ ನಮಃ
ಓಂ ಶುದ್ಧಾಯೈ ನಮಃ
ಓಂ ರಾಮಕೃಷ್ಣಾದಿಪೂಜಿತಾಯೈ ನಮಃ
ಓಂ ಸೀತಾಪೂಜ್ಯಾಯೈ ನಮಃ
ಓಂ ರಾಮಮನಃಪ್ರಿಯಾಯೈ ನಮಃ
ಓಂ ನಂದನಸಂಸ್ಥಿತಾಯೈ ನಮಃ
ಓಂ ಸರ್ವತೀರ್ಥಮಯ್ಯೈ ನಮಃ
ಓಂ ಮುಕ್ತಾಯೈ ನಮಃ 90
ಓಂ ಲೋಕಸೃಷ್ಟಿವಿಧಾಯಿನ್ಯೈ ನಮಃ
ಓಂ ಪ್ರಾತರ್ದೃಶ್ಯಾಯೈ ನಮಃ
ಓಂ ಗ್ಲಾನಿಹಂತ್ರ್ಯೈ ನಮಃ
ಓಂ ವೈಷ್ಣವ್ಯೈ ನಮಃ
ಓಂ ಸರ್ವಸಿದ್ಧಿದಾಯೈ ನಮಃ
ಓಂ ನಾರಾಯಣ್ಯೈ ನಮಃ
ಓಂ ಸಂತತಿದಾಯೈ ನಮಃ
ಓಂ ಮೂಲಮೃದ್ಧಾರಿಪಾವನ್ಯೈ ನಮಃ
ಓಂ ಅಶೋಕವನಿಕಾಸಂಸ್ಥಾಯೈ ನಮಃ
ಓಂ ಸೀತಾಧ್ಯಾತಾಯೈ ನಮಃ 100
ಓಂ ನಿರಾಶ್ರಯಾಯೈ ನಮಃ
ಓಂ ಗೋಮತೀಸರಯೂತೀರರೋಪಿತಾ ಯೈ ನಮಃ
ಓಂ ಕುಟಿಲಾಲಕಾಯೈ ನಮಃ
ಓಂ ಅಪಾತ್ರಭಕ್ಷ್ಯಪಾಪಘ್ನ್ಯೈ ನಮಃ
ಓಂ ದಾನತೋಯವಿಶುದ್ಧಿದಾಯೈ ನಮಃ
ಓಂ ಶ್ರುತಿಧಾರಣಸುಪ್ರೀತಾಯೈ ನಮಃ
ಓಂ ಶುಭಾಯೈ ನಮಃ
ಓಂ ಸರ್ವೇಷ್ಟದಾಯಿನ್ಯೈ ನಮಃ 108

**ಇತಿ ಶ್ರೀ ತುಲಸೀ ಅಷ್ಟೋತ್ತರ ಶತನಾಮಾವಳಿಃ ಸಮಾಪ್ತಿ**





2023, ಮೇ 21 ರಿಂದ 25 ರ ವರೆಗೆ ನಡೆದ ಶ್ರೀ ಗೋವಿಂದರಾಜ ಸ್ವಾಮಿಯವರ ಆಲಯದ ಮಹಾಸಂಪ್ರೋಕ್ಷಣೆಯ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರಾದ ಶ್ರೀ.ಪಿ. ಅಶೋಕ್‌ಕುಮಾರ್, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಮತ್ತು ತಿ.ತಿ.ದೇ., ಎಫ್.ಎ.ಸಿ.ಎ.ಓ. ಶ್ರೀ ಬಾಲಾಜಿ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.

















ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ, ರಂಪಚೋಡವರಂನಲ್ಲಿ ತಿ.ತಿ.ದೇ., ನೂತನವಾಗಿ ನಿರ್ಮಿಸಿದ ಶ್ರೀವೆಂಕಟೇಶ್ವರ ಸ್ವಾಮಿಯವರ ಆಲಯ ಮಹಾಸಂಪ್ರೋಕ್ಷಣೆಯ ದೃಶ್ಯಗಳು. ಈ ಕಾರ್ಯಕ್ರಮವು 2023, ಮೇ 17 ರಿಂದ 22 ರ ವರೆಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ರಾಜಮೆಂಡ್ರಿ ಸಂಸತ್ತಿನ ಸದಸ್ಯರು ಶ್ರೀ ಎಂ.ಭರತ್‌ರಾಮ್, ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ.ವಿ. ವೀರಬ್ರಹ್ಮ ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.




ಹಿರಿಯರು ಪ್ರತಿಯೊಬ್ಬರಿಗೂ ಆಶೀರ್ವದಿಸುವಾಗ "ನೂರು ವರ್ಷ ಸುಖವಾಗಿ ಬಾಳಿ" ಎನ್ನುತ್ತಾರೆ. ಆದರೆ ವರ್ಷದ ಲೆಕ್ಕಾಚಾರ ಆಂಗ್ಲ ದಿನಮಾಸದಲ್ಲಿ 365/366 ದಿನಗಳಾದರೆ ಹಿಂದೂ ಪದ್ಧತಿಯಲ್ಲಿ 360 ದಿನಗಳು. ಹದಿನೈದು ದಿನಗಳಿಗೆ ಒಂದು ಪಕ್ಷ ಎರಡು ಪಕ್ಷಗಳಿಗೆ ಒಂದು ಮಾಸ ಅರ್ಥಾತ್ 30 ದಿನಗಳಿಗೆ ಒಂದು ಮಾಸ. ಎರಡು ಮಾಸಗಳಿಗೆ ಅಂದರೆ 60 ದಿನಗಳಿಗೆ ಒಂದು ಋತು. ಮೂರು ಋತುಗಳಿಗೆ ಅರ್ಥಾತ್ 180 ದಿನಗಳಿಗೆ ಒಂದು ಅಯನ. ಎರಡು ಅಯನಗಳಿಗೆ 360 ದಿನಗಳಿಗೆ ಒಂದು ಸಂವತ್ಸರ ಅಥವಾ ವರ್ಷ. ಈ ಮಾಸಗಳನ್ನು ಪ್ರಧಾನವಾಗಿ ಚೈತ್ರ. ವೈಶಾಖಾದಿಕ್ರಮದಲ್ಲಿ ಅಥವಾ ಮೇಷ, ವೃಷಭ ಇತ್ಯಾದಿಯಾಗಿ ಗುರುತಿಸುತ್ತೇವೆ. ಚೈತ್ರ, ವೈಶಾಖ.... ಫಾಲ್ಗುಣ ಎಂದು ಗುರುತಿಸುವುದು ಚಾಂದ್ರಮಾನ ರೀತ್ಯಾ.ಸೌರಮಾನದ ಕ್ರಮದಲ್ಲಿಯಾದರೆ ಮೇಷ, ವೃಷಭ... ಮೀನ ಮಾಸ ಎಂದು ಹೇಳಲಾಗುತ್ತದೆ. ಈ ಮೇಷ ಮೊದಲಾದ ಮಾಸವನ್ನು ಗುರುತಿಸಲು ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಕ್ರಮಿಸುವ ಆಧಾರದ ಮೇಲೆ ಗುರುತಿಸಿದರೆ ಚೈತ್ರಾದಿ ಮಾಸಗಳನ್ನು ಪ್ರತಿಪದಾದಿ ಅಮಾವಾಸ್ಯೆಯವರೆಗಿನ ತಿಥಿಗಳಿಂದ ಗುರುತಿಸುತ್ತೇವೆ. ಸೂರ್ಯನ ರಾಶಿ ಬದಲಾವಣೆಯೇ ಸಂಕ್ರಮಣ. ಅರ್ಥಾತ್ ಬದಲಾವಣೆ ಪ್ರತಿಮಾಸದಲ್ಲೂ ಈ ಬದಲಾವಣೆ ನಡೆಯುತ್ತದೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಕ್ರಮಿಸಲು ಬೇಕಾಗುವ ಅವಧಿ ಮೂವತ್ತು ದಿನಗಳು. ಆದರೆ ಚಂದ್ರನು ನಕ್ಷತ್ರಗಳ ಆಧಾರದಿಂದ ಕ್ರಮಿಸಲು ಕಾರಣ ಇಪ್ಪತ್ತೇಳು ದಿನದಲ್ಲಿಯೇ ಒಂದು ಮಾಸವನ್ನು ಪೂರೈಸಿರುತ್ತಾನೆ. ಈ ವ್ಯತ್ಯಾಸದ ಫಲವಾಗಿ ಎರಡು ವರ್ಷ ಎಂಟು ತಿಂಗಳಾಗುವಾಗ ಸೂರ್ಯ ಚಂದ್ರರ ನಡುವಿನ ಅಂತರ ಇಪ್ಪತ್ತೊಂಬತ್ತುವರೆ ದಿನಗಳಾಗುತ್ತವೆ. ಹಾಗಾಗಿ ಆ ಒಂದು ಮಾಸದಲ್ಲಿ ಸೂರ್ಯ ಸಂಕ್ರಮಣವೇ ಆಗಿರುವುದಿಲ್ಲ. ಆದು ದರಿಂದ ಅದನ್ನು ಅಧಿಕಮಾಸವೆಂದು ಕರೆಯುತ್ತೇವೆ. ಇದನ್ನೇ ಜ್ಯೋತಿಷ್ಯ ಶಾಸ್ತ್ರದಲ್ಲಿ:-

ಅಸಂಕ್ರಾಂತಿ ಮಾಸ: ಅಧಿಮಾಸ: ಸ್ಫುಟಂ ಸ್ಯಾತ್, ಎಂದಿದ್ದಾರೆ. ಹೀಗೆ ನಡೆಯುವ ಸೂರ್ಯಸಂಕ್ರಮಣಗಳನ್ನು ವಿಷು, ಅಯನ, ಷಡಶೀತಿ, ವಿಷ್ಣುಪದ ಮುಂತಾದ ಹೆಸರಿನಿಂದ ಗುರುತಿಸಲಾಗುತ್ತದೆ.

ಹನ್ನೆರಡು ಸಂಕ್ರಮಣಗಳಿದ್ದರೂ ಪ್ರಧಾನವಾಗಿ ನಾಲ್ಕು ಸಂಕ್ರಮಣಗಳ ಆಚರಣೆ ಸೌರಮಾನ ಪದ್ಧತಿಯಲ್ಲಿದೆ. ಚಿತ್ರ ವಿಷು,ತುಲಾವಿಷು,ಮಕರ ಅರ್ಥಾತ್ ಉತ್ತರಾಯಣ, ಕರ್ಕಾಟಕ ಅಥವಾ ದಕ್ಷಿಣಾಯನ ಎಂದು ಈ ನಾಲ್ಕು ಸಂಕ್ರಮಣಗಳನ್ನು ಕರೆಯಲಾಗುತ್ತದೆ.

ಸೂರ್ಯನು ಧನುಸ್ ರಾಶಿಯಿಂದ ಮಕರರಾಶಿಯನ್ನು ಪ್ರವೇಶಿಸುವ ಕಾಲ ಮಕರಸಂಕ್ರಮಣ ಅಥವಾ 'ಉತ್ತರಾಯಣ'. ಮಿಥುನರಾಶಿಯಿಂದ ಕರ್ಕಾಟಕರಾಶಿಯನ್ನು ಪ್ರವೇಶಿಸುವ ಕಾಲವೇ 'ದಕ್ಷಿಣಾಯನ' ಅಥವಾ ಕರ್ಕಾಟಕ ಸಂಕ್ರಮಣ. ಚಾಂದ್ರಮಾನದಲ್ಲಿ ಯುಗಾದಿ ಚೈತ್ರ ಶುಕ್ಲ ಪ್ರತಿ ಪದೆಯ ದಿನವಾದರೆ, ಸೌರಮಾನದಲ್ಲಿ ಮೇಷರಾಶಿಗೆ ಸೂರ್ಯನು ಪ್ರವೇಶಿಸುವ ದಿನ. ಅದನ್ನೇ "ಚಿತ್ರವಿಷು" ಅಥವಾ ಮೇಷ ಸಂಕ್ರಮಣವೆನ್ನುತ್ತೇವೆ. ಕನ್ಯಾರಾಶಿಯಿಂದ ತುಲಾ ರಾಶಿಗೆ ಪ್ರವೇಶಿಸುವ ಕಾಲ "ತುಲಾವಿಷು" ಎನಿಸಿದೆ.


ಅಯನಗಳ ಅವಧಿ ಆರು ತಿಂಗಳಿರುವಂತೆ ವಿಷು ಸಂಕ್ರಮಣದ ಅವಧಿಯೂ ಸಹ ಆರು ತಿಂಗಳೇ ಇರುತ್ತದೆ. ಚೈತ್ರದಿಂದ ಆಶ್ವಯುಜ ಮಾಸದ ಅವಧಿ ಆರುತಿಂಗಳು. ಮಾರ್ಗಶಿರದಿಂದ ಚೈತ್ರಕ್ಕೆ ಪುನಃ ಆರು ತಿಂಗಳು ಚೈತ್ರದಲ್ಲಿ ಚಿತ್ರವಿಷು ಅಥವಾ ಮೇಷಸಂಕ್ರಮಣ ಇರುತ್ತದೆ. ಅದರಂತೆ ಆಶ್ವಯುಜದಲ್ಲಿ ತುಲಾ ವಿಷು ಸಂಕ್ರಮಣ ಇದನ್ನೂ ಸಹ ನಮ್ಮ ಪ್ರಾಚೀನರು ಜೀವೇಮ ಶರದಃ ಶತಂ ತ್ವಂಜೀವ ಶರದಃ ಶತಂ ಎಂದು ಹಾರೈಸುವ ಮೂಲಕ ಸೂಚಿಸಿದ್ದಾರೆ. ತುಲಾಸಂಕ್ರಮಣವೇ ಶರದ್ ಋತುವಿನ ಆರಂಭ.

ಹೀಗೆ ಅಯನ ಹಾಗೂ ವಿಷುಗಳ ಹಿನ್ನೆಲೆಯಲ್ಲಿ ವರ್ಷದ ಲೆಕ್ಕಾಚಾರವನ್ನು ಸೌರಮಾನ ಪದ್ಧತಿ ತಿಳಿಸಿದೆ. ಮಕರ ಸಂಕ್ರಮಣದ ಆಚರಣೆ ಎಳ್ಳು ಬೆಲ್ಲ ಕಬ್ಬುಗಳ ಹಂಚಿಕೆಯೊಡನೆ ಆರಂಭವಾದರೆ ಕರ್ಕಾಟಕ ಅಥವಾ ದಕ್ಷಿಣಾಯನವು ಮಳೆಯಿಂದ ಸಮೃದ್ಧಿ ಹೊಂದುತ್ತಿರುವ ಹದವಾದ

ಭೂಮಿಗೆ ಪೂಜೆ ಸಲ್ಲಿಸಿ ಬಿತ್ತನೆ ಮಾಡಿ ಬೆಳೆಯನ್ನು ಬೆಳೆಯುವ ಹಂತವಾಗಿದೆ. ಧಾರ್ಮಿಕ ದೃಷ್ಟಿಯಲ್ಲಿ ನೋಡುವುದಾದಲ್ಲಿ,

ಪ್ರತಿ ಸಂಕ್ರಮಣದಲ್ಲೂ ಪಿತೃತರ್ಪಣ ನೀಡುವುದು ವಿಶೇಷ. ಆಯಾ ಸಂಕ್ರಮಣದ ಕಾಲದಲ್ಲೇ ಉಳಿದ ಹತ್ತು ಸಂಕ್ರಮಣದಲ್ಲಿ ತರ್ಪಣ ನೀಡಬೇಕು.ಆದರೆ ಆಯನ ಸಂಕ್ರಮಣಗಳಲ್ಲಿ ನಿಯಮ ಬದಲಾಗುತ್ತದೆ. ದಶಪೂರ್ವೇ , ದಶಾಪರೇ ಎಂದು ಹೇಳಿದಂತೆ ದಕ್ಷಿಣಾಯನದಲ್ಲಿ ಸಂಕ್ರಮಣ ಕಾಲಕ್ಕಿಂತ ಹತ್ತು ಘಳಿಗೆ ಮೊದಲು ಪರ್ವಕಾಲ ಎನಿಸಿದೆ. ಆ ಕಾಲದಲ್ಲಿ ಪಿತೃತರ್ಪಣ ಸಂಕ್ರಮಣಾಂಗ ದಾನಾದಿಗಳು ವಿಶೇಷ ಫಲ ನೀಡುತ್ತವೆ. ಅರ್ಥಾತ್ ದಕ್ಷಿಣಾಯನ ಬರುವ ಮೊದಲೇ ಉತ್ತರಾಯಣವಿರುವಾಗಲೇ ತರ್ಪಣಾದಿಗಳು ವಿಹಿತವಾಗಿರುತ್ತವೆ.

ಉತ್ತರಾಯಣದಲ್ಲಿ 'ದಶಾಪರೇ' ಎಂದಂತೆ ಸಂಕ್ರಮಣವಾದ ನಂತರದ ಹತ್ತು ಘಳಿಗೆ ಪರ್ವಕಾಲ ವಾಗಿರುತ್ತದೆ. ಆಗಲೇ ತರ್ಪಣ ದಾನಾದಿಗಳು ವಿಹಿತವಾಗಿರುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ ಎರಡೂ ಅಯನ ಸಂಕ್ರಮಣಗಳಲ್ಲಿ ಉತ್ತರಾಯಣದಲ್ಲಿಯೇ ತರ್ಪಣಾದಿಗಳು ವಿಹಿತ ಎಂಬುದು ತೀರ್ಮಾನ. ಈ ಶೋಭಕೃತ್ ಅಥವಾ ಶೋಭ ನಕೃತ್



ಸಂವತ್ಸರದಲ್ಲಿ ಜುಲೈ ತಿಂಗಳಿನ ಹದಿನೇಳನೇ ತಾರೀಖು ಆಷಾಢಮಾಸದ ಕೃಷ್ಣ ಪಕ್ಷದ ಅಮಾವಾಸ್ಯೆಯಂದು ಅರ್ಥಾತ್ ಭೀಮನ ಅಮಾವಾಸ್ಯೆ ಜ್ಯೋತಿರ್ಭೀಮೇಶ್ವರ ವ್ರತದ ದಿನ ದಕ್ಷಿಣಾಯನ ಸಂಕ್ರಮಣ ಇದೆ. ಅಂದು ಸಂಜೆ 4 ಗಂಟೆ 49 ನಿಮಿಷಗಳವರೆಗೆ ಪರ್ವ ಕಾಲವಿರುತ್ತದೆ. ಅಷ್ಟರೊಳಗೆ ತರ್ಪಣಾದಿಗಳನ್ನು ನೀಡಿ ಪಿತೃಗಳ ಹಾಗೂ ಭಗವದನುಗ್ರಹಕ್ಕೆ ಪಾತ್ರರಾಗೋಣ.

## ಸಪ್ತಗಿರಿ ಕ್ವಿಜ್ ಮೇ 2023 ತಿಂಗಳ ರಸಪ್ರಶ್ನೆಯ ಉತ್ತರಗಳು







1. ವೈಶಾಖ
2. 41 ದಿನಗಳು
3. ರಾಮಲಕ್ಷ್ಮಣರು
4. ಕಂಬವನ್ನು
5. ಪದ್ಮಾವತಿ ದೇವಿ
6. ಲಕ್ಷ್ಮಿಯ
7. ಗಾಂಧಾರಿ
8. ಮಹತಿ
9. 21 ದಿನಗಳು
10. 104 ಗ್ರಂಥಗಳು
11. ಗೋವಿಂದ ಗೋವಿಂದ
12. ನಾಟ್ಯ ಕೋವಿಲ್
13. ಕೊತ್ತಂಬರಿ
14. ಅಲ್ಲೋಲ ಕಲ್ಲೋಲ
15. ಕ್ಷೀರಸಾಗರ

### ಎಲ್ಲಾ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನು ಕೊಟ್ಟವರು

**ಹೇಮಂತ್ ಕುಮಾರ್**

L.K.5366

**ಕಾರವಾರ**





# ಜ್ಯೋತಿರ್ಭೀಮೇಶ್ವರ ಅಮಾವಾಸ್ಯೆ

-ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ
97393 88300

ಆಷಾಡಮಾಸದ ಕೊನೆಯ ದಿನ ಎಂದರೆ ಅಮಾವಾಸ್ಯೆಯಂದು ಜ್ಯೋತಿರ್ಭೀಮೇಶ್ವರ ವ್ರತವನ್ನು ಆಚರಿಸುತ್ತಾರೆ. ಮಡದಿಯು ತನ್ನ ಪತಿಯ ಆಯಸ್ಸು ವೃದ್ಧಿಸಲೆಂದು ಈ ವ್ರತ ಆಚರಿಸಿದರೆ ಅವಿವಾಹಿತ ಮಹಿಳೆಯರು ತಮಗೆ ಒಳ್ಳೆಯ ಪತಿ ದೊರೆಯಲೆಂದು ಕೈಗೆ ಕಂಕಣ ತೊಟ್ಟು ಈ ವ್ರತ ಆಚರಿಸುತ್ತಾರೆ. ಇದೊಂದು ಮಹಿಳೆಯರ ಪಾಲಿಗೆ ಪವಿತ್ರ ಹಬ್ಬ.

### “ಪೌರಾಣಿಕ ಹಿನ್ನೆಲೆ”

ಪುರಾಣಗಳ ಪ್ರಕಾರ ಮರಣ ಹೊಂದಿದ ಪತಿಯ ಪ್ರಾಣ ಉಳಿಸಿಕೊಳ್ಳಲು ಸತಿಯೊಬ್ಬಳು ಪಾರ್ವತಿ ಪರಶಿವ ರನ್ನು ಪ್ರಾರ್ಥಿಸುತ್ತಾಳೆ. ಆಕೆಯ ಭಕ್ತಿಗೆ ಮೆಚ್ಚಿ ಶಿವನು ಆಕೆಯ ಪತಿಯನ್ನು ಬದುಕಿಸಿ ಸತಿಪತಿಯರಿಗೆ ದೀರ್ಘಾಯುಷ್ಯವನ್ನು ನೀಡಿ ಆಶೀರ್ವಾದ ನೀಡುತ್ತಾನೆ. ಅವಳು ಮಾಡಿದ ಪೂಜೆ ಆಷಾಢ ಬಹುಳ (ಕೃಷ್ಣಪಕ್ಷ) ಅಮಾವಾಸ್ಯೆಯಂದು ಕಠಿಣ ವ್ರತ ಆಚರಿಸಿದ್ದಕ್ಕಾಗಿ ಹಿಂದೂ ಸ್ತ್ರೀಯರ ಪಾಲಿಗೆ ಪತಿಯ ಅಯುಷ್ಯವೃದ್ಧಿ ವ್ರತ ದಿನಾಚರಣೆಯೂ ಆಗಿದೆ. ಶಿವ ಪಾರ್ವತಿ ಯವರು ವಿವಾಹವಾದದ್ದು ಇಂದೇ ಎನ್ನುವ ಪ್ರತೀತಿಯೂ ಇದೆ. ಸಂತಾನ ಮತ್ತು ಶಕ್ತಿಯ ಪ್ರತೀಕವಾಗಿ ಪಾರ್ವತಿಯನ್ನು ಪೂಜಿಸಿ ಹೆಂಗಳೆಯರು ತಮಗೂ ಶಕ್ತಿನೀಡೆಂದು ಬೇಡುತ್ತಾರೆ.

### “ಸಂಜೀವಿನಿ ವ್ರತ”

ಪತಿಗೆ ದೀರ್ಘಾಯುಷ್ಯ ನೀಡಿದ ಕಾರಣ ಈ ವ್ರತಕ್ಕೆ ಸಂಜೀವಿನಿ ವ್ರತವೆಂದು ಕರೆಯುತ್ತಾರೆ. ಒಮ್ಮೆ ವ್ರತ ಆಚರಿಸಿದರೆ 5 ವರ್ಷ 9 ವರ್ಷ ಅಥವಾ 16 ವರ್ಷ ವ್ರತಾ ಚರಣೆ ಮಾಡಿ ವ್ರತ ಮುಗಿದ ನಂತರ ಜನರಿಗೆ ಅನ್ನದಾನ ಮಾಡುವ ಕ್ರಮ ನಮ್ಮಲ್ಲಿದೆ.

### “ಮರಳಿ ಪತಿಯ ಮನೆಗೆ”

ಆಷಾಢದಲ್ಲಿ ತವರುಮನೆಗೆ ಹೋದ ಹೊಸದಾಗಿ ಮದುವೆಯಾದ ಪತ್ನಿ ಪತಿಯ ಪೂಜೆಗಾಗಿ ತನ್ನ ಅತ್ತೆಯ ಮನೆಗೆ ಹಿಂತಿರುಗಿ ಬರುವಳು ಮುಂದೆ ಶ್ರಾವಣದ ಹಬ್ಬಗಳು ಪ್ರಾರಂಭವಾಗುವುವು.

### “ಭೀಮೇಶ್ವರನ ಪೂಜೆ”

ಮೊದಲು ಗಣಪತಿಯ ಪೂಜೆ ಮಾಡಿ ಭೀಮೇಶ್ವರ ಎಂದರೆ ಶಿವನಿಗೆ ಪೂಜೆ ಮಾಡಿ ದೀಪಗಳಿಗೆ ಪೂಜಿಸಬೇಕು ಗಣೇಶ ಅಷ್ಟೋತ್ತರ, ಶಿವನ ಅಷ್ಟೋತ್ತರ ಪಠಿಸಬೇಕು. ಗೋಧಿಹಿಟ್ಟಿನಿಂದ ಭಕ್ಷ್ಯ ಮಾಡಿ ನೈವೇದ್ಯ ಮಾಡಬೇಕು ಅಂದಿನ ದಿನ ಮನೆಯ ಮುಂಬಾಗಿಲ ಹೊಸಿಲಿಗೆ ಪೂಜಿಸಿ ಕಡಬಿನಲ್ಲಿ ಕಾಸನ್ನು ಇಟ್ಟು ಮನೆಯ ಮಗನ ಹತ್ತಿರ ಅದನ್ನು ಒಡೆಸಿ ಮನೆಯ ಹೆಣ್ಣುಮಕ್ಕಳಿಗೆ ನೀಡಬೇಕು ನಂತರ ಅಣ್ಣನ ಆಶೀರ್ವಾದ ಬೇಡುವ ಸೋದರಿ ಅಣ್ಣನಿಗೆ ಫಲತಾಂಬೂಲ ನೀಡುತ್ತಾಳೆ. ಈ ವ್ರತಾಚರಣೆ ಮಾಡಿ ಬರುವ ಶ್ರಾವಣ ಮಾಸವನ್ನು ಆದರಿಸಿ ಸಂಭ್ರಮಿಸೋಣ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

ಮಂದಿಪಾಯ್; (ಪೆರಿಯ) ತಿರುಮೊಳಿಯಲ್ಲಿನ ಎಂಮಿಚ್ಚಿರಾನಂದೇ, ಕುಲಂದರಂ, ಪೆಶುಮಿನ್ ತಿರುನಾಮಮ್, ವಂದಾಯ್ ಎನ್ ಮನಮೇ, ಕೂಡಿಯಾಡಿ, ಉಳಜ್ಜನಿನ್ದಿರುಕ್ಕುಮ್ ವನ್‌ತಿಜಲ್ ಮಿರಿರಿಲ್, ಮಾವಾಯನಜ್ಗಮ್, ಎಯ್ಯಚ್ಚಿನಂದು ಕರುಮುಗಿಲ್, ಪೋಲ್ವದೊರೆ ಮೇನಿ, ಎನ್‌ತುಣೈಎಂನ್ದು, ಅನ್ವಿಯಾವಾಣನ್, ವೇಡಾರ್ ತಿರುವೆಂಗಂಡಮ್, ಕುಲೈ ಯಾರ್‌ನ್ದ, ಅಂಗು ಪೆನ್ನರಿಗತ್ತು, ಶೆಯಾಜ್ಗು, ಎಂಗಳುಕ್ಕರುಳ್, ಶ್‌ಯಕಿನ್ನ, ಶೆರುವರೇಮುನ್, ನೀಣಿಲಾಮುತ್ತತ್ತು, ಅರುವಿಶೋರ್ ವೇಂಗಡಂ, ತರಂಗನೀರ್, ಮಿಕ್ಕಾನೈ ಮತ್ತುಮೊರೆ, ದೆಯಮಮ್, ಮಂಜಯರ್ ಮಾಮದಿ ಮಣುಲಾ ಮುನ್ನೊಳಿ, ಪುನೈವಳರ್ ವಲಂಬುರಿ ಯಾಳಿಯನ್ನೈ, ಪೂನ್ನೈಮಾನುಣಿಯ್ಯೆ, ಶೆಲ್ಲಾಯ್ ಪೈಜಳೀಯೆ, ಇಂಗೆಪೋದುಮ್‌ಕೊಲೋ, ಕಣ್ದೆ ಯಣ್‌ಕಣುಮ್, ತೇನೋಡುವಣ್ಣಾಲಮ್, ಪಡೈನಿರ್ದ, ಮೇಮಿನ್‌ಪುಳು, ತಿರುಕ್ಕುರುಂದಾಣ್ಡಕಂ ನಂತರ ತಿರುನೆಡುನ್ದಾಕದಲ್ಲಿನ - ನೀರುಕತ್ತಾಯ್ಯೆ ಪುನ್ನಾನಾಯ್, ಪಟ್ಟುಡುಕ್ಕಮ್, ಮುಳೈಕ್ಕದಿರ್ಯೆ, ಕನ್ನುಯೊಯೋತ್ತು, ಮೈವಣ್ಣನರುಜಕುಣ : - ತಿರುವಾಯ್ ಮೊಳಿಯಲ್ಲಿನ - ಕಣ್ಣಾವಾನ್, ನಂಬಿಯ್ಯೆ, ಎನ್‌ತಾಯ್‌ತಣ್ ತಿರುವೇಂಗಡತ್ತು ಪರ್ಚನಾಬನ್, ವೇಜ್ಗಡಜ್ಗಳ್, ಕನ್ನಮೇಂದಿ, ವಾರ್ಪುನಲಂತರುನಿ, ಇಲಿಂಗತ್ತಿಟ್ಟ ಏನಮಾಯ್ ನಿಲಜ್ಕೀಣ್ಣ, ವಾರಾವರುವಾಯ್ ಅಕಲ ಕಿಲ್ಲನ್, ಎನ್ ತಿರುಮಗಳಶೆರ್ ಇನಿಷ್ವಗ, ತಲೈಮೇಲಿ, ಪುನೈನ್ವೇನ್, ವೇಯಾನ್, ವೇಂಗಡಮ್, ತಿರುಮಾಲಿರುಲೈ ಮಲೈಮತ್ತೀ, ಉಟ್ರೇಸುಕಂದು, ಕೋಲಮಲರ್‌ಪಾವೈ (ಇರಾಮಾನುಜ) ನೂತ್ತಂದಾದಿಯಂದು - ಕಳ್ಳಾರ್ ಪೂಳಿಲ್, ಮುಳಿಯ್ಯೆ - ಕುಡಕ್ಕುಮ್, ತೊಳ್ವಾರ್ನಿಲ್ಲಾ, ಆಂಡು ಕಳ್‌ನಾಳ್, ನಿರ್ವವಣ್ ಕೀರ್ತಿಯವ್, ಅಡುಮೇ ತಿರುವಾಯ್‌ವೊಳಿ ನೂತ್ತಂದಾದಿ ಪಾಶುರಗಳಲ್ಲಿರುವ ಕೋಯಿಲ್ ತಿರುವಾಯ್‌ಮೊಳಿ ಪಾಶುರದಲ್ಲಿರುವ ಎಲ್ಲವನ್ನು ಎರಡು ಮೂರು ಬಾರಿ ಅನುಸಂಧಿಸತಕ್ಕದ್ದು. ಉಪದೇಶ ರತ್ನಮಾಲದಲ್ಲಿರುವ ಆಳ್ವಾರ್‌ಗಳ್‌ವಾಳಿ ಉಂಡೋವೈಕಾಶಿ, ಇನ್ನೋ ತಿರುವಾಡಿಪೂರಮ್, ಆಳ್ವಾರಕಳ್ ತಾಜ್ಗಳ್, ಎಂಬುಮಾನಾರ್, ತೆಳ್ಳಿಯದಾ ನಂಬಿಳೈ, ನಮ್‌ಪೆರುಮಾಳ್, ಅನ್ನಪುಕಳ್ ಈ ನಮನುಟ್ಟಾನವಮ್, ತಿರುಕ್ಕುರುನಾಂಣಕವಮು, ಪ್ರತ್ಯೇಕ ದಿವ್ಯ ಪ್ರಬಂಧವೇ ಹೇಳುವಂತೆ, ಪರಕಾಲನು ಸಂಸಾರದಲ್ಲಿ ಆರ್ತಿಯಿಂದ ತಿರುನೆಡುನ್ದಾಣ್ಡಕದ ಜೊತೆಗೆ ಮೊದಲು ಏಕಕಾಲದಲ್ಲಿ ಅನುಗ್ರಹಿಸಿದುದರಿಂದ ಪ್ರತ್ಯೇಕವಾದ ಅನು ಸಂಧಾನವಿರುವುದಿಲ್ಲ. ಹಾಗಾಗಿ ಸಮಾರೋಪ ಸಮಯದಲ್ಲಿ ಇದಕ್ಕೆ ಸಮಾಪನ ಮಂಗಳವಿಲ್ಲ. ಆದ್ದರಿಂದ



ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ. ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಅನುಸಂಧಾನ ಮಾಡುವಾಗ ಒಂದು ಪಾಶುರಕ್ಕೇ ದ್ವಿರಾವೃತ್ತಿ (ಅಂತೆಯೇ) ಪಣ್ದಿಯಾರ್ ಎಂಬ ಪಾಶುರವನ್ನೇ ಅರ್ಥ ಗೌರವವಿರುವುದರಿಂದ ಎರಡು ಮೂರು ಅನುಸಂಧಾನವಿರುವುದು. ತಿರುಪ್ಪಳ್ಳಿಮೆಳ್ಳಿಚ್ಚಿ ಪ್ರಬಂಧವು ವಕ್ತೃ (ಕವಿ) ಭೇದವಿರುವುದರಿಂದಲೇ ಪ್ರತ್ಯೇಕ ಪ್ರಬಂಧವನ್ನು ತಿರುಪ್ಪಾವೈ ಜೊತೆಗೆ ಪ್ರಬೋಧನೆ (ಮೇಲ್ಪಂಕ್ತಿ) ಉಚ್ಚರಿಸುವ ಏಕಾರ್ಥಿ ಪ್ರತಿಪಾದವಾಗಿರುವುದರಿಂದ ಪ್ರತ್ಯೇಕಾನುಸಂಧಾನ ಇರದೇ ಇರುವುದರಿಂದ ಸರೋವರದಲ್ಲಿ ಪ್ರತ್ಯೇಕವಾದ ಸಮಾಪ್ತಿ ಮಂಗಳವಿಲ್ಲದಿರುವುದರಿಂದ ಒಂದೇ ಪಾಶುರವನ್ನೇ ಎರಡು ಬಾರಿ ಅನುಸಂಧಾನ ಮಾಡತಕ್ಕದ್ದು.

ಹೀಗೆ ಸರ್ವಾಪರ್ವಕ್ಕೆ ಹೇತುವಾಗಿ 'ಅಂಜಕುಡಿಕ್ಕೋರು ಸಂತತಿಯಾಯ್' (ಭಗವಂತನಿಗೆ ಯಾವುದೇ ಅಪದ್ಯ ಅರ್ಪಿತವಾಗ ಬಾರದೆಂದು ಭಯಗೊಂಡು ಸ್ವಾಮಿಗೆ ಮಂಗಳಶಾಸನ ಬರೆಯುವ ಭಾಗವತ ಕುಟುಂಬದಲ್ಲಿ ಏಕೈಕ ಪುತ್ರಿಯಾಗಿ ) ಎಂದು ಗೋದಾದೇವಿಗೆ ಆಳ್ವಾರರು ಉತ್ತೇಜನ ನೀಡಿದ್ದಾರೆ. ತಿರುವಾಶಿರಿಯವೂ ಸಹ ಪ್ರತ್ಯೇಕ ಪ್ರಬಂಧವಾಗಿರುವುದರಿಂದ ಗಾಥಾದಶಕ ಆಗದೇ ಇರುವುದರಿಂದ ಪ್ರತ್ಯೇಕನುಸಂಧಾನವು , ಬೇರೆಯಾಗಿ ಸಮಾಪ್ತಕ್ಕನುಗುಣವಾಗಿ ಒಂದೇ ಪಾಶುರವನ್ನೇ ಎರಡು ಬಾರಿ ಸೇವಾರ್ಪಿಸುವುದು. ರಾಮಾನುಜರ ಸೂಕ್ತ ದಂತೆ 'ಇರುಪ್ಪಿಡಮ್' ಎಂಬ ಪಾಶುರವನ್ನು ದ್ವಿರಾವೃತ್ತಿಯಲ್ಲಿ ಮಾಡು ವುದರಿಂದ ಅದರ ಅರ್ಥ ಗೌರವವು ವೃದ್ಧಿಸುವುದು. ತಿರುವಾಯ್ಮೊಳಿ ಮೊದಲಾದ ಇತರ ಪ್ರಬಂಧಗಳನ್ನು ಸಮಾಪ್ತಿಗೊಳಿಸುವಾಗ ಎರಡು ಪಾಶುರಗಳನ್ನು ಎರಡು ಸಾರಿ ಅನುಸಂಧಿಸತಕ್ಕದ್ದು. ಉಪದೇಶ ರತ್ನಮಾಲದಲ್ಲಿರುವ (ಮಣವಾಳ ಮಹಾಮುನಿ) ಶ್ರೀಸೂಕ್ತ ಅಲ್ಲವೆಂದು, ಪ್ರಬಂಧಕ್ಕೆ ಬೆಳಕು ಚೆಲ್ಲುವಂಥದ್ದೆಂದೂ, ಕಿಡಾಂಬಿ ಅಪ್ಪುಳಾನ್ ರಮ್ಯ ಜಾತ್ಯಮುಂನೀಂದ್ರರ ವಿಷಯವನ್ನು ಅನುಗ್ರಹಿಸಿದ (ಹೇಳಿದ) ಕೂಡಲೇ ಪ್ರಬಂಧಗಳಿಂದ ಕೂಡಿ ಸಮಾಪ್ತಿ ಮಾಡುವಾಗ ಒಂದು ಬಾರಿ ಅನು ಸಂಧಿಸಬೇಕೆಂಬುದು ಸಂಪ್ರದಾಯ.

ತಿರುಮಲೆ ಬ್ರಹ್ಮೋತ್ಸವದಲ್ಲಿ ಬೀದಿಗಳಲ್ಲಿ ಅನುಸಂಧಿಸುವ ಮೂರು ಸಾವಿರಕ್ಕೆ ನೂತ್ತಂದಾದಿಯನ್ನು 'ಇಯಲ್‌ಶಾತ್ತು' (ಹಲವರು ಬರೆದಿರುವ ಪ್ರತ್ಯೇಕ ಪ್ರಬಂಧವನ್ನು,ಸಮಾಪನಮಂಗಳ) ಭಗವ ದ್ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ ಅನುಸಂಧಿಸಲ್ಪಡುವುದು. ತಿರುವಾಯ್ಮೊಳಿ ಮೊದಲಾದವುಗಳನ್ನು ಅನುಸಂಧಿಸುವಾಗ ಒಂದು ಪಾಶುರವನ್ನು ಸೇರಿಸಿ ದ್ವಿರಾವೃತ್ತಿ ಪಾಠಗಳಿಗೆ ಹೇತುವಾಗಿ ಭಾಗವತ ವಿಷಯಕ್ಕೆ ಮಂಗಳಾಶಾಸನ ಭಗವದ್ವಿಷಯದಲ್ಲಿನ ಮಂಗಳಾಶಾಸನ ವೆಲ್ಲವೂ ಒಂದೆಯೇ.

'ವೇಣು ಮಾಲ್ಯೆಯಿಟ್ಟಾನ್ ತಿರುಮಂಟಪವಮು' ಎಂಬ ಶಬ್ದಕ್ಕೆ ಅರ್ಥ

ವೇಣ್ಣು=(ಶಿಶುಪಾಲನ ) ಜಯಿಸಿ, ಮಾಲ್ಯೆಯಟ್ಟಾನ್=(ರುಕ್ಮಿಣಿ ದೇವಿ ಭುಜಗಳ ಮೇಲೆ) ಮಾಲೆಯನ್ನು ಹಾಕಿದವ ಎಂದು ಅರ್ಥ ವಾದ್ದುದರಿಂದ ಈ ಶಬ್ದವು ಶ್ರೀ ಕೃಷ್ಣದಿವ್ಯನಾಮ ಆದ್ದರಿಂದ ವೇಣು ಮಾಲ್ಯೆ ಯಟ್ಟ ಪೆರುಮಾಳ್ (ಜಯಿಸಿ ಮಾಲೆಯನ್ನು ಧರಿಸಿದ ಹಿರಿಯನು) ಎಂಬುದರ ಬದಲಾಗಿ ಶ್ರೀಕೃಷ್ಣ ಶರ್ಮ ಎಂದೂ, ರಾಮಾನುಜ ದಾಸ ನೆಂದೂ ವ್ಯವಹಾರ ದಕ್ಷಿಣ ದೇಶದಲ್ಲಿ ಪ್ರಸಿದ್ಧವಾಗಿದೆ. ಪೂರ್ವಕಾಲದಲ್ಲಿ ವೇಣುಮಾಲ್ಯೆ ಎಂಬಲ್ಲಿ ಪೆರುಮಾಳ್ ಎಂಬ ಒಂದು ಬ್ರಾಹ್ಮಣನು ಮಧ್ಯ ರಾಷ್ಟ್ರದಲ್ಲಿ ಏಕೈಕ ಪ್ರಭುವಾಗಿದ್ದಾನೆ. ತಿರುಮಲೆಯಲ್ಲಿರುವ ಶ್ರೀವೇಂಕಟಾ ಚಲಪತಿಗೆ ಒಂದು ದಿವ್ಯಮಂಟಪವನ್ನು ನಿರ್ಮಿಸುವ ಸಲುವಾಗಿ ಆತನ ಹೆಸರಿನ ಕಾರಣದಿಂದಾಗಿ ಆ ಮಂಟಪಕ್ಕೆ "ವೇಣ್ಣಮಲ್ಯೆಯಿಟ್ಟಾನ್ ಮಂಟಪ" ಎಂಬ ಹೆಸರು ಪ್ರಸಿದ್ಧವಾಗಿದೆಯೆಂದು ಹೇಳುತ್ತಾರೆ.

ಮಲ್ಯೆ ಕುನಿಯನಿನ್ನ ಪೆರುಮಾಳ್ ಎಂಬ ಶಬ್ದಕ್ಕೆ ಅರ್ಥ

ಮಲ್ಯೆ ಅಂದರೆ ತಿರುಮಲೆ ಎಂಬ ಬೆಟ್ಟ, ಕುನಿಯುಃ ಬೆಳದಿಂಗಳಂತೆ ನಿನ್ನು = ನಿಂತ (ನೆಲೆಗೊಂಡ )ರಿವುದರಿಂದಲೇ ದೇವರಿಗೆ ಆ ಹೆಸರು ಇರುವುದು. ನೆಲೆಗೊಂಡು ನಿಂತಿರುವುದೆಂದು ಇದನ್ನು ಕುರಿತು ಸಾರಿದರು. 'ಶ್ರೀವೈಷ ಶೈಲಸ್ಥಿತ ವಪುಃದಲ್ಲಿ ( ತಿರುಮಲೆಯನ್ನು ) ಸ್ತಿತನಾದ ವಿಭುವನ್ನು ಸರ್ವ ವ್ಯಾಪಕನು - ಎಂದು ಜ್ಞಾತರು ಕರೆದಿದ್ದಾರೆ. ' ಅದ್ರಿಂವ್ಯಾಪ್ಯ ಸಮಾ ಸ್ಮಿರ್ತೀ ವಿಭುರಿತಿಚ ' (ಪರ್ವತವನ್ನು ವ್ಯಾಪಿಸಿಕೊಂಡು ಸುಸ್ಥಿರನಾದ ಸರ್ವ ವ್ಯಾಪ್ತಿ ) ಎಂದು ಹಿರಿಯರು ಚಿಂತಿಸಿದ್ದಾರೆ.

ಎಲ್ಲಾ ಪವಿತ್ರದೇಶಗಳಲ್ಲಿ 'ಶ್ರೀ ಚೂರ್ಣ ಪರಿಪಾಲನೆ' ಜರುಗಿಸು ವಾಗ ಅನುಸಂಧಿಸಬೇಕಾದವು ಭಿನ್ನಭಿನ್ನವಾಗಿದ್ದು 'ತಿರುಕಾರ್ತಿಕೈ' (ಕೃತಿಕಾ ದೀಪೋತ್ಸವ) ಮೊದಲುಗೊಂಡು ಅಧ್ಯಯನ ತಿರುನಾಳ್‌ವರೆಗೂ ಎಲ್ಲಾ ಕಡೆ ಒಂದೇ ರೀತಿಯಾಗಿರುತ್ತದೆ. ಅದು ಹೇಗೆಂದರೆ - ಮುದುಲಾಯ ವರಮು, (ಪ್ರಥಮ ಸಹಸ್ರ ಗೀತೆ) ತಿರುಮೊಳಿ, ತಿರುವಾಯ್ಮುಳಿ, ಇಯಚ್ಛಾ - ಈ ಕ್ರಮವಾಗಿ ಇರತಕ್ಕದ್ದು ತನಿಯನ್ (ಪ್ರಬಂಧ ಪ್ರಶಸ್ತಿ) ಪಾಶುರಗಳನ್ನು ನೂತ್ತಾದಿ ಪ್ರಶಸ್ತಿಗೀತೆಗಳನ್ನು ಅನುಸಂಧಾನ ಮಾಡಿ, ಇಯಲ್ ಶಾತ್ತು (ಮುಕ್ತಾಯ ಗೀತಮಾಲ) ಅನುಸಂಧಿಸಬೇಕು. ಬೀದಿ ಗಳಲ್ಲಿ ಮೆರವಣಿಗೆ ಮಾಡುವ ದಿನಗಳಂದು ಉಪದೇಶ ರತ್ನಮಾಲೆಯನ್ನು ಅನುಸಂಧಾನ ಮಾಡತಕ್ಕದ್ದು.ಹಲವು ಸ್ಥಳಗಳಲ್ಲಿ ತಿರುಪ್ಪಲಾಂಡು. ಕಣ್ಣಿನುಣ್‌ಶಿರುತ್ತಾಂಬು, ತಿರುವಾಯ್ ಮೊಳಿ,ತಿರುವಿರುತ್ತಮ್ - ಇವು ಗಳನ್ನು ಪ್ರಶಸ್ತಿ ಗೀತೆಗಳ (ಬದಲಾಗಿ) ಅನುಸಂಧಾನ ಮಾಡಿಕೊಳ್ಳುತ್ತಿದ್ದಾರೆ.

ತೆವಯಾಳ್, ಶಿಂಗನ್‌ಮುರೈ' ಶಬ್ದಗಳ ಅರ್ಥ

ದೇ(ತೆ) ವಯಾಳ್ ಎಂಬುದು ಒಂದು ಉಪಶಬ್ದ, ದೇವಿಯಾದ ಲಕ್ಷ್ಮಿಯ ಒಬ್ಬ ಕೆಲಸದಾಳು. ಆದ್ದರಿಂದಲೇ ದೇವಿ ಪರಿಚಾರಕರ ಪರಿಜನರು ಎಂದು (ದೇವಿಆಳ್) ವ್ಯವಹಾರ ಮಾಡಲಾಗಿದೆ. ಶಿಂಗನ್ (ಸಿಂಗನು) ಎಂಬುವನು ತಿರುಮಲೆ ಮೇಲಿರುವ ವಿಷ್ಣುದಾಸನೊಬ್ಬನು ಭಗವದ್ಭಕ್ತಿ ಯುತನಾಗಿ ಪೂರ್ವ ಕಾಲದಲ್ಲಿ ವೇಂಕಟೇಶ್ವರನ ಗುಡಿಗೆ ಸಮನಾಗಿ ಅಡುಗೆ ಕೆಲಸವನ್ನು ಮಾಡುತ್ತಿದ್ದಾನು.ಶ್ರೀನಿವಾಸನು ಆತನು ತನಗೆ ಎಲ್ಲರಿಗಿಂತಲೂ ಮಿಗಿಲಾದವನು ಎಂದು ಎಲ್ಲರಿಗೂ ತೋರ್ಪಡಲು ಆತನ ಅವಸಾನಕಾಲ ಸಮೀಪಿಸಿದ ವೇಳೆಯಲ್ಲಿ ಆತನ ದೇಹದಹನಕ್ಕೆ ತನ್ನ ಸನ್ನಿಧಿಯಿಂದ ಕಾಷ್ಟಗಳು ಕಳಿಸಿ ಕೊಟ್ಟು, ದೇಹ ಸಂಸ್ಕಾರವನ್ನು ಮಾಡಿಸಿ ಅರ್ಚಕರೇ ಮುಂತಾದವರು ಸಹ ಇದನ್ನೇ ಅನುಸರಿಸತಕ್ಕದ್ದು' ಎಂದು ಅಪ್ಪಣೆ ಮಾಡಿದ ನಿಟ್ಟಿನಲ್ಲೇ ಆತನು ಮಾಡಿದ ಕಾರ್ಯವನ್ನು (ಅಡುಗೆ ತಯಾರಿಕೆ) 'ಶಿಂಗನ್ ಮುರೈ' 'ಸಿಂಗನಿಪಾಕ' (ಕೃತ್ಯ) ಎಂಬ ಹೆಸರು ಬಿದ್ದಿದೆ. ಮುರೈ ಎಂದರೆ - ಉಚಿತ ಕಾರ್ಯ ಎಂದರ್ಥ.

**(ಮುಂದುವರೆಯುತ್ತದೆ)**



# ಮುದ್ರಾ ಯೋಗ

ಡಾ|| ಲೀಲಾ ಬಸವರಾಜು
87628 35104


ಅದ್ರೌಚಿತ್ ಅಸ್ಮೈಅಂತಃದುರೋಣೇ। ವಿಶಾಂ ನ ವಿಶ್ವಃ ಅಮೃತಃ ಸ್ವಾಧೀಃ ಅಂದರೆ ಕಲ್ಲಿನಲ್ಲಿಯೂ ಅಗ್ನಿಯ ಸ್ವರೂಪ ವನ್ನು ಕಾಣಬಹುದು. ನಮ್ಮ ಹಿಂದಿನ ಹರಪ್ಪ - ಮೆಹೆಂಜದಾರೋ ನಾಗರೀಕತೆಯ ಪುಟಗಳನ್ನು ತಿರುಗಿಸಿದಾಗ, ಮಾನವನಿಗಾಗಿಯೇ ಅಗ್ನಿಯು ಕಲ್ಲಿನಲ್ಲಿ ಅಗೋಚರವಾದ ರೀತಿಯಲ್ಲಿ ಇರುವುದನ್ನು ಕಾಣುತ್ತೇವೆ. ಕಲ್ಲನ್ನು ಉಜ್ಜಿದಾಗ ಶಾಖದ ಉತ್ಪತ್ತಿ. ಹಾಗೆಯೇ ರಹಸ್ಯವಾಗಿ ಅಡಗಿರುವ (ಅಗ್ನಿ) ಬೆಂಕಿ ಹೊರ ಹೊಮ್ಮುವುದನ್ನು ನೋಡಿದ್ದೇವೆ. ಅಂತಹ ನಿರ್ಜೀವವಾದ ಕಲ್ಲಿನಲ್ಲಿ ಅಗ್ನಿಯ ಸಾನಿಧ್ಯವಿದೆ ಎಂದ ಮೇಲೆ ಉಸಿರಾಡುತ್ತಿರುವ ಈ ಮಾನವ ದೇಹದಲ್ಲಿ ಅಗ್ನಿಯ ಸ್ವರೂಪವನ್ನು ಕಾಣುವುದರಲ್ಲಿ ಅತಿಶಯವಿಲ್ಲ.

ಇಡೀ ಜಗತ್ತಿಗೇ ಬೆಳಕನ್ನು ಕೊಡುವ ಸೂರ್ಯ ನಾರಾಯಣನೇ, ಯಜ್ಞನಾರಾಯಣ, ಅಗ್ನಿಸ್ವರೂಪ. ಅವನಿಂದ ಹೊರ ಹೊಮ್ಮುವ ಅಗ್ನಿ ರೂಪದ ಶಾಖ, ಬೆಳಕು ಜಗತ್ತಿಗೆ ಚೈತನ್ಯ. ಆ ಅಗ್ನಿಯೇ ಚೇತನಾ ಸ್ವರೂಪಿ. ವಿವಿಧ ದೇವತಾ ಗಾಯತ್ರಿಯಲ್ಲಿ ಶ್ರೀ ಅಗ್ನಿಗಾಯತ್ರೀಯೂ ಒಂದು ಓಂವೈಶ್ವಾನರಾಯ ವಿದ್ಮಹೇ, ಲಾಲೀಲಾಯ ಧೀಮಹಿ ತನ್ನೋ ಅಗ್ನಿ ಃ ಪ್ರಚೋದಯಾತ್" ಎಂದು ಅಗ್ನಿಯನ್ನು ಪ್ರಚೋದನೆ ಮಾಡಲಾಗುತ್ತದೆ. (ಈ ಮಂತ್ರ ವನ್ನು ದಿನವೂ ಬೆಳ್ಳಿಗ್ಗೆ ಶುಚಿರ್ಭೂತರಾಗಿ ಹನ್ನೊಂದು ಬಾರಿ ಉಚ್ಚರಿಸಿದರೆ, ಇದರಿಂದ ನಮ್ಮ ದೇಹದಲ್ಲಿನ ಅಗ್ನಿಯು ಪ್ರಚೋ ದನೆಗೊಂಡು ದೇಹದ ಉಷ್ಣತೆಯನ್ನು ಸಮತೋಲನಗೊಳಿಸಿ ಆರೋಗ್ಯವನ್ನು ಕಾಪಾಡುತ್ತದೆ. ಬೆಳಗುವ ಜ್ಯೋತಿ, ಕರ್ಪೂರ ದಾರತಿ, ದಶಾಂಗಂ ಗುಗುಲಂ ದೀಪಂ, ಸುಗಂಧಭರಿತವಾದ ಊದಿನಕಡ್ಡಿಯ ಕಿಡಿಯೂ ಅಗ್ನಿಯೆ ವಿಶ್ವದಲ್ಲಿನ ಸಕಲ ಚರಾ ಚರ ವಸ್ತುಗಳಲ್ಲಿ ಅಗ್ನಿಯ ಇರುವಿಕೆಯನ್ನು ಕಾಣಬಹುದು.

ಪ್ರಪಂಚದ ಸೃಷ್ಟಿಯು ಎಷ್ಟು ರಹಸ್ಯವಾಗಿದೆಯೋ ಹಾಗೆಯೇ ಜೀವಿಗಳಲ್ಲಿ ಮಾನವನ ದೇಹದಲ್ಲಿ ಅಗ್ನಿಯ ಇರುವು ಸಹ ಅಷ್ಟೇ ನಿಗೂಢ. ಪಂಚಭೂತಗಳಿಂದ ಆವೃತವಾಗಿರುವ ಈದೇಹದಲ್ಲಿ ಪ್ರಾಣಶಕ್ತಿಯ ಸಂಚಲನ ಆಗಬೇಕಾದರೆ ವಾಯು, ಅಗ್ನಿ, ಜಲ ಒಂದಕ್ಕೊಂದು ಪೂರಕ ಹಾಗೂ ಪ್ರೇರಕ, ಉಸಿರಾಡಲು ವಾಯು, ಧಮನಿಗಳಲ್ಲಿ (ಜಲ) ದ್ರವರೂಪದಲ್ಲಿ ಹರಿಯುತ್ತಿರುವ ರುಧಿರ, ದೇಹವು ಶಕ್ತಿಯುತವಾಗಿ, ಆರೋಗ್ಯವಾಗಿ, ಸಂಪನ್ನತೆಯಿಂದ ಕೂಡಿರಲಿ ಎಂದು ಸೇವಿಸುವ ಆಹಾರ ದೇಹದ ಆರೋಗ್ಯವನ್ನು ಕಾಪಾಡುತ್ತದೆ ಸೇವಿಸಿದ ಆಹಾರ ಜೀರ್ಣವಾಗುವುದು ಹೇಗೆ? ಬಡಾಗ್ನಿ ಎಂದು ಏನನ್ನು ಹೇಳುತ್ತೇವೆಯೋ ಅದೇ ಜಠರಾಗ್ನಿ. ಜಠರಾಗ್ನಿಯ ಕಾರ್ಯ ಬಹಳ ಮುಖ್ಯ. ಅಂದ ಮೇಲೆ ನಮ್ಮ ಶರೀರವನ್ನು ಕಾಪಾಡುತ್ತಿರುವುದು ನಮ್ಮಲ್ಲಿ ಅಡಗಿರುವ ಅಗ್ನಿ.

ಆಕಾಶ ಭೂಮಿಯಾದ್ಯಂತ ವಾಯು ಹರಡಿದೆ, ನಾವು ಉಸಿರಾಡುತ್ತಿದ್ದೇವೆ. ಸುತ್ತಲಿನ ವಾತಾವರಣದಲ್ಲಿರುವ ವಾಯು, ತನಗೆ ತಾನೇ ಒಳಹೊಕ್ಕು ಉಸಿರಾಡಲು ಸಾಧ್ಯವೇ? ಖಂಡಿತ ಇಲ್ಲ. ವಾಯುವಿನ ಮೇಲೆ ಒತ್ತಡ ಉಂಟಾಗಬೇಕು. ಇದಕ್ಕೆ ಪಂಚಭೂತಗಳಾದ ಆಕಾಶ ಹಾಗೂ ಭೂಮಿಯ ಸಹಾಯ ಬೇಕೇ ಬೇಕು. ಶರೀರಂ ಪಾಂಚಭೌತಿಕಂ ಎಂಬಂತೆ ದೇಹ ಪಂಜರೇ





ಪಂಚಭೂತಗಳಿಂದ ಆವೃತವಾಗಿರುವ ಈ ದೇಹ ಅದರಿಂದ ಬಂಧಿತವಾಗಿದೆ, ಇದು ಸಾಮಾನ್ಯ ಜ್ಞಾನ.

"ಓಂ ಇತ್ಯೇಕಾಕ್ಷರಂ ಬ್ರಹ್ಮ ! ಅಗ್ನಿರ್ದೇವತಾ" ದೇಹವು ಜೀವಿಸಿರುವುದನ್ನು ಸ್ಪಷ್ಟ ಪಡಿಸುವುದೇ ಅಗ್ನಿಯ ಶಾಖ, ಮೃತದೇಹದಲ್ಲಿ ಇಂದ್ರಿಯಚಲನೆ ಪ್ರಾಣ ಅಗ್ನಿ ಇರುವುದಿಲ್ಲ.

ಪಂಚತತ್ವಗಳ ಸಂಯೋಗದಿಂದ ಮಾಡಲ್ಪಡುವ ಮುದ್ರೆಗಳು ಯಾವ ರೀತಿಯ ಬ್ಲ್ಯಾಕ್ ಮ್ಯಾಜಿಕ್ ಅಲ್ಲ. ಇದರಿಂದ ದೇಹಕ್ಕೆ ಯಾವುದೇ ತರಹವಾದ ಹಾನಿಯಿಲ್ಲ.

ಪುರಾತನ ಕಾಲದಿಂದಲೂ ಮುದ್ರೆಗಳು ಭಾರತೀಯರ ಆಧ್ಯಾತ್ಮಿಕ ಪರಂಪರೆಯ ಒಂದು ಭಾಗವೇ ಆಗಿತ್ತು ಎಂಬುದನ್ನು ಅನೇಕ ಗ್ರಂಥಗಳು ಶ್ರುತ ಪಡಿಸಿದೆ. ಋಷಿ ಮುನಿಗಳು ತಮ್ಮ ಆಧ್ಯಾತ್ಮಿಕ ಗುರಿಯನ್ನು ತಲುಪಲು ಏನೆಲ್ಲ ರೀತಿಯಲ್ಲಿ ಸಾಧನೆಯನ್ನು ಮಾಡುತ್ತಿದ್ದರು, ಅದಕ್ಕಾಗಿ ಅವರು ಸಾಧಿಸಿದಂತಹ ಹಠಯೋಗ, ರಾಜಯೋಗ ಮುಂತಾದ ಯೋಗಗಳು, ದೇಹದಂಡನೆಯ ವಿವಿಧ ಆಸನಗಳು ಹಾಗೂ ಅನೇಕ ರೀತಿಯ ಮುದ್ರೆಗಳು ಅವರ ಸಾಧನಾಪಥದಲ್ಲಿ ಮಹತ್ವದ ಅಂಶಗಳಾಗಿ ಇಂದಿಗೂ ನಮಗೆ ಮಾರ್ಗ ಸೂಚಿಗಳಾಗಿ ಉಳಿದಿರುವುದನ್ನು ಕಾಣುತ್ತೇವೆ.

**ಮೋದನಾದ್ ದ್ರಾವಣಾಚ್ಚೈವ ಮುದ್ರೇತಿ ಪರಿಕೀರ್ತಯೇತ್**


ನಮ್ಮ ಸನಾತನ ಧರ್ಮದಲ್ಲಿ ದೇವರ ಉಪಾಸನೆಯ ಅಂಗವಾಗಿ ಪೂಜೆ. ಇದರ ಅಂಗವೇ ಆಗಿರುವ ಮಂತ್ರಾನುಷ್ಠಾನ, ಜಪ, ಹೋಮ ಭಗವಂತನ ಪ್ರೀತ್ಯರ್ಥವಾಗಿ ಮಾಡುವುದು ಪುರಾತನ ಸಂಪ್ರದಾಯ. ಯೋಗಭೂಮಿ ಭಾರತದಲ್ಲಿ ನಾವು ನಡೆದು ಬಂದಿರುವ ದಾರಿ. ಭಗವಂತನ ಆರಾಧನೆಯ ಸಮಯದಲ್ಲಿ 'ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಕ್ಷಸಾಂ, ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ, ಇತಿ ಘಂಟಾರವಂ ಕೃತ್ವಾ' ಎಂದು ಘಂಟಾ ನಾದವನ್ನು ಮಾಡಿ, ನಂತರ ಯಾವ ದೇವರನ್ನು ಪೂಜಿಸಲ್ಪಡುವುದೋ ಆ ದೇವರನ್ನು ಅಂಜಲೀಮುದ್ರೆ ಮುಖೇನ ಸ್ವಾಗತವನ್ನು ಕೋರುತ್ತೇವೆ. ಪೂಜೆಯು ಮುಕ್ತಾಯಗೊಳ್ಳುವವರೆಗೆ ಹಲವಾರು ಮುದ್ರೆಗಳಿಂದ ಅರ್ಚಿಸುತ್ತೇವೆ.

**ಯೋಗೋ ಯೋಗ ವಿದಾಂ ನೇತಾ ಪ್ರಧಾನ ಪುರುಷೇಶ್ವರಃ**

ವಿಷ್ಣು ಸಹಸ್ರನಾದ ಶ್ರೀಮನ್ನಾರಾಯಣ ಎಲ್ಲರಿಗೂ ಒಳಿತನ್ನು ಉಂಟು ಮಾಡಲಿ ಎಂದು ಪ್ರಾರ್ಥಿಸೋಣ.

ಸರ್ವೇ ಜನಾಃ ಸುಖಿನೋ ಭವಂತು
ಸರ್ವಂ ಶ್ರೀ ಕೃಷ್ಣಾರ್ಪಣಮಸ್ತು


## ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ರುದ್ರನ ಶರೀರದಲ್ಲಿ ನಾರಾಯಣನು ನೆಲಸಿ ಅವನ ಚಲನ, ಕಾರ್ಯಗಳಿಗೆ ಪ್ರೇರಕ ಶಕ್ತಿ ಆಗಿದ್ದಾನೆ ಎನ್ನುವ ಭಾವ. ವಿಶಿಷ್ಟಾದ್ವೈತದಲ್ಲಿ  ಜೀವ ಶರೀರವಾದರೆ ಪರಮಾತ್ಮ ಶರೀರಿ. ಅದ್ವೈತದಲ್ಲಿ  ಎಲ್ಲವೂ ಅವನೇ. ಈ ಮುಖ್ಯ ವ್ಯತ್ಯಾಸದಿಂದಲೇ ವಿಶಿಷ್ಟಾದ್ವೈತವನ್ನು ಶಾರೀರಕ ಮೀಮಾಂಸೆ ಎಂಬುದಾಗಿ ವ್ಯಾಖ್ಯಾನ ಮಾಡುತ್ತಾರೆ. ಇದು ಬಹಳ ಮುಖ್ಯವಾದ ವಿಚಾರ. ಎಂದರೆ ಪರಮಾತ್ಮನಾದ ನಾರಾಯಣನಿಗೆ ಜೀವಾತ್ಮ ಶರೀರ, ವಾಸಸ್ಥಾನ ಎಂದರ್ಥ.ಈ ಸಿದ್ಧಾಂತದಲ್ಲಿ ಅವನಿಲ್ಲದೆ ಇವ ನಿರಲಾರ ಎಂದರೆ ನಮಗೆಲ್ಲಾ, ರುದ್ರನಿಗೂ ಸಹ ಪರಮಾತ್ಮ ನಾದ ನಾರಾಯಣನು ಆಧಾರಭೂತ. ನಾರಾಯಣನಿಲ್ಲದೆ ರುದ್ರನಿಲ್ಲ, ಜೀವವಿಲ್ಲ,ರುದ್ರ ನಾರಾಯಣರು ಒಂದೇ ದೇಹ ವೆನಿಸುವುದಿಲ್ಲ ಎಂದರೆ ನಾರಾಯಣ ಪರತತ್ವವು ಇಲ್ಲಿ ವ್ಯಕ್ತ ಗೊಳ್ಳುತ್ತದೆ. ಇದು ವಿಷ್ಣು ಪರವಾದ ಅರ್ಥವೆನ್ನುತ್ತಾರೆ. ವಿಷ್ಣು ಶಿವ ಅಬೇಧವಲ್ಲ ಮೇಲ್ನೋಟಕ್ಕೆ ಮೊದಲಿನ ಅರ್ಥ ಎಂದರೆ ಇಂಗ್ಲೀಷಿನಲ್ಲಿ  ವಿವರಿಸಿರುವ ಅರ್ಥ ಸರಿಯಂತೆ ತೋರ ಬಹುದು.

ಇನ್ನು ಎರಡನೆಯ ಪಾಶುರ ಪೇಯಾಳ್ವಾರ್ ಅವರ ಮೂರನೆಯ ತಿರುವಂದಾದಿಯ ೬೩ ನೆಯ ಪಾಶುರ

ತಾರೂ ಶಡ್ಶೈಯುಂ ನೀಳ್ ಮುಡಿಯುಂ ಒಣ್
ಮುರಿವುಂ ಶಕ್ಕರಮುಂ
ಶೋರರವುಂ ಪೊನ್ನಾಣುಂ ತೋನ್‍ರುಮಾಲ್ -
ಶೂರಿಮ್
ತಿರುನ್ದರುವಿಪಾಯುಂ ತಿರುಮಲೈ ಮೇಲ್ ಎನ್ನೈಕ್ಕು
ಇರಂಡುರುವಮೊನ್‍ರುಯ್ ಇಶೈಂದ್

ಸಮೃದ್ಧವಾದ ನೀರಿನಿಂದ ಬಳಸಿರುವ ಕಾಲುವೆಯು ಪ್ರವಹಿಸುವ ತಿರುಮಲೆಯ ಮೇಲಿರುವ  ನನ್ನ ಸ್ವಾಮಿಗೆ ಕೆಳಕ್ಕೆ ಕಟ್ಟಿದ ಜಟೆಯಿಂದಲೂ ನೀಳ ಕಿರೀಟದಿಂದಲೂ, ಸುಂದರವಾದ ಶೂಲ ಮತ್ತು ಸುದರ್ಶನ ಚಕ್ರಗಳೂ ಸೊಂಟದ  ನಾಗಾಭರಣ ಮತ್ತು ಸ್ವರ್ಣ ಉಡಿದಾರವೂ ಅಲಂಕಾರವಾಗಿದೆ. ಈ ರೀತಿ ಎರಡು  ಸ್ವರೂಪವೂ (ಹರಿಹರ) ಕಲೆತು  ಈ ಸ್ವಾಮಿಯಲ್ಲಿ ಸೇರಿಕೊಂಡಿದೆ ಇದು ಆಶ್ಚರ್ಯವು.

ಪಿ. ಸೀತಾಪತಿಯವರು ಇದು ಹರಿಹರ ಅಭೇದವನ್ನು ತಿರುಮಲೈ ದೇವರಲ್ಲಿ ಕಾಣಿಸುವ ಪದ್ಯ ಎನ್ನುತ್ತಾರೆ.  ನಿಜಕ್ಕೂ ಇದರ ರಚನೆ ವಿಚಿತ್ರವಾಗಿದೆ.  ಮೇಲಿನ ಅರ್ಥಕ್ಕೆ ಹರಿಹರ

ಸ್ವರೂಪಗಳು ಈ ದೇವನಲ್ಲಿ ಒಂದಾಗಿ ಕಲೆತುಕೊಂಡಿವೆ ಎಂದು ತೋರುತ್ತದೆ. ಆದರೆ ಶ್ರೀವೈಷ್ಣವ ವ್ಯಾಖ್ಯಾನದ ಪ್ರಕಾರ ಮೇಲೆ ಹೇಳಿದ ಪ್ರಕಾರವೇ ಇದಕ್ಕೂ ಅರ್ಥ ಮಾಡಬೇಕು. ಎಂದರೆ ಶಿವನು ವಿಷ್ಣುವಿನೊಡನೆ ಶರೀರವಾಗಿ ಇದ್ದು ಕೊಂಡು ಈ ವಿಷ್ಣುವು ಶ್ರೀನಿವಾಸನಲ್ಲಿ ಅಂತರ್ಗತನಾಗಿ ಕಾಣಿಸುತ್ತಿದ್ದಾನೆ ಎನ್ನುವ ಅರ್ಥ. ಇಲ್ಲಿಯೂ ಶಿವ ಅಂಗ, ವಿಷ್ಣು ಅಂಗಿ. ಈ ಅಂಗಿಯ ಮತ್ತೊಂದು ರೂಪ ಶ್ರೀನಿವಾಸ.

ಮೂರನೆಯ ಪಾಶುರ ಪೊಯ್ಗೈಯ್ ಆಳ್ವಾರರ ಮೊದಲ್ ತಿರುವಂದಾದಿಯ ೬೯ ನೇ ಪಾಶುರ.

ಪೊನ್ ತಿಗಳುಂ ಮೇನಿ ಪುರಿಶಡೈ
ಅಮ್ ಪುಣ್ಣಿಯನುಂ
ನಿನ್ ಉಲಗಂ ತಾಯೆ ನೆಡುಮಾಲುಂ-- ಎನ್‌ರುಂ
ಇರುವರಂಗತ್ತಾಲ್ ತಿರಿವರೇಲುಂ - ಒರುವನ್
ಒರವನಂಗತ್ತು ಎನ್‌ರುಂ ಉಳನ್,

ಚಿನ್ನದಂತೆ ಪ್ರಕಾಶಿಸುವ ದೇಹವುಳ್ಳವನು ; ನೀಳವಾದ ಜಡೆಯುಳ್ಳವನೂ ಪುಣ್ಯಶಾಲಿಯಾದ ರುದ್ರನು, ನಿಂತು ಲೋಕವನ್ನು ಅಳೆದ ಸರ್ವೇಶ್ವರನು ಎಲ್ಲೆಲ್ಲೂ ಎರಡು ದೇಹಗಳಿಂದ ಪ್ರತ್ಯೇಕವಾಗಿ ಸಂಚಲಿಸುವವರಾದರೂ ಸಹ ಒಬ್ಬನು ಎಂದರೆ ರುದ್ರನು ಸ್ವಾಮಿಯಾದ ನಾರಾಯಣದ ಅಂಗದೊಳಗೆ ಉಳಿದುಕೊಂಡಿದ್ದಾನೆ. ಇಲ್ಲಿ ಅಂಗ ಅಂಗೀಭಾವ ಸ್ಪಷ್ಟವಾಗಿ ಕಂಡು ಬರುತ್ತದೆ.

ನಮ್ಮಾಳ್ವಾರ್ ಹೇಳಿರುದೆಂದು ಉದಾಹರಿಸಲ್ಪಟ್ಟಿರುವ ತಿರುವಾಯ್ಮೊಳಿಯ ದ್ವಿತಿಯ ಶತಕದ ದ್ವಿತಿಯ ದಶಕದ ಮೂರನೆಯ ಪಾಶುರ ಇಂತಿದೆ. (೨,೨,೩)

ಏರಿನೈಪ್ಪೂವನೈ ಪ್ಪೂಮಗಳ್ ತನ್ನೈ
ವೇರುನ್‌ರುವಿಣ್ ತೊಲಿತ್ತನ್ನುಳ್ ವೈತ್ತು
ಮೇಲ್ ತನ್ನೈ ಮಾದಿಡ ನಿಮಿರ್ನ್ದು ಮಣ್ ಕೊಂಡ
ಮಾಲ್ ತನಿಲ್ ಮಿಕ್ಕುಮ್ ಓರ್ ತೇವುಮ್ ಉಳದೇ

ವೃಷಭವಾಹನನಾದ ರುದ್ರನನ್ನೂ, ಕಮಲೋದ್ಭವನಾದ ಬ್ರಹ್ಮನನ್ನೂ ಮತ್ತು ಪದ್ಮಜೆಯಾದ ಲಕ್ಷ್ಮಿಯನ್ನೂ ಕೂಡ ಬೇರೆಯೆಂಬಂತೆ ಇಲ್ಲದೆ ತನ್ನ ದೇಹದಲ್ಲಿ ಇಟ್ಟುಕೊಂಡು ಪರಮಪದ ವಾಸಿಗಳು ಸೇವಿಸುವಂತೆ ಊರ್ಧ್ವ ಲೋಕವನ್ನು ಸೀಳಿಕೊಂಡು ಅದು ಕೆಳಗೆ ಸಾರುವಂತೆ ಬೆಳೆದು ನಿಂತು ಭೂಮಿಯನ್ನು ಅಳೆದ ವಿಶ್ವವ್ಯಾಪಿಯಾದ ಸ್ವಾಮಿಗಿಂತ ಬೇರೆಯವರು ಅಧಿಕರು ಎನಿಸಲ್ಪಡುವ ದೈವ ಯಾವುದಾದರೂ ಉಂಟೇ.

ಇದರಲ್ಲಿ ವಿಷ್ಣುವಿನ ಸರ್ವವ್ಯಾಪಿ ಗುಣವನ್ನು ವಿವರಿಸಿದೆ ಎನ್ನುವ ಅಂಶ ವ್ಯಕ್ತಗೊಳ್ಳುತ್ತದೆಯಲ್ಲವೆ.

ಇನ್ನು ೮೯ ನೆಯ ಪುಟದಲ್ಲಿ ಪಿ. ಸೀತಾಪತಿಯವರು ಉದಾಹರಿಸಿರುವ ಪಾಶುರ ಪೊಯ್ಗೈಯ್ ಆಳ್ವಾರರ ಮೊದಲ್ ತಿರುವಂದಾದಿಯ ೭೪ ನೇ ಪಾಶುರ

ಏತ್ತಾನ್ ಪುಳ್ಳೂರ್ನ್ದಾನ್ ಎಯಿಲ್ ಎರುತ್ತಾನ್
ಮಾರ್ವಿಡಿಂದಾನ್
ನೀತ್ತಾನ್ ನಿರಿಲ್ ಮಣಿವಣ್ಣತ್ತಾನ್,
ಕೂತ್ತೊರುಪಾಲ್
ಮಂಗೈಯಾನ್ ಪೂಮಗಳಾನ್‌ವಾರ್ ಶಡೈಯಾನ್
ನೀಣ್ಮುಡಿಯಾನ್
ಕಂಗೈಯಾನ್ ನೀರು ಕಲಿಲಾನ್‌ಕಾಪ್ಪು,

ವೃಷಭವಾಹನನೂ, ತ್ರಿಪುರಗಳನ್ನು ಸುಟ್ಟುಹಾಕಿದವನೂ ಭಸ್ಮಲೇಪಾದಿಯಿಂದ ರಂಜಿತನೂ, ಪಾರ್ವತಿಯನ್ನು ದೇಹದಲ್ಲಿ ಧಾರಣ ಮಾಡಿಕೊಂಡವನೂ ಆದ ರುದ್ರನು ಗರುಡ ವಾಹನನೂ, ಹಿರಣ್ಯಕಶಿಪುವಿನ ಎದೆಯನ್ನು ಬಗೆದವನೂ, ಮಣಿವರ್ಣನೂ ಕಮಲವಾಸಿನಿಯಾದ ಲಕ್ಷ್ಮೀವಲ್ಲಭನೂ, ನೀಳ ಕಿರೀಟವುಳ್ಳವನೂ ದೀರ್ಘ ಶ್ರೀಪಾದಗಳಿಂದ ರಂಜಿತನೂ ಆದ ಸರ್ವೇಶ್ವರನು ರಕ್ಷಕನಾಗಿದ್ದಾನೆ.

ಶ್ರೀ ಪಿ. ಸೀತಾಪತಿಯವರು ಇಂಗ್ಲೀಷಿನಲ್ಲಿ ಉದಾಹರಿಸಿರುವ ವಿವರಿಸಿರುವ ಪಾಶುರಗಳ ತಮಿಳು ರೂಪ ಕನ್ನಡದ ಅರ್ಥ ಸಹಿತವಾಗಿ ಮೇಲೆ ಹೇಳಿದ್ದಾಯಿತು. ಶ್ರೀ ಸೀತಾಪತಿಯವರ ಹೇಳಿಕೆಯಂತೆ ಈ ಎಲ್ಲಾ ಪಾಶುರಗಳಲ್ಲೂ ವೆಂಗಡದೊಡೆಯನಿಗೆ ಸಂಬಂಧಪಟ್ಟ ಅಂಶಗಳಿವೆ ಎಂಬುದಾಗಿ ತಿಳಿಯುತ್ತದೆ. ವೇಂಗಡದೊಡೆಯನು ಶಿವ ಮತ್ತು ವಿಷ್ಣು ಎರಡು ಮೂರ್ತಿಗಳನ್ನು ಒಳಗೊಂಡಿದ್ದಾನೆ ಮತ್ತು ಆದರಿಂದ ಶಿವ ಮತ್ತು ವಿಷ್ಣುವಿನ ಅಭೇದ ಸ್ವರೂಪವನ್ನು ತೋರಿಸುತ್ತಿದ್ದಾನೆ. ಈ ಅಭೇಧ ಸ್ವರೂಪವನ್ನೇ ಆಳ್ವಾರುಗಳು ತಮ್ಮ ಪಾಶುರಗಳಲ್ಲಿ ಹಾಡಿದ್ದಾರೆ. ವೇಂಗಡದ ಒಡೆಯನನ್ನು ವಿಷಯವನ್ನಾಗಿ ಇಟ್ಟುಕೊಂಡು ಎನ್ನುತ್ತಾರೆ. ಈ ವಿಚಾರದಲ್ಲಿ ಪಿ. ಸೀತಾ ಪತಿಯವರ ವಾದಕ್ಕೆ ಒದಗುವ ಹಿನ್ನೆಲೆಯ ಬಗ್ಗೆ ನಾಲ್ಕಾರು ಮಾತುಗಳನ್ನು ಆಡಬೇಕೆಂದು ಎನಿಸುತ್ತದೆ.

(ಮುಂದುವರೆಯುತ್ತದೆ)

ಶ್ಲೋ॥ ಭಾತಿ ಶ್ರೀ ತಿರುವಿಣ್ಣಗರ್ ಪುರವರೇ ಹಾರ್ತ್ಯಬ್ಜಿನೀ ಶೋಭಿತೇ
ಶ್ರೀಮದ್ವಿಷ್ಣುವಿಮಾನ ಸಂಸ್ಥಿತಿ ಲಸನ್ ಶ್ರೀ ಭೂಮಿ ದೇವೀ ಪತಿಃ
ಶ್ರೀಮಾನುಪ್ಪಿಲಿಯಪ್ಪ ನಾಹ್ವಾಯ ಯುತಃ ಪಕ್ಷೀಂದ್ರಾ ಕಾವೇರಿಕಾ
ಧರ್ಮ್ಯೈರ್ದೃಷ್ಟ ವಪುಶ್ಶಠಾರಿ ಕಲಿಜಿತ್ ಸಮ್ಯಕ್ ಸ್ತುತಃ ಪ್ರಾಜ್ಮುಖಃ

ತಿರುವವಿಣ್ಣಗರ್ ದಿವ್ಯ ದೇಶ (ಉಪ್ಪಿಲಿಯಪ್ಪನ್ ಕೋಯಿಲ್) ಎಂಬ ಹೆಸರು ಲೋಕದಲ್ಲಿ ಹರಿಮೇಯರ್ ನಗರಂ ಪರಮೇಶ್ವರ ವೆನ್ನಗರಂ.

ನಂದಿಪುರಂ ನಗರಂ ಎಂಬ ಹೆಸರಿನಿಂದ ಕರೆಯ ಲ್ಪಡುತ್ತಿರುವ ಈ ದಿವ್ಯದೇಶದಲ್ಲಿ ಅಮ್ಮನವರಾದ ಭೂಮಾದೇವಿಯೊಂದಿಗೆ ಭಗ ವಂತನು ನೆಲಸಿ ಎಲ್ಲರನ್ನೂ ಅನುಗ್ರಹಿಸುತ್ತಿದ್ದಾನೆ. ಈ ದಿವ್ಯ ದೇಶವು ತಿರುಕ್ಕುಡಂದೈ ದಿವ್ಯದೇಶದಿಂದ ಸುಮಾರು ಏಳು ಕಿಲೋಮೀಟರ್ ದೂರದಲ್ಲಿ ಎರಡು ಪ್ರಾಕಾರಗಳೊಂದಿಗೆ ಐದು ಅಂತಸ್ತುಗಳೊಂದಿಗೆ ರೂಪು ಗೊಂಡಿರುವ ರಾಜಗೋಪುರದೊಂದಿಗೆ ಅದ್ಭುತವಾದ ಪ್ರಕೃತಿ ಸೌಂದರ್ಯದೊಂದಿಗೆ ರಾರಾಜಿಸುತ್ತಿದೆ. ತಿರುಪತಿ ಆಕಾಶನಗರಿ, ತುಲಸಿವನ ಪುಲಿಯಪ್ಪನ್ ಕೋಯಿಲ್ ಮಾರ್ಕಂಡೇಯ ಕ್ಷೇತ್ರ ಎಂಬ ಹೆಸರುಗಳಿಂದ ಈ ಕ್ಷೇತ್ರ ಕರೆಯಲ್ಪಡುತ್ತಿದೆ. ಈ ಕ್ಷೇತ್ರಾಧಿಪತಿ ಉಪ್ಪಿಲಿ ಯಪ್ಪನ್ ಶ್ರೀನಿವಾಸಾ ತ್ರಿಬಿಣಕರಪ್ಪನ್ ಎಂದು ಭಕ್ತರಿಂದ ಕರೆಯಿಸಿ ಕೊಳ್ಳುತ್ತಿದ್ದಾನೆ.

ನಮ್ಮಾಳ್ವಾರರು ಮಂಗಳ ಶಾಸನವನ್ನು ರಚಿಸಿರುವಂತಹಾ ಸಂದರ್ಭದಲ್ಲಿ ಪೊನ್ನಪ್ಪನ್, ಮನೀಅಪ್ಪನ್,ಮುತ್ತಪ್ಪನ್, ಎನ್ನ ಪ್ಪನ್,ತಿರಿವಿನ್ನರಪ್ಪನ್ ಎಂಬ ನಾಮಧೇಯಗಳೊಂದಿಗೆ ಸ್ತುತಿಸಿದ್ದಾರೆ. ಇಲ್ಲಿ ಸ್ವಾಮಿಯು ಐದು ಉತ್ಸವ ಮೂರ್ತಿಗಳೊಂದಿಗೆ ಪ್ರತ್ಯೇಕ ಸನ್ನಿಧಿ ಯಲ್ಲಿ ಸ್ವಾಮಿಯು ನೆಲೆಸಿದ್ದಾರೆ. ಇಲ್ಲಿ ಅಮ್ಮನವರಿಗೆ ಪ್ರತ್ಯೇಕವಾದ ಸನ್ನಿಧಿ ಇಲ್ಲ. ಆದ್ದರಿಂದ ಮೂಲಮೂರ್ತಿಯ ಉಪ್ಪಿಲಿಯಪ್ಪನ ಸ್ವಾಮಿಯ ಬಲ ಭಾಗದಲ್ಲಿ, ಗರ್ಭಗುಡಿಯಲ್ಲೇ ಭೂದೇವಿಯೊಂದಿಗೆ ವಿವಾಹ ಭಂಗಿ ಯಲ್ಲಿ ಸ್ವಾಮಿಯೊಂದಿಗೆ ನೆಲೆಸಿದ್ದಾಳೆ. ಹಾಗೆಯ ಭೂದೇವಿಯ ತಂದೆ ಮಾರ್ಕಂಡೇಯ ಮಹರ್ಷಿಯೂ ಗರ್ಭಗೃಹದಲ್ಲಿ ನೆಲೆಗೊಂಡಿದ್ದಾನೆ. ಈ ಕ್ಷೇತ್ರದ ಪುಣ್ಯಕರವಾದ ಪುಷ್ಕರಣಿ "ಅಹೋರಾತ್ರ ತೀರ್ಥ" ಎಂಬ ಹೆಸರಿ ನಿಂದ ಕರೆಯಲ್ಪಡುತ್ತಿದೆ. ಅಂದರೆ ರಾತ್ರಿಯ ವೇಳೆಯಲ್ಲೂ ಈ ಪುಷ್ಕರಣಿ ಯಲ್ಲಿ ಸ್ನಾನವನ್ನು ಆಚರಿಸಬಹುದು. ತಮಿಳಿನಲ್ಲಿ ಪಗಲಿರಾಪೋಯಿ ಎಂದು ಹೇಳುತ್ತಿರುತ್ತಾರೆ. ಹಾಗೆಯೇ ಒಳಗಿನ ಪ್ರಾಕಾರದಲ್ಲಿ ಗರುಡ, ಶ್ರೀರಾಮ ಭಕ್ತನಾದ ಆಂಜನೇಯನು, ಇವರಿಗೆಲ್ಲಾ ಪ್ರತ್ಯೇಕವಾದ ಸನ್ನಿಧಿ ಇದೆ. ವಿಶೇಷವಾಗಿ ಈ ಕ್ಷೇತ್ರದಲ್ಲಿ ಸ್ವಾಮಿ ವೇದಾಂತ ದೇಶಿಕರಿಗೆ ಪ್ರತ್ಯೇಕ ವಾದ ಸನ್ನಿಧಿಯು ಮೂಲ ಮೂರ್ತಿಗೆ ಅತೀ ಸಮೀಪದಲ್ಲೇ ಇದೆ. ಯಾವ ಉತ್ಸವವೂ ವೇದಾಂತದೇಶಿಕರಿಲ್ಲದೇ ನಡೆಯುವುದಿಲ್ಲ. ಯಾವ ವೈಷ್ಣವ ಕ್ಷೇತ್ರದಲ್ಲೂ ಇಂತಹಾ ವೈಭವ ಇಲ್ಲ.

# ತಿರುವಿಣ್ಣಗರ್

## (ಉಪ್ಪಿಲಿಯಪ್ಪನ್ ಕೋಯಿಲ್)

**108 ವೈಷ್ಣವ ಕ್ಷೇತ್ರಗಳು**


- ಆಚಾರ್ಯ ಚಕ್ರವರ್ತಿ ರಂಗನಾಥನ್
- ಕನ್ನಡಾನುವಾದ - ಸೂರ್ಯವಂಶಿ




ಸ್ಥಳಪುರಾಣದ ಪ್ರಕಾರ ಭಗವಂತನ ಪಾದಪದ್ಮಗ್ರಳನ್ನು ನಿರಂತರವೂ ಸೇವಿಸುವಂತಹಾ ತುಳಸೀದೇವಿಗೆ ಭಗವಂತನ ತಿರುಮುಖ ಮಂಡಲ ಸೇವೆಯ ದರ್ಶನವಾಗುವುದಿಲ್ಲ.ಆದ್ದರಿಂದ ಬಹಳ ದುಃಖದಿಂದ ಇರುವ ತುಳಸಿ, ತನ್ನ ದುಃಖವನ್ನು ಸ್ವಾಮಿಯಲ್ಲಿ ಅರಿಕೆ ಮಾಡಿಕೊಂಡಾಗ, ದೇವದೇವನು ಭೂಲೋಕದಲ್ಲಿ ನೀನು ಒಬ್ಬ ಮಹರ್ಷಿಯ ಪುತ್ರಿಯಾಗಿ ಅವತರಿಸುವೆ. ಆಗ ನಾನು ನಿನ್ನನ್ನು ವಿವಾಹವಾಗುತ್ತೇನೆ ಎಂದು ಸಮಾಧಾನ ಮಾಡಿದಾಗ,ತುಳಸೀಯೂ ಆ ಕ್ಷೇತ್ರದಲ್ಲಿ ಅಯೋನಿಜೆಯಾಗಿ ಅವತರಿಸಿದ್ದಾಳೆ. ಚಿಕ್ಕ ಹುಡುಗಿಯಾಗಿ ಅದ್ಭುತವಾದ ಸುವಾಸನೆಯನ್ನೊಳಗೊಂಡ ತುಳಲಸೀ ವನದಲ್ಲಿ ಕೋಗಿಲೆಯ ಕಲರವವನ್ನು ಕೇಳಿಸಿಕೊಂಡ ಮಾರ್ಕಂಡೇಯ ಮಹರ್ಷಿ,ಈ ಶಿಶುವನ್ನು ತೆಗೆದುಕೊಂಡು ಬಂದು ತಮ್ಮ ಆಶ್ರಮದಲ್ಲಿ ಬೆಳೆಸಿದರು.ಭೂಮಿಯಿಂದ ಹುಟ್ಟಿದಳಾದ್ದರಿಂದ ಈಕೆಯನ್ನು ಭೂಮಾದೇವಿ ಎಂದು ನಾಮಕರಣವನ್ನು ಮಾಡಿದರು. ಈ ರೀತಿ ದಿನೇ ದಿನೇ ಅಭಿವೃದ್ಧಿಯಾಗಿ ಯುಕ್ತ ವಯಸ್ಸು ಬಂದ ಮೇಲೆ ಒಬ್ಬ ವೃದ್ದನು ಮಾರ್ಕಂಡೇಯ ಮಹರ್ಷಿಯ ಆಶ್ರಮಕ್ಕೆ ಬಂದು ಈ ಹುಡುಗಿಯನ್ನು ತೋರಿಸಿ, ಈ ಹುಡುಗಿಯನ್ನು ಮದುವೆಯಾಗುತ್ತೇನೆಂದು ಹೇಳಿದ.ಆಗ ಮಹರ್ಷಿಯು ಎಲೈ ವೃದ್ಧನೆ ನಿನಗಿದು ಸರಿಯೇ? ನೀವು ವೃದ್ಧರು ಈ ಹುಡುಗಿ ಇನ್ನೂ ಚಿಕ್ಕ ವಯಸ್ಸು ಅದೂ ಅಲ್ಲದೇ ನನ್ನ ಮಗಳಿಗೆ ಉಪ್ಪು ಹಾಕಿ ಅಡುಗೆ ಮಾಡಿ ತಿಳಿದಿಲ್ಲ. ನನಗಾಗಿ ನಾನು ಖುಷಿಯಾದ್ದರಿಂದ ಉಪ್ಪಿಲ್ಲದೇ ಅಡುಗೆ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾಳೆ. ಆದ್ದರಿಂದ ಇದು ಅಸಂಭವ! ಎಂದು ಹೇಳಿ ದಾಗ ಸ್ವಾಮಿ ಪರ್ವಾಗಿಲ್ಲ ನಾನು ವೃದ್ಧನೇ ಆದ್ದರಿಂದ ನನಗೆ ಯಾವ ರುಚಿಯೂ ಬೇಡ ಎಂದಾಗ ಅಸಹಾಯಕ ಸ್ಥಿತಿಯಲ್ಲಿ ಸಿಲುಕಿದ ಮಹರ್ಷಿಯನ್ನು ನೋಡಿ, ಸ್ವಾಮಿಯು ಇನ್ನು ತನ್ನ ಭಕ್ತನನ್ನು ಪರೀಕ್ಷಿಸ ಬಾರದೆಂದು, ದುಃಖವನ್ನುಂಟು ಮಾಡಬಾರದೆಂದು ಭಾವಿಸಿ ಶಂಖಚಕ್ರ, ಗದಾಧರನಾಗಿ ಸ್ವಾಮಿಯು ಅವರೆದಿರು ಪ್ರತ್ಯಕ್ಷನಾದ ಅವರಿಬ್ಬರು ಆಶ್ಚರ್ಯಚಕಿತರಾದರು. ಆಹಾ! ಸಾಕ್ಷಾತ್ತು ಪರಂಧಾಮನೇ ದರ್ಶನ ಭಾಗ್ಯವನ್ನು ನೀಡಿದನಲ್ಲಾ? ಎಂದು ಆನಂದದಿಂದ ಮಾರ್ಕಂಡೇಯ ಮಹರ್ಷಿ, ಸ್ವಾಮಿಯ ಕೋರಿಕೆಯ ಮೇರೆಗೆ ತನ್ನ ಪುತ್ರಿಯಾದ ಭೂಮಾದೇವಿಯನ್ನು ಕನ್ಯಾದಾನ ಮಾಡಿದ. ಹಾಗೆ ಒಂದು ಪ್ರಾರ್ಥನೆಯನ್ನು ಸಲ್ಲಿಸಿದ. ಸ್ವಾಮೀ ನೀವು ಈ ಕ್ಷೇತ್ರದಲ್ಲಿ ಈ ಕಲ್ಯಾಣ ಮಾಡಿ ಕೊಳ್ಳುತ್ತಿರುವ ಭಂಗಿಯಲ್ಲೇ ನೆಲೆಸಿ ತಮ್ಮ ನೈವೇದ್ಯದಲ್ಲಿ ಉಪ್ಪಿಲ್ಲದೇ ಎಲ್ಲ ಪ್ರಸಾದಗಳನ್ನೂ ಸ್ವೀಕರಿಸಬೇಕು ಎಂದು ಕೇಳಿಕೊಂಡ. ಭಗವಂತನು ಮಹರ್ಷಿಯ ಕೋರಿ ಕೆಯ ಮೇರೆಗೆ ಅಂದಿನಿಂದಲೂ ಇಂದಿನವರೆಗೂ ತನ್ನ ನೈವೇದ್ಯದಲ್ಲಿ ಉಪ್ಪು ಇಲ್ಲದೇ ಸಮಸ್ತ ಪ್ರಸಾದಗಳನ್ನು ಸ್ವೀಕರಿಸುತ್ತಿದ್ದಾನೆ. ಭಗವಂತನಿಗೆ ತುಳಸಿ ಇಂದಿಗೂ ಕಾಣಿಕೆಯ ಸ್ವರೂಪಿಣಿಯಾಗಿ ನಮಗೆ ದರ್ಶನವನ್ನು ನೀಡುತ್ತಿದ್ದಾಳೆ. ತಮಿಳ ತಿಂಗಳಾದ ಐಪ್ಪ ಸಿಮಾಸಂ ಶ್ರವಣಾ ನಕ್ಷತ್ರದಲ್ಲಿ ಇವರ ವಿವಾಹ ನಡೆದಿದೆ. ಈವಿವಾಹ ಮಾಡಿಕೊಳ್ಳುತ್ತಿರುವ ಭಂಗಿಯಲ್ಲೇ ಸ್ವಾಮಿ ಇಂದಿಗೂ ನೆಲೆಸಿದ್ದಾನೆ.ಅನೇಕ ಮಹಿಮೆಗಳೊಂದಿಗೆ ಸ್ವಾಮಿ ನೆಲೆಸಿದ್ದಾನೆ.



ಸಾಕ್ಷಾತ್ತು ಶ್ರೀವೇಂಕಟೇಶ್ವರ ಸ್ವಾಮಿಯ ಪ್ರತೀರೂಪವೆಂದೂ ಸೇವೆಯನ್ನು ಸ್ವೀಕರಿಸುತ್ತಿದ್ದಾನೆ. ಸ್ವಾಮಿಯ ಸೋದರನಾಗಿ ಎಲ್ಲರಿಂದಲೂ ಸ್ತುತಿಸಲ್ಪಡುತ್ತಿದ್ದಾನೆ. ಯಾರು ಏನೇ ಕೋರಿದರೂ ಅದನ್ನು ತೀರಿಸುವ ದೈವದಂತೆ ಸ್ವಾಮಿಯು ಹೆಸರುವಾಸಿಯಾಗಿದ್ದಾನೆ.

ಭಗವಂತನು ಉಪ್ಪಿಲಿ ಅಪ್ಪನ್ ಎಂದರೆ ಉಪ್ಪು ಇಲ್ಲದ ಅಪ್ಪನೆಂದೂ, ಉಪ್ಪನ್ನು ಸೇವಿಸದ ಸ್ವಾಮಿ ಎಂದು ಅರ್ಥ ! ಶ್ರೀನಿವಾಸನು ಪೂರ್ವದ ಮುಖವಾಗಿ ನಿಂತಿರುವ ಭಂಗಿಯಲ್ಲಿ ನೋಡಬಹುದು. ಅಮ್ಮನವರು ಧರಣೀದೇವಿ ವಸುಂಧರ ವಿಮಾನ ಶುದ್ಧ ಆನಂದ ವಿಮಾನ, ಪ್ರತ್ಯಕ್ಷ ಕಾವೇರಿ, ಮಾರ್ಕಂಡೇಯ ಮಹರ್ಷಿ ಗರುಡನು ಧರ್ಮದೇವತೆಯಾಗಿ ಇಲ್ಲಿ ನೆಲೆಸಿದ್ದಾನೆ. ಮಂಗಳಾಶಾಸನ ಮಾಡಿರುವ ನಮ್ಮಾಳ್ವಾರರು ಮತ್ತು ಪೊಯ್ಗೆಳ್ವಾರರು, ತಿರುಮಂಗಳಾರ್ವಾರು,ವೈಖಾನಸ ಆಗಮೋಕ್ತವಾಗಿ ಭಗವಂತನು ಆರಾಧಿಸಲ್ಪಡುತ್ತಿದ್ದಾನೆ. ಅಹೋರಾತ್ರ ಪುಷ್ಕರಿಣೀ ಈ ಪ್ರಕಾರವಾಗಿ ಈ ದಿವ್ಯದೇಶ ವಿರಾಜಮಾನವಾಗಿದೆ. ಅನೇಕರಿಗೆ ಕುಲದೈವವಾಗಿ ಉಪ್ಪಿಲಿ ಅಪ್ಪನ್ ಸ್ವಾಮಿ ಸೇವೆಯನ್ನು ಸ್ವೀಕರಿಸುತ್ತಿದ್ದಾನೆ.

ಇಂತಹಾ ಕ್ಷೇತ್ರಕ್ಕೆ ಹೋಗಿ ಭೂಮಾದೇವಿ ಕಲ್ಯಾಣ ಸ್ವರೂಪದಲ್ಲಿ ನೆಲೆಸಿರುವಂತಹಾ ಈ ಶ್ರೀನಿವಾಸನನ್ನು ಯಾರು ದರ್ಶಿಸುತ್ತಾರೋ ಅವರಿಗೆ ಸಮಸ್ತ ಸೌಭಾಗ್ಯವುಂಟಾಗುತ್ತದೆ. ವಿಶೇಷವಾಗಿ ವಿವಾಹವಾಗದೇ ಇರುವ ಕನ್ಯೆಯರು, ಸಂತಾನ ಕೋರುವ ಗೃಹಿಣಿಯರು ಇಲ್ಲಿ ಬಂದು ಸ್ವಾಮಿಯನ್ನು ದರ್ಶಿಸಿದರೆ ತಮ್ಮ ಕೋರಿಕೆಯನ್ನು ನೆರವೇರಿಸಿಕೊಳ್ಳುತ್ತಾರೆ. ಆದ್ದ ರಿಂದ ಈ ಸ್ವಾಮಿಯನ್ನು ಸೇವಿಸಿ ನಾವೆಲ್ಲಾ ಸಕಲ ಸೌಭಾಗ್ಯ ಗಳನ್ನು ಹೊಂದಿ ದೇವದೇವನ ದಿವ್ಯ ಕೃಪೆಗೆ ಪಾತ್ರರಾಗೋಣ.



# ಮಳೆಗಾಲದಲ್ಲಿ ಆರೋಗ್ಯ ಸಂರಕ್ಷಣೆ

ತೆಲುಗು ಮೂಲ : ಡಾ॥ಸಿ. ಮಧುಸೂಧನ್ ವರ್ಮ
90007 61390
ಅನುವಾದ : ಡಿ.ಎಸ್. ಬದ್ರಿನಾಥ್



ಮಳೆಗಾಲ ಆರಂಭವಾಗುವುದರೊಂದಿಗೆ ಇಷ್ಟು ದಿನ ಉರಿಯನ್ನು ಅನುಭವಿಸಿದ ಪ್ರಜೆಗಳಿಗೆ ವಿರಾಮ ದೊರೆಯುತ್ತದೆ. ಈ ಋತುವಿನಲ್ಲಿ ಆಹ್ಲಾದಕರವಾದ ವಾತಾವರಣ ವಿರುತ್ತಲೇ ಅನೇಕ ವಿಧದ ವ್ಯಾಧಿಗಳು ಪ್ರಬಲಗೊಂಡು ನಮ್ಮನ್ನು ಅನಾರೋಗ್ಯಕ್ಕೆ ಗುರಿಪಡಿಸುವ ಅವಕಾಶಗಳು ಸಹಾ ಬಹಳ ಹೆಚ್ಚು. ನೆಗಡಿ,ಗಂಟಲುನೋವು, ಕೆಮ್ಮಿನಂತಹ ಸಮಸ್ಯೆಗಳು, ಮಲೇರಿಯಾ, ಕಾಲರಾ,ಕಾಮಿಣಿಯಂತಹ ವಿಭಿನ್ನ ವ್ಯಾಧಿಗಳು ಈ ಸಮಯದಲ್ಲಿ ಹೆಚ್ಚಾಗಿ ವಿರಾಜಿಸುತ್ತದೆ.

ಬ್ರಾಂಕೈಟಿಸ್, ಅಸ್ತಮಾ, ನ್ಯೂಮೊನಿಯಾದಂತಹ ತೊಂದರೆಗಳಿಗೆ ಸಂಬಂಧಿಸಿದಂತಹ ವ್ಯಾಧಿಗಳು ತೀವ್ರರೂಪ ತೆಗೆದುಕೊಳ್ಳುವ ಸಾಧ್ಯತೆಯೂ ಇದೆ.

ಮಳೆಗಾಲದಲ್ಲಿ ಉಷ್ಣೋದ್ರೇಕ ಕಡಿಮೆಯಿರುವ ಕಾರಣ ಕ್ರಿಮಿಗಳ ಅಭಿವೃದ್ಧಿ, ವ್ಯಾಪ್ತಿ ಬಹಳ ಹೆಚ್ಚು ಅಷ್ಟೇ ಅಲ್ಲದೇ, ಕುಡಿಯುವ ನೀರು, ತಿನ್ನುವ ಆಹಾರ ಇತ್ಯಾದಿಗಳು ಬ್ಯಾಕ್ಟಿರಿಯಾ, ವೈರಸ್‌ನಂತಹ ಕ್ರಿಮಿಗಳು, ಸೊಳ್ಳೆಗಳ ಮೂಲಕ ಹೆಚ್ಚಾಗಿ ಕಲುಷಿತವಾಗುವ ಅವಕಾಶಗಳಿರುತ್ತವೆ. ನಿಂತ ನೀರಿನಿಂದ ಸೊಳ್ಳೆಗಳ ವ್ಯಾಪ್ತಿ ಹೆಚ್ಚಾಗಿರುತ್ತದೆ.

ಸುಮಾರು ಎರಡು ಮೂರು ದಶಕಗಳ ಹಿಂದೆಯವರೆಗೂ ಇಂತಹ ಋತುಗಳಲ್ಲಿ ಬ್ಯಾಕ್ಟಿರಿಯಾಗಳಿಂದ ಉಂಟಾಗುವ ಟೈಫಾಯಿಡ್, ಕಾಲರಾ, ಸೋಂಕುಗಳಂತಹ ಸಮಸ್ಯೆಗಳು ಹೆಚ್ಚಾಗೇ ಬರುತ್ತಿದ್ದವು. ಅದಕ್ಕೆ ಪೂರಕವಾಗಿ ವಿವಿಧ ಬಗೆಯ ವೈರಸ್‌ಗಳು ವಿರಾಜಿಸಿ ವಿವಿಧ ಬಗೆ ಡೆಂಗೂ,ಸ್ವೈನ್‌ಫ್ಲೂನಂತಹ ಜ್ವರಗಳು,ಅಂಟು ರೋಗಗಳು, ಕಾಮಿಣೆಗಳು ಬಲಗೊಂಡು ರಾರಾಜಿಸುವುದು ಗಮನೀಯ ವಿಷಯ. ಸೊಳ್ಳೆಯಂತಹ ವಾಹಕಗಳ ಮೂಲಕ ಸೂಕ್ಷ್ಮಜೀವಿಗಳಿಂದ ಉಂಟಾಗುವ ಹಾಗೂ ಸಮಸ್ಯಾತ್ಮಕವಾಗಿ ಪರಿಣಮಿಸುವ ಮಲೇರಿಯಾ ಸಂಗತಿಯಂತೂ ಸರೀಸರಿ.

ಇವುಗಳೆಲ್ಲಕ್ಕೂ ಮೂಲ ಕಾರಣ ವಾತಾವರಣ ಕಾಲುಷ್ಯದೊಂದಿಗೆ ನಮ್ಮಲ್ಲಿನ ರೋಗ ನಿರೋಧಕ ಶಕ್ತಿ ಕುಗ್ಗುವುದೇ ಆಗಿದೆ. ಚಿಕ್ಕ ಮಕ್ಕಳಲ್ಲಿ ಈ ರೋಗ ನಿರೋಧಕ ಶಕ್ತಿ ಇನ್ನಷ್ಟು ಕಡಿಮೆ ಪ್ರಮಾಣದಲ್ಲಿರುವುದರಿಂದ ರೋಗಗಳು ಇನ್ನು ಹೆಚ್ಚಾಗಿ ವಿರಾಜಿಸುವ ಅವಕಾಶವಿರುತ್ತದೆ.

## ಚಿಕಿತ್ಸೆಗಳು :

ಒಂದು ವಾರ ಪೂರ್ತಿ ದಿನವೂ ಉದಯದಲ್ಲಿ ಬರಿಹೊಟ್ಟೆಯಲ್ಲಿ 5 ಬೇವಿನೆಲೆ 5 ಮೆಣಸು ಕಲಿಸಿ ಅಗೆದು ನುಂಗಿದರೆ ವರ್ಷಪೂರ್ತಿ ವಿವಿಧ ಬಗೆಯ ಅಂಟುರೋಗಗಳು, ವೈರಸ್, ಬ್ಯಾಕ್ಟಿರಿಯಾ ದಂತಹ ಕ್ರಿಮಿಗಳಿಂದ ಸಂಭವಿಸುವ ರೋಗಗಳು ತಗಲದಂತೆ ರಕ್ಷಣೆಯನ್ನು ಪಡೆಯಬಹುದು.

ಅಮೃತ ಬಳ್ಳಿಯ ಎಲೆಗಳನ್ನು ಕುಟ್ಟಿ ಗುಲಗಂಜಿಯಷ್ಟು ಉಂಡೆಗಳನ್ನು ಮಾಡಿ ಬೆಳಗ್ಗೆ, ಸಂಜೆ ಸೇವಿಸುತ್ತಿದ್ದರೆ ಕಾಮಿಣಿ ತ್ವರಿತದಲ್ಲಿ ಗುಣವಾಗುತ್ತದೆ.

ದಿನವೂ ಎರಡು ಬಾರಿ, ಬಾರಿ ಯೊಂದಕ್ಕೆ 10-20 ಮಿ.ಲೀ. ಅಮೃತಬಳ್ಳಿ ಎಲೆಯ ರಸವನ್ನು ಅಥವಾ ಅದರಲ್ಲಿ ಸ್ವಲ್ಪ ಜೇನು ಕಲಿಸಿಯಾಗಲೀ ಸೇವಿಸುವುದರಿಂದ ವಿವಿಧ ಬಗೆಯ ವಿಷ ಜ್ವರಗಳು ತಗ್ಗುವುದೊಂದೇ ಅಲ್ಲದೇ ರೋಗಗಳು ತ್ವರಿತದಲ್ಲಿ ಶಮನಗೊಳ್ಳುತ್ತವೆ.

ಚಿಕ್ಕ ಮಕ್ಕಳಿಗೆ ಅವರ ವಯಸ್ಸಿಗನು ಗುಣವಾಗಿ ವೈದರ ಸಲಹೆ ಮೇರೆಗೆ ಪ್ರಮಾಣ ವನ್ನು ಬಳಸಿ ಕೊಳ್ಳಬಹುದು.

ಆಯುರ್ವೇದ ವಿಕ್ರಯಾಲಯ ಗಳಲ್ಲಿ ಲಭಿಸುವ ಅಮೃತಾರಿಷ್ಟ, ಕಿರಾತಾರಿಷ್ಟ ಪಂಚತಿ ಕಾರಿಷ್ಟ, ಭೂನಿಂಬಾದಿಕ್ವಾಥ ಯಂತಹ ಔಷಧಗಳು ವ್ಯಾಧಿ ನಿರೋಧಕ ಶಕ್ತಿಯನ್ನು ವೃದ್ಧಿಪಡೆಸುತ್ತದೆ. ಇಂಜೆಕ್ಷನ್, ಜ್ವರಗಳನ್ನು ತಗ್ಗಿಸಲು, ಅವುಗಳು ಬಾರದೇ ಇರಲು ಇವು ಪ್ರಯೋಜನಕಾರಿಯಾಗುತ್ತವೆ.

ಇವುಗಳಲ್ಲಿ ಯಾವುದೋ ಒಂದು ಔಷಧಿಯನ್ನು ಸ್ವಲ್ಪ ದಿನಗಳವರೆಗೆ ದಿನವೂ ಎರಡು ಬಾರಿ ಆಹಾರ ಸೇವನೆಯ ನಂತರ ಬಾರಿಯೊಂದಕ್ಕೆ 10 ಮಿ.ಲೀ ಔಷಧಿಯನ್ನು ಸಮಾನವಾಗಿ ನೀರಿನಲ್ಲಿ ಕಲಿಸಿ ಸೇವಿಸಿದರೆ ಬಹಳಾ ಉಪಯುಕ್ತವಾಗಿರುತ್ತದೆ. ಚಿಕ್ಕ ಮಕ್ಕಳಲ್ಲಿ ಅಂದರೆ 2,3 ವರ್ಷ ದಾಟಿದ ಮಕ್ಕಳಿಗೆ ಅವರ ವಯಸ್ಸಿನಗನು ಗುಣವಾಗಿ 2-5 ಮಿ.ಲೀ. ನಿಂದ 5 ಮಿ.ಲೀ. ಔಷಧವನ್ನು ಸಮಾನವಾಗಿ ನೀರು ಕಲಿಸಿ ಬಳಸ ಬಹುದು.

**ಎಚ್ಚರಿಕೆಗಳು :**

ಬಜಾರುಗಳಲ್ಲಿ ರಸ್ತೆ ಬದಿಯಲ್ಲಿ ತಯಾ ರಿಸಲ್ಪಡುವ ಅಶುಭ್ರ ಆಹಾರ ಪದಾರ್ಥಗಳನ್ನು ತಿನ್ನಬಾರದು.

ಕೈಗಳನ್ನು ಶುಭ್ರವಾಗಿ ತೊಳೆದು ಕೊಂಡು ಆಹಾರವನ್ನು ಸೇವಿಸಬೇಕು.

ಎಲೆಸೊಪ್ಪು, ಕಾಯಿಗಡ್ಡೆಗಳನ್ನು ಶುಭ್ರವಾಗಿ ತೊಳೆದು ಬಳಸಬೇಕು. ಇಲ್ಲದಿದ್ದಲ್ಲಿ ಉಪ್ಪು ನೀರಿನಲ್ಲಿ ಅಥವಾ ಅರಿಶಿನ ನೀರಿನಲ್ಲಿ 2-3 ನಿಮಿಷಗಳ ಕಾಲ ಮುಳುಗಿಸಿ ನಂತರ ಮಾಮೂಲಿ ನೀರಿನಲ್ಲಿ ತೊಳೆದು ಬಳಸಿದರೆ ಒಳಿತು.

ತಾಜಾ ಇರುವ ಆಹಾರವನ್ನು ಸೇವಿಸ ಬೇಕು.

## ಎಚ್ಚರಿಕೆಗಳು



**ಮಳೆಗಾಲದಲ್ಲಿ ನೀರು ಕಲುಷಿತಗೊಳ್ಳುವ ಸಾಧ್ಯತೆಗಳು ಅಧಿಕವಾಗಿರುತ್ತದೆ. ಹಾಗಾಗಿ ಸ್ವಚ್ಛವಾದ ನೀರನ್ನು ಕುಡಿಯಿರಿ. ನೀರನ್ನು ಕಾಯಿಸಿ ಕುಡಿಯಿರಿ ಆಹಾರದಲ್ಲಿ ಹೆಚ್ಚಿನ ಪ್ರೋಟೀನ್‌ಗಳು ಫೈಬರ್ ಮತ್ತು ಪೌಷ್ಟಿಕಾಂಶಗಳು ಇರಬೇಕೆಂದರೆ ತಾಜಾತರಕಾರಿಗಳನ್ನೇ ತಿನ್ನಿರಿ. ತರಕಾರಿಗಳನ್ನು ಚೆನ್ನಾಗಿ ತೊಳೆದು ಉಪಯೋಗಿಸಿ. ಬೀದಿ ಬದಿಯ ಆಹಾರ ತಿನ್ನಬೇಡಿ ಹೊರಗಿನ ಆಹಾರಗಳನ್ನು ಸೇವಿಸುವುದರಿಂದ ಟೈಫಾಯಿಡ್‌ನಿಂದ ಕಾಲರಾದ ವರೆಗೆ ವಿವಿಧ ಸೋಂಕುಗಳು ಹರಡಬಹುದು. ಅತಿಯಾಗಿ ತಿನ್ನಬೇಡಿ ಮತ್ತು ಪ್ರತೀ ಕೆಲವು ಗಂಟೆಗಳಿಗೊಮ್ಮೆ ಸಣ್ಣ ಸಣ್ಣ ಪ್ರಮಾಣದಲ್ಲಿ ಆಹಾರವನ್ನು ಸೇವಿಸಿ.**





ಹಳಸಿದ ಆಹಾರ, ಕೊಳೆತ ಹಣ್ಣುಗಳನ್ನು ಸೇವಿಸಬಾರದು. ಕುದಿಸಿ ಆರಿಸಿದ ನೀರನ್ನು ಕುಡಿ ಯುವುದು ಉತ್ತಮ.

ಕೂಲರ್, ಹೂಕುಂಡಗಳಲ್ಲಿನ ನೀರನ್ನು ಆಗಾಗ ಬದಲಾಯಿಸುವುದು ಒಳಿತು. ಇವು ಗಳನ್ನು ವಾರಕ್ಕೊಮ್ಮೆಯಾದರೂ ಒಣಗಿಸು ವಂತೆ ಮಾಡಿದರೆ ಸೊಳ್ಳೆಯ ಮರಿಗಳು ನಾಶ ವಾಗುತ್ತವೆ.

ಹಳೆಯ ಟೈರು, ಬಟ್ಟಲು, ಚಿಪ್ಪುಗಳು, ಪಾತ್ರೆಗಳು ಇಂತಹವುಗಳಲ್ಲಿ ನೀರು ಶೇಖರ ಗೊಳ್ಳದೇ ಮತ್ತೆ ನಮ್ಮ ವಾಸ ಸ್ಥಳ ಗಳಲ್ಲಿ ನೀರು ಶೇಖರಗೊಳ್ಳ ದಂತೆ ನೋಡಿಕೊಳ್ಳಬೇಕು.

ನೀರಿನ ಚಿಕ್ಕ ಹೊಂಡ ಗಳು, ಗುಂಡಿಗಳಲ್ಲಿ ಫಿನಾಯಿಲ್ ಅಥವಾ ಕಿರೋಸಿನ್ ಚೆಲ್ಲುವುದು ಒಳ್ಳೆಯದು

ಸೊಳ್ಳೆಗಳು ಕಚ್ಚದಂತೆ ನಿಂಬೆರಸವನ್ನು ಸ್ವಲ್ಪ ನೀರಿನಲ್ಲಿ ಕಲಿಸಿ ಮೈಗೆ ಹಚ್ಚಿಕೊಳ್ಳಬೇಕು.

ಬೇವಿನ ಎಣ್ಣೆ, ನೀಲ ಗಿರಿ ಎಣ್ಣೆ, ತುಳಸಿ ರಸ ಅಥವಾ ಎಳ್ಳೆಣ್ಣೆಯಲ್ಲಿ ಸ್ವಲ್ಪ ಅಚ್ವಾನ ಕಲಿಸಿದ ಮಿಶ್ರಣವನ್ನು ಮೈಗೆ ಲೇಪಿಸಿಕೊಂಡರೆ ಸೊಳ್ಳೆಗಳು ಕಚ್ಚವು ಈ ಮಿಶ್ರಣವನ್ನು ಕಾಗದಕ್ಕೆ ಹಚ್ಚಿ ಕಿಟಕಿ, ಬಾಗಿಲುಗಳ ಚೌಕಟ್ಟಿಗೆ ನೇತಾಡುವಂತೆ ಮಾಡಿದರೆ ಸೊಳ್ಳೆಗಳು ಹೆಸರಿಲ್ಲದಂತೆ ಓಡಿ ಹೋಗುತ್ತದೆ.



# ಜುಲೈ ತಿಂಗಳ ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎಸ್.ಎಸ್



**ಮೇಷ**

ಮುಖದ ಮೇಲಿನ ವರ್ಚಸ್ಸು ವೃದ್ಧಿಯಾಗುತ್ತದೆ.ಸಂಬಂಧಿಕರ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ವೃತ್ತಿ ಉದ್ಯೋಗಗಳು ಅನುಕೂಲಕರ ವಾಗಿರುತ್ತವೆ. ಭೂ ಖರೀದಿ ಇಲ್ಲವೇ ಯಾವುದಾದರೂ ಉದ್ಯೋಗದಲ್ಲಿ ಸ್ಥಿರತೆ ಉದ್ಯೋಗದಲ್ಲಿ ವೇತನ ಬಡ್ತಿ.ಕುಟುಂಬದಲ್ಲಿ ಆರೋಗ್ಯ ಉತ್ತಮವಾಗಿರಲಿದೆ. ದೂರಪ್ರಯಾಣ ಕೂಡಿ ಬರುತ್ತದೆ.

**ವೃಷಭ**

ಕುಟುಂಬ ನಿರ್ವಹಣೆಗಾಗಿ ಅಧಿಕ ಖರ್ಚು ಮಾಡಬೇಕಾಗುವುದು ಸೋಮಾರಿತನದಿಂದ ಕಾರ್ಯ ಜಡತೆ, ಕೆಲಸದೊತ್ತಡ ಹೆಚ್ಚಾಗುವ ಅವಕಾಶವಿದೆ. ಸ್ನೇಹಿತರು ನಿಮ್ಮ ಮಾತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವರು. ಸಂತಾನ ವೃದ್ಧಿಯುಂಟಾಗಲಿದೆ.

**ಮಿಥುನ**

ವಸ್ತು ವಸ್ತ್ರಾಭರಣಗಳು, ವಾಹನ ಮತ್ತು ಆಸ್ತಿವೃದ್ಧಿಯಂತಹ ಅನೇಕ ಭೌತಿಕ ಸೌಕರ್ಯಗಳನ್ನು ಅನುಭವಿಸುವಿರಿ. ಪ್ರೇಮ ವಿಷಯಗಳು ಸಹಾ ನೆರವೇರುತ್ತವೆ. ಆದಾಯ ಕೂಡಾ ಹೆಚ್ಚಾಗುತ್ತದೆ ಮತ್ತು ವ್ಯಾಪಾರದಲ್ಲಿ ನಿರೀಕ್ಷಿಸಿದ ಲಾಭಗಳು ಹಾಗೂ ಸಮಾಜದಲ್ಲಿ ಅತಿ ವಿಶೇಷ ಖ್ಯಾತಿಗೆ ಪಾತ್ರ ರಾಗುವಿರಿ.

**ಕರ್ಕಾಟಕ**

ಹಿಂದೆ ಮಾಡಿದ ದುಂದು ವೆಚ್ಚಗಳನ್ನು ಕಡಿತಗೊಳಿಸುವಿರಿ. ಪದೋನ್ನತಿ ಇಲ್ಲವೇ ವೇತನಗಳು ಹೆಚ್ಚಾಗುವ ಅವಕಾಶಗಳು ಕೂಡಾ ಇರುತ್ತವೆ. ಈ ಸಮಯದಲ್ಲಿ ವ್ಯವಹಾರ ಲಾವಾದೇವಿಗಳು ಲಾಭದಾಯಕವಾಗಿರುತ್ತದೆ. ಒಟ್ಟಿನಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುತ್ತದೆ. ಆರೋಗ್ಯ ವಿಷಯದಲ್ಲಿ ಸಹಾ ಇದು ಒಳ್ಳೆಯ ಕಾಲ ದೂರ ಪ್ರಯಾಣಗಳು ಒದಗಿ ಬರುತ್ತದೆ.

**ಸಿಂಹ**

ಆರೋಗ್ಯ ವಿಷಯಗಳು ಹಿಂದಿಗಿಂತಲೂ ಅನುಕೂಲಕರವಾಗಿರುತ್ತವೆ. ಈ ಸಮಯದಲ್ಲಿ ಲಾವಾದೇವಿಗಳು ಲಾಭಕರವಾಗಿರುತ್ತದೆ. ಒಟ್ಟಿನಲ್ಲಿ ನಿಮ್ಮ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುತ್ತದೆ. ಆರೋಗ್ಯದ ವಿಷಯಕ್ಕೂ ಇದು ಸುಕಾಲ ಈ ಕಾಲದಲ್ಲಿ ಪ್ರಯಾಣಗಳು ಫಲಿಸುತ್ತವೆ. ಮಾಸಾಂತ್ಯದಲ್ಲಿ ಅಧಿಕ ಖರ್ಚು ಗಳನ್ನು ಮಾಡಿವಿರಿ.

**ಕನ್ಯ**

ನಿಮಗೆ ಸೋದರ ಬಲವಿರುತ್ತದೆ. ಸ್ನೇಹಿತರ ಮೆಚ್ಚುಗೆ ಹೊಗಳಿಕೆಗಳು ನಿಮ್ಮ ಸಂಕಲ್ಪಕ್ಕೆ ಪುಷ್ಟಿ ಕೊಡುತ್ತವೆ. ನಿಮ್ಮ ಸೋದರರು ಹಾಗೂ ಸ್ನೇಹಿತರು ಪ್ರತ್ಯೇಕವಾಗಿ ನಿಮ್ಮ ಬಲಕ್ಕೆ ಮೂಲ ಸ್ತಂಭವಾಗಲಿದ್ದಾರೆ. ಅನೇಕ ಮಾರ್ಗಗಳಿಂದ ಆದಾಯವನ್ನು ಗಳಿಸಲಿದ್ದೀರಿ. ರಾಜಕೀಯದಿಂದ ಕರೆ ಬರಲಿದೆ.

**ತುಲಾ**

ಸಂಪತ್ತನ್ನು ವೃದ್ಧಿಗೊಳಿಸಲಿದ್ದೀರಿ. ಕೀರ್ತಿ ಹೆಚ್ಚಾಗಲಿದೆ. ಸ್ನೇಹಿತರಿಂದ ಪರಿಹಾರ ಹಾಗೂ ಪ್ರಯತ್ನಗಳಿಂದ ವಿಜಯವನ್ನು ಸಾಧಿಸುವಿರಿ. ಆರ್ಥಿಕ ಸಮಸ್ಯೆಯಿಂದಲೂ ಸಹಾ ಹೊರಬರಲಿದ್ದೀರಿ. ಸಾಮಾಜಿಕ ಜೀವನ ಸುಖಕರವಾಗಲಿದೆ. ಗೃಹ ವಾತಾವರಣ ಅನುಕೂಲಕರವಾಗಿರುತ್ತದೆ. ಸುಬ್ರಮಣ್ಯ ಆರಾಧನೆ ಉಪಯುಕ್ತವಾಗಲಿದೆ.

**ವೃಶ್ಚಿಕ**

ವಾಹನ ಸಂಪದ ಮತ್ತು ವಿಲಾಸಿ ಜೀವನದಂತಹ ಸಾಧಾರಣ ಕಾರ್ಯಗಳಿಂದ ನಿಮ್ಮ ಜೀವನ ಶೈಲಿ ಸಂಪನ್ನಕರವಾಗಲಿದೆ. ನಿಮ್ಮ ಪ್ರಯತ್ನಕ್ಕನುಗುಣವಾಗಿ ಆದಾಯವು ಸಹಾ ಸಾಕಷ್ಟಿರುತ್ತದೆ. ಆರೋಗ್ಯ ಸಮಸ್ಯೆಗಳನ್ನು, ಅನುಭವಿಸುತ್ತೀರಿ.

**ಧನಸ್ಸು**

ವ್ಯಾಪಾರ ವಹಿವಾಟುಗಳನ್ನು ಕಾರ್ಯಗತಕ್ಕೆ ತರಲು ಸಕಾಲ ವ್ಯಾಪಾರಕ್ಕೆ ಸಂಬಂಧಿಸಿದ ಮಾರ್ಪಾಟುಗಳು ಒಳ್ಳೆಯ ಫಲಿತಾಂಶ ಗಳನ್ನು ತರಲಿವೆ. ಪ್ರಸ್ತುತ ಆರೋಗ್ಯದ ಮೇಲೆ ಶ್ರದ್ಧೆ ವಹಿಸತಕ್ಕದ್ದು. ಮಕ್ಕಳ ಓದಿನಲ್ಲಿ ಮುನ್ನಡೆ , ವಾಹನ ಖರೀದಿ ವಿಲಾಸ ಜೀವನದಿಂದ ಸರಿ ದೂಗುವಿರಿ.

**ಮಕರ**

ಎದೆ ಹಾಗೂ ಹೊಟ್ಟೆಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಯ ಕುರಿತು ವೈದ್ಯರನ್ನು ಭೇಟಿಮಾಡುವ ಸಂದರ್ಭವಿರುತ್ತದೆ. ನೀವು ನಿಮ್ಮ ಜೀವನ ಸಂಗಾತಿ ಮತ್ತು ಮಕ್ಕಳೊಂದಿಗೂ ಸಹಾ ಸಮಸ್ಯೆಗಳನ್ನು ಎದುರಿಸಬೇಕಾಗುವುದು. ವೃತ್ತಿ ವ್ಯಾಪಾರಗಳಲ್ಲಿ ಅಧಿಕಾರಿಗಳಿಂದ ಒತ್ತಡವನ್ನು ಅನುಭವಿಸುತ್ತೀರಿ.

**ಕುಂಭ**

ಜ್ಞಾಪಶಕ್ತಿ ಹಾಗೂ ಛಲದಿಂದ ವಿದ್ಯಾರ್ಥಿಗಳು ಓದಿನಲ್ಲಿ ಮೆರೆಯಲ್ಲಿದ್ದಾರೆ. ಪ್ರತಿಭಾ ಪೈ ಪೋಟಿಗಳಲ್ಲಿ ಸಕ್ರಿಯವಾಗಿ ಹೊರ ಬರಲಿದ್ದೀರಿ. ಹೆಚ್ಚಿನ ಓದಿಗಾಗಿ ಇತರ ದೇಶಗಳಿಂದ ಕರೆ ಬರಲಿದೆ. ದೂರ ಪ್ರಯಾಣಗಳು ಒದಗಿ ಬರುತ್ತವೆ. ಗೃಹ ವಾತಾವರಣ ಅನುಕೂಲವಾಗಿರುತ್ತದೆ.

**ಮೀನ**

ವಿದ್ಯಾರ್ಥಿಗಳು ಓದಿನಲ್ಲಿ ಮಿಂಚಲಿದ್ದಾರೆ. ಪ್ರತಿಭೆಯನ್ನು ಪ್ರದರ್ಶಿಸಿ ವಿಜಯಿಸುತ್ತಾರೆ. ಸೋಮಾರಿತನವನ್ನು ಬಿಟ್ಟು ಸ್ವಪ್ರಯತ್ನದಿಂದ ಜ್ಞಾನ ಸಂಗ್ರಹಣೆ ಮಾಡುತ್ತಾರೆ. ತಂದೆ ತಾಯಿಯರ ಮೆಚ್ಚುಗೆ ಒದಗಿ ಬರಲಿದೆ. ಕುಟುಂಬದಲ್ಲಿ ಆನಂದ ಸಂತೃಪ್ತಿ ಕೂಡಿ ಬರಲಿದೆ. ವಿದೇಶ ಪ್ರಯಾಣಗಳು ಕೂಡಿ ಬರುತ್ತದೆ.

# ಸಂಸ್ಕೃತ ಕಲಿಯೋಣ...!!

## ಪಾಠ : 27

**सप्त विंशः पाठः**

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

तक्रम् = ಮಜ್ಜಿಗೆ
क्षीरम् = ಹಾಲು
पानीयम् = ಒಳ್ಳೆಯನೀರು
गन्तुम् = ಹೋಗಲು
नेतुम् = ತೆಗೆದು ಕೊಂಡು ಹೋಗಲು
आनीय = ತಂದು
वदति = ಹೇಳುತ್ತಿದ್ದಾನೆ
आह्वयति = ಕರೆಯುತ್ತಿದ್ದಾನೆ
आह्वास्यति = ಕರೆಯುತ್ತಾನೆ

### ಪ್ರಶ್ನೆ

1. अद्य क्षीरं सम्यगस्ति।
2. त्वं गत्वा क्षीरमानीय क्षीरान्नं कुरु।
3. वयं सर्वे पानीयमानेष्यामः।
4. तक्रमानेतुं कः अगच्छत्?
5. ते बालकाः घृतार्थमागच्छन्।
6. गृहे किञ्चिदपि लवणं नास्ति।
7. यूयं मम जनकम् आनयथ।
8. युष्मत्कूपे जलं लवणम् अस्ति।
9. त्वं स्नानं कृत्वा शीघ्रमागच्छ।
10. यूयं ममानुजं झटिति भोजनार्थं वदता. वयं गत्वा तथैव वदिष्यामः।

### ಉತ್ತರ

1. ಇವತ್ತು ಹಾಲು ಚೆನ್ನಾಗಿವೆ.
2. ನೀನು ಹೋಗಿ ಹಾಲನ್ನು ತೆಗೆದುಕೊಂಡು ಪರಮಾನ್ನವನ್ನು ಮಾಡು.
3. ನಾವೆಲ್ಲರೂ ಒಳ್ಳೆಯ ನೀರನ್ನು ತರೋಣ.
4. ಮಜ್ಜಿಗೆ ತರಲು ಯಾರು ಹೋದನು?
5. ಆ ಬಾಲಕರು ತುಪ್ಪಕ್ಕೋಸ್ಕರ ಬಂದಿದ್ದಾರೆ.
6. ಮನೆಯಲ್ಲಿ ಸ್ವಲ್ಪವೂ ಉಪ್ಪಿಲ್ಲ.
7. ನೀವು ನಮ್ಮ ತಂದೆಯನ್ನು ಕರೆದುಕೊಂಡು ಬನ್ನಿರಿ.
8. ನಿಮ್ಮ ಭಾವಿಯಲ್ಲಿ ನೀರಿ ಉಪ್ಪಾಗಿ ಇದೆ.
9. ನೀನು ಸ್ನಾನ ಮಾಡಿ ಬೇಗನೇ ಬಾ.
10. ನೀವು ನನ್ನ ತಮ್ಮನಿಗೆ ಬೇಗನೇ ಊಟಕ್ಕೆ ಬರಲು ಹೇಳಿ. ನಾವು ಹೋಗಿ ಹಾಗೆಯೇ ಹೇಳುತ್ತೇನೆ.


### ಪ್ರಶ್ನೆ

1. ಅವನಲ್ಲಿದ್ದಲ್ಲಿ ಕರೆಯಿರಿ.
2. ನಮ್ಮ ತಂದೆ ಎಲ್ಲಿ ಇದ್ದಾನೋ ಸ್ವಲ್ಪ ಹೇಳಿರಿ.
3. ನಮ್ಮ ಮನೆಯಲ್ಲಿ ಮಜ್ಜಿಗೆ ತರಲು ಯಾರು ಹೋದರು?
4. ನಮ್ಮಿಂದಲ್ಲೇ ಹೋಗಲ್ಪಡಬೇಕು
5. ನೀವು ಅಲ್ಲಿಯವರೆಗೆ ಎಲ್ಲಿಗೆ ಹೋಗಬೇಡಿ.
6. ನಾವೆಲ್ಲಿಗೂ ಹೋಗಲ್ಲ.
7. ಇಲ್ಲಿಯೇ ಇದ್ದೇವೆ ತಾನೆ.
8. ಅಲ್ಲಿ ಭಾವಿ ಇದೆ. ಮೆಲ್ಲನೆ ಹೋಗಿ.
9. ಹುಡುಗರನ್ನು ಅನ್ನ ತಿನ್ನುವುದಕ್ಕೆ ಕರೆ.
10. ಇಲ್ಲಿ ಬಾಲಕರು ಇಲ್ಲ. ಅವರೆಲ್ಲಿರುವರೋ ನೀನೇ ಹೋಗಿ ಕರೆದುಕೊಂಡು ಬಾ.

### ಉತ್ತರ

1. सः तत्र भवति चेत् आह्वयतु।
2. मम पिता कुत्र अस्ति इति किञ्चित् वदत।
3. अस्माकं गृहे तक्रम् आनेतुं के अगच्छन्?
4. अस्मभिरेव गन्तव्यम्।
5. यूयं तावत् पर्यन्तं कुत्रापि मा गच्छतु।
6. वयं कुत्रापि न गच्छामः।
7. अत्रैव स्मः खलु।
8. तत्र कूपः अस्ति शनैः गच्छत।
9. बालकान् अन्नं खादितुम् आह्वय।
10. अत्र बालकाः न सन्ति। ते कुत्र सन्ति वा त्वमेव गत्वा आनय।

# ಶ್ರೀವೆಂಕಟಾಚಲ ಮಹಾತ್ಮ್ಯ





ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್,
ಅನುವಾದ – ಶ್ರೀಮತಿ. ಎನ್. ಪಾರ್ವತಿ

### ಕಳೆದ ಸಂಚಿಕೆಯಿಂದ

ಚತುರ್ಭಜನೇ! ಕೈಲಾಸ ವಾಸನೇ! ಹಿರಣ್ಯಾಕ್ಷ ಸಂಹಾರ ಕ್ಕಾಗಿ ನಾನು ವರಾಹ ರೂಪವನ್ನು ಎತ್ತಬೇಕಾಯಿತು. ಹೀಗಾಗಿ ಕಂಟಕನು ನಾಶವಾದನು. ಇದರಿಂದ ಮನುಷ್ಯರು ಭೂಲೋಕದಲ್ಲಿ ನೆಮ್ಮದಿಯಿಂದ ಇರಲು ಅನುಕೂಲವಾಯಿತು. ಹಿರಣ್ಯಾಕ್ಷ ಸಂಹಾರದ ಮುಂಚೆ ನೀವು ಹೇಗಿದ್ದಿರೋ ಹಾಗೆಯೇ ನಿಮ್ಮ ನಿಮ್ಮ ಲೋಕಗಳಲ್ಲಿ ನೆಲೆಸಿರಿ. ನಾನು ಭೂದೇವಿ ಶ್ರೀದೇವಿಯವರೊಂದಿಗೆ ನಿಮ್ಮ


ಶ್ರೀಲಕ್ಷ್ಮೀ ನನ್ನ ವಕ್ಷಃ ಸ್ಥಳ ನಿವಾಸಿಯಾಗಿ ಇರುತ್ತಾಳೆ. ಅದ ಲ್ಲದೇ ಭಯಂಕರವಾದ ರೂಪದಿಂದ ರಮ್ಯಾಕಾರದಿಂದ ಭೂಲೋಕ ನಿವಾಸಿಗಳನ್ನು ಅನುಗ್ರಹಿಸುತ್ತೇನೆ. ನನ್ನ ಭಕ್ತರಲ್ಲಿ ಯಾರ್ಯಾರು ಏನೇನು ಕೋರಿಕೆಗಳನ್ನು ಕೋರುತ್ತಾರೋ ಎಲ್ಲವನ್ನೂ ಅನುಗ್ರಹಿಸುತ್ತಾ ಅವರನ್ನು ಸಂತೃಪ್ತಿಗೊಳಿಸುತ್ತೇನೆ. ಅದಲ್ಲದೇ ನನಗೆ ಶರಣು ಹೋಗುವ ಭಕ್ತರಿಗೆ ಭವದುಃಖಗಳು ಇಲ್ಲದಂತೆ ಮಾಡುತ್ತೇನೆಂದು ಭರವಸೆ ನೀಡಿದನು. ಆನಂತರ ವರಾಹದೇವರು ದರ್ಶನೀಯ ರೂಪವನ್ನು ತಾಳಿದನು. ಶಾಂತ ಚಿತ್ತನಾಗಿ ದೇವತೆಗಳನ್ನು ಕರುಣಾ ಸೃಷ್ಟಿಯಿಂದ ನೋಡಿದನು.

ಹರಿಯು ತನ್ನ ನಿವಾಸವನ್ನು ತನಗೆ ಅನುಕೂಲವಾದ ರೀತಿಯಲ್ಲಿ ಮಾರ್ಪಾಟು ಮಾಡಿಕೊಂಡನು.ಪುಷ್ಕರಣಿ ತೀರ್ಥ ವನ್ನು ಒಂದು ಕಡೆ, ಭವ್ಯ ಪುಷ್ಕರಣಿಯನ್ನು ಇನ್ನೊಂದೆಡೆ, ವಾಯುವ್ಯ ದಲ್ಲಿ ಚಿತ್ರವಿಚಿತ್ರವಾದ ಭವನಗಳನ್ನು, ಹಾಗೆಯೇ ದರ್ಶನೀಯವಾದ ಮಂಟಪಗಳು, ಸಾವಿರ ಸೂರ್ಯರ ಕಾಂತಿಯಿಂದ ಹೊಳೆಯುವ ಗೋಪುರಗಳು, ಪ್ರಕಾರಗಳಿಂದ ಕೂಡಿದ "ಮಾಯಾನಿಗೂಢ" ವಿಮಾನವನ್ನು ಹೊಂದಿದನು. ಕ್ಷಣ ಮಾತ್ರದಲ್ಲಿ ಪ್ರಕಾಶಿತವಾದ ಭವನಾದಿಗಳನ್ನು ನೋಡಿ ದೇವತೆಗಳು ಆಶ್ಚರ್ಯಪರವಶರಾಗುತ್ತಿದ್ದಂತೆ ವರಾಹ ದೇವರು ದೇವಿಯವರೊಂದಿಗೆ ಅಂತರ್ಧಾನನಾದನು.

ದೇವತೆಗಳೆಲ್ಲರೂ ನಿರ್ಗಮಿಸಿದ ನಂತರ ಶ್ರೀ ಭೂ ನೀಳಾದೇವಿಯರು ವರಾಹಸ್ವಾಮಿಗೆ ನಮಸ್ಕರಿಸಿದರು. ಆಗ ಹರಿಯು "ಆದಿಲಕ್ಷ್ಮಿ! ನನ್ನ ಘೋರ ಆಕಾರವನ್ನು ನೋಡಿ ಭಯಪ ಡುತ್ತೀ ಎಂದುಕೊಂಡಿದ್ದೆ. ಆದರೆ ನನ್ನ ಇಂಗಿತವನ್ನು ಅರಿತು ನೀಳಾ ದೇವಿಯೊಂದಿಗೆ ನನ್ನ ಬಳಿ ಬಂದಿರುವೆ. ಅದಲ್ಲದೇ, ಇಡೀ ಪರಿವಾರವೇ ಬಂದುದರಿಂದ ನನಗೆ ತುಂಬಾ ಆನಂದವಾಗಿದೆ." ಎಂದನು. "ಸ್ವಾಮೀ! ನೀವೇಕೆ ಹಾಗೆ ಭಾವಿಸಿದಿರಿ? ನಿಮ್ಮನ್ನು ಅಗಲಿ ನಾನು ಒಂದು ನಿಮಿಷ ವಾದರೂ ಇರಬಲ್ಲೆನೇ? ನಾನು ತಿಳಿಯದೇ ಏನಾದರೂ ತಪ್ಪು ಮಾಡಿ ದ್ದರೆ ಕ್ಷಮಿಸಿ, ಎಲ್ಲರನ್ನೂ ದಯಾದೃಷ್ಟಿಯಿಂದ ನೋಡಿ" ಎಂದು ಕೈಯೆತ್ತಿ ಲಕ್ಷ್ಮಿಯು ನಮಸ್ಕರಿಸಿದಳು. ಭೂಮಿಯನ್ನೆಲ್ಲಾ ಜಾಲಾಡಿದಾಗ ಈ ಸ್ಥಳ ಒಂದೇ ನನ್ನ ನಿವಾಸಕ್ಕೆ ಯೋಗ್ಯವಾಗಿತ್ತು. ಈ ಸ್ಥಳವು ನನಗೆ ಪರಮ ತೃಪ್ತಿಯನ್ನು ನೀಡಿದೆ. ಆದಿಲಕ್ಷ್ಮೀ ! ಇದೇ ನಮಗೆ ವೈಕುಂಠ" ಎಂದನು ಹರಿ. "ನೀವು ಸರ್ವಜ್ಞರು. ನೀವಿರುವ ಸ್ಥಳವೇ ನನ್ನ ಸ್ಥಳ. ಈ ಪ್ರದೇಶವು ನಿಜವಾಗಲು ರಮಣೀಯವಾಗಿದೆ. ಕಾಮನೀಯವೂ ಆಗಿದೆ. ಹಣ್ಣು ಗಳನ್ನು ನೀಡುವ ಗಿಡಗಳು, ವಿಧ ವಿಧವಾದ ಹೂಗಳ ತೋಟ, ಪುಣ್ಯ ತೀರ್ಥಗಳು ಮುನಿ ಆಶ್ರಮಗಳು ಎತ್ತರವಾದ ಪರ್ವತ ಶಿಖರ ಗಳು, ಮೋಕ್ಷ ಸ್ಥಳಗಳಂತೆ ಕಾಣಿಸುವ ಈ ಪ್ರದೇಶವೆಲ್ಲಾ ನನಗೆ ತುಂಬಾ ಇಷ್ಟವಾಗಿದೆ." ಎನ್ನುತ್ತಿದ್ದಂತೆ ವರಾಹ ದೇವರು ಆದಿಲಕ್ಷ್ಮಿಯನ್ನು ವಕ್ಷ ಸ್ಥಳದಲ್ಲಿ ಇರಿಸಿಕೊಂಡು ದೇವಿಯರನ್ನು ಆದರಿಸುತ್ತಾ ಗರುಡನಂತೆ ವಿಶ್ವಕ್ಸೇನಾದಿಯರು ಸೇವೆಯಲ್ಲಿ ತೊಡಗಿದರು ಎಂದು ಸೂತನು ಶ್ವೇತ ವರಾಹ ವೃತ್ತಾಂತವನ್ನು ಹೇಳಲಾಗಿ ಮುನಿಗಳು "ಪುರಾಣವೇದ್ಯರೇ, ನಮ್ಮ ಕೋರಿಕೆಯನ್ನು ಮನ್ನಿಸಿದ್ದೀರಿ. ನೀವು ಸ್ವಾಮಿಯ ಪುಷ್ಕರಣಿಯ ಕುರಿತು ಪದೇ ಪದೇ ಪ್ರಸ್ತಾಪಿಸಿದ್ದೀರಿ. ಆ ಹೆಸರೇ ವಿಚಿತ್ರವಾಗಿದೆ. ಆ ಪುಷ್ಕರಣಿ ವಿಶೇಷಗಳನ್ನು ಆಲಿಸಬೇಕೆಂಬ ಕುತೂಹಲ ಉಂಟಾಗಿದೆ, ದಯವಿಟ್ಟು ತಿಳಿಸಿ" ಎಂದು ಮುನಿಗಳು ಕೋರಿದರು.

ತಪ್ಪದೇ ಹೇಳುತ್ತೇನೆಂದು ಸೂತನು ಹೇಳಿದನು.

(ಮುಂದುವರೆಯುತ್ತದೆ)



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಬ್ರಹ್ಮಶ್ರೀ ಎಸ್. ಷಣ್ಮುಖ ಶರ್ಮ

**1) ಸಮುದ್ರಸ್ನಾನದ ನಿಯಮಗಳೇನು?**

**ಉತ್ತರ:** ಸಮುದ್ರವನ್ನು ಯಾವ ಸಮಯದಲ್ಲಿ ಅಂದರೆ ಆ ಸಮಯದಲ್ಲಿ ಸಮುದ್ರವನ್ನು ಮುಟ್ಟಬಾರದು. ಮನರಂಜನೆಗಾಗಿ ಸಮುದ್ರದೊಂದಿಗೆ ಆಟವಾಡುವುದು ಸೂಕ್ತವಲ್ಲ. ಮಂಗಳವಾರ ಮತ್ತು ಶುಕ್ರವಾರ ಸಮುದ್ರ ಸ್ನಾನ ಮಾಡಬಾರದು. ಪರ್ವದಿನಗಳಲ್ಲಿ ಮಾತ್ರವೇ ಸಮುದ್ರಸ್ನಾನ ಒಳ್ಳೆಯದು. ವೈಶಾಖ, ಆಷಾಢ, ಕಾರ್ತಿಕ ಮತ್ತು ಮಾಘ ಮಾಸಗಳಲ್ಲಿ ಸಮುದ್ರ ಸ್ನಾನ ಒಳ್ಳೆಯದು. ಸಮುದ್ರ ಸ್ನಾನಕ್ಕೆ ಹೋಗುವ ಮೊದಲು ತಣ್ಣೀರು ಸ್ನಾನ ಮಾಡಬೇಕು. ಸಮುದ್ರ ಸ್ನಾನಾ ನಂತರ ಮತ್ತೆ ತಣ್ಣೀರು ಸ್ನಾನ ಮಾಡಬೇಕು. ಹದಿನೈದು ನಿಮಿಷಗಳ ಕಾಲ ಸಮುದ್ರದಲ್ಲಿ ಸ್ನಾನ ಮಾಡಬಾರದು.ಮೊದಲು ಸಮುದ್ರಕ್ಕೆ ನಮಸ್ಕರಿಸಿ, ಸಂಕಲ್ಪ ಮಾಡಿ ಕೊಂಡು,ಹೊರಗಿನ ಮಣ್ಣನ್ನು ಒಳಗೆ ಹಾಕಿ ನಂತರ ಸ್ನಾನ ಮಾಡ ಬೇಕು. ಸ್ನಾನ ಮಾಡುವಾಗ ಮೌನವನ್ನು ಆಚರಿಸಬೇಕು. ದೈವ ನಾಮಸ್ಮರಣೆ ಮಾಡಬೇಕು.

**2.ಜನ್ಮ ನಕ್ಷತ್ರದಲ್ಲಿ ಏನೂ ಮಾಡಬೇಕು? ಏನು ಮಾಡಬಾರದು?**

**ಉತ್ತರ :** ಜನ್ಮನಕ್ಷತ್ರದಲ್ಲಿ ಯಾಗ, ಚೌಲಕರ್ಮ, ಅನ್ನಪ್ರಾಶನ, ವ್ಯವ ಸಾಯ, ಉಪನಯನ, ಭೂಸ್ವಾಧೀನ ಮತ್ತು ಅಕ್ಷರಾಭ್ಯಾಸ ಮಾಡ ಬಹುದು.ಮಂಗಳಕರ, ಸೀಮಂತ, ಗರ್ಭದಾನ, ಕ್ಷೌರಕರ್ಮ, ಔಷಧ ಸೇವಾರಂಭ, ಪ್ರಯಾಣ ಮಾಡಬಾರದು, ಅಶುಭಕರ. ಸ್ತ್ರೀಯರಿಗೆ ಜನ್ಮ ನಕ್ಷತ್ರದಲ್ಲಿ ವಿವಾಹ ಮಾಡುವುದು ಒಳ್ಳೆಯದು. ಜನ್ಮನಕ್ಷತ್ರದಲ್ಲಿ ಪುರು ಷರಿಗೆ ಮದುವೆ ಸೂಕ್ತವಲ್ಲ.

**3. ದುಃಸ್ವಪ್ನಗಳು ಬರದಂತೆ, ಅದರ ಪ್ರಭಾವವನ್ನು ತೊಡೆದು ಹಾಕಲು ಏನು ಮಾಡಬೇಕು?**

**ಉತ್ತರ :** ಗೋವಿಂದ ನಾಮಸ್ಮರಣೆ ಮಾಡಿ ಮಲಗಿದರೆ ದುಃಸ್ವಪ್ನ ಬರುವುದಿಲ್ಲ. ಬಂದರೂ ಅದು ಪರಿಣಾಮ ಬೀರುವುದಿಲ್ಲ. ಗಜೇಂದ್ರ ಮೋಕ್ಷ ಮತ್ತು ತ್ರಿಮೂರ್ತಿಗಳನ್ನು ಸ್ಮರಿಸಿ ನಿದ್ರಿಸುವುದು, ನಂತರ ಏಳುತ್ತಲೇ ದೇವರ ನಾಮಸ್ಮರಣೆ ಮಾಡಿದರೆ ದುಃಸ್ವಪ್ನದಲ್ಲಿ ಪ್ರಭಾವ ಇರುವುದಿಲ್ಲ. ನಾರಾ ಯಣನು ದುಃಸ್ವಪ್ನ ವಿನಾಶಕನು.

**4. ಉತ್ತರ ದಿಕ್ಕಿಗೆ ತಲೆಯಿಟ್ಟು ಮಲಗಬಾರದೆನ್ನುತ್ತಾರೆ ಇದು ಸರಿಯೇ? ನಿದ್ರೆಗೂ ನಿಯಮಗಳಿವೆಯೇ?**

**ಉತ್ತರ:** ಉತ್ತರಕ್ಕೆ ತಲೆ ಇಟ್ಟು ಮಲಗಬಾರದು, ಸ್ವಗೃಹದಲ್ಲಿ ಪೂರ್ವಕ್ಕೆ, ಮಾವನವರ ಗೃಹದಲ್ಲಿ ದಕ್ಷಿಣಕ್ಕೆ,ಪ್ರವಾಸದಲ್ಲಿ ಪಶ್ಚಿಮಕ್ಕೆ ತಲೆಯಿಟ್ಟು ಮಲಗಬೇಕು.ಒದ್ದೆ ಬಟ್ಟೆಯಲ್ಲಿ ಮಲಗಬಾರದು, ನಿಮ್ಮ ಕಾಲುಗಳನ್ನು ತೊಳೆದು ಕೊಂಡರೆ ಅವುಗಳನ್ನು ಒಣಗಿಸಿಕೊಂಡು ಮಲಗಬೇಕು. ಒದ್ದೆ ಯಾದ ಪಾದಗಳೊಂದಿಗೆ ಮಲಗಬಾರದು.ಮೋದುಗ,ನೇರುಳೆ, ಜುವ್ವಿ, ಆಲದಮರ, ಅಶ್ವತ್ಥ ಮರದ ಕೊಂಬೆಗಳಿಂದ ತಯಾರಿಸಿದ ಮಂಚದ ಮೇಲೆ ನಿದ್ರಿಸಬಾರದು. ಶತ್ರುಗಳ ಮಧ್ಯದಲ್ಲಿ, ನೀರಿನ ಮಧ್ಯದಲ್ಲಿ,ಧಾನ್ಯದ ಮಧ್ಯದಲ್ಲಿ ಮಲಗಬಾರದು, ಗೋವುಗಳು, ವಿಗ್ರಹಗಳು ಮತ್ತು ಗುರುಗಳಿಗೆ ಎತ್ತರದ ಸ್ಥಳದಲ್ಲಿ ಮಲಗಬಾರದು. ಯಾವುದೇ ವಸ್ತುವನ್ನು ಬಾಯಿಯಲ್ಲಿ ಇಟ್ಟುಕೊಂಡು ಮಲಗಬಾರದು.

**5. ಹೊಸ ತುಳಸಿ ಗಿಡವನ್ನು ನೆಡಲು ಅಥವಾ ಬದಲಾಯಿಸಲು ಒಳ್ಳೆಯ ದಿನಗಳನ್ನು ನೋಡಬೇಕಾ?**

**ಉತ್ತರ:** ಶಾಸ್ತ್ರದ ಪ್ರಕಾರ ಆಷಾಢ ಶುದ್ಧ ಏಕಾದಶಿಯಿಂದ ಕಾರ್ತಿಕ ಶುದ್ಧ ಏಕಾದಶಿಯವರೆಗೆ ಚಾತುರ್ಮಾಸ್ಯ ಎನ್ನುತ್ತಾರೆ. ಆ ದಿನಗಳಲ್ಲಿ ಹೊಸ ತುಳಸಿ ಗಿಡವನ್ನು ಬದಲಾಯಿಸಬಾರದು. ಏಕಾದಶಿ, ದ್ವಾದಶಿ, ಅಮಾವಾಸ್ಯೆ ಮತ್ತು ಶುಕ್ರವಾರದಂದು ತುಳಸಿಯನ್ನು ಕೀಳಬಾರದು.

**6. ಮಕ್ಕಳಿಗೆ ಹೆಸರಿಡಲು ಯಾವುದೇ ಶಾಸ್ತ್ರ ನಿಯಮಗಳಿವೆಯೇ? ಇಷ್ಟವಾದ ಹೆಸರನ್ನು ಇಡಬಹುದೇ?**

**ಉತ್ತರ:** ಇದು ಅವರವರ ಅಭಿಪ್ರಾಯವನ್ನು ಅವಲಂಭಿಸಿರುತ್ತದೆ. ಆದರೆ ಶಾಸ್ತ್ರದ ಬಗ್ಗೆ ಗೌರವ ಇರುವವರು ಕೆಲವು ನಿಯಮಗಳನ್ನು ಪಾಲಿಸುತ್ತಾರೆ. ಕೆಲವರು ನಕ್ಷತ್ರ ರಿತ್ಯಾ ನಾಮಕಾರಣ ಮಾಡುತ್ತಾರೆ. ಆದರೆ ಸಾಂಪ್ರದಾಯ ನಿಯಮಗಳ ಪ್ರಕಾರ –

1. ಗಂಡು ಮಕ್ಕಳ ಹೆಸರಿನಲ್ಲಿರುವ ಅಕ್ಷರಗಳು ಸಮಸಂಖ್ಯೆಯಲ್ಲಿಯೂ, ಹೆಣ್ಣು ಮಕ್ಕಳ ಹೆಸರಿನಲ್ಲಿರುವ ಅಕ್ಷರಗಳು ಬೆಸ ಸಂಖ್ಯೆಯಲ್ಲಿಯೂ, ಇರಬೇಕು.

2.ಮಹರ್ಷಿಗಳ ಹೆಸರು, ದೇವತೆಗಳ ಹೆಸರು, ಅವರ ವಂಶದ ಪೂರ್ವಜರಲ್ಲಿ ಮಹಾತ್ಮರ ಹೆಸರನ್ನು ಇಟ್ಟರೆ, ಅವರು ಶೀಘ್ರವಾಗಿ ಸತ್ಕೀರ್ತಿ, ಪ್ರಖ್ಯಾತಿ ಮತ್ತು ದೀರ್ಘಾಯುಷ್ಯರಾಗುತ್ತಾರೆ.

3. ಕಠಿಣವಾದ , ಹೆಚ್ಚು ದ್ವಿತೀಯಾ ಉಚ್ಚಾರದ ಹೆಸರುಗಳನ್ನು ಇಡಬಾರದು.

4.ನದಿಗಳ ಹೆಸರು, ಮರಗಳ ಹೆಸರು ಮತ್ತು ಕಾಡಿನ ಹೆಸರುಗಳನ್ನು ಇಟ್ಟುಕೊಂಡರೆ ಒಳ್ಳೆಯದು.



ನೀತಿಕಥೆ

# ಪ್ರಾರ್ಥನೆ ನಮಗೆ ಪ್ರೇರಣೆ ಕೊಡಲಿ...

ಎ.ಆರ್. ರಘುರಾಮ
99161 38436

ಮಕ್ಕಳಿಗೆ ಸದಾ ಆಟ ಆಡುವುದು, ರುಚಿರುಚಿಯಾದ ತಿನಿಸುಗಳನ್ನು ಸವಿಯುವುದರಲ್ಲೇ ಆಸೆ. ಹಿರಿಯರು ಇರಲಿ, ಭಗವಂತ ಪ್ರತ್ಯಕ್ಷನಾಗಿ ಕೇಳಿದರೂ ಅವರು ಬೇಡುವುದು ಇವೆರಡನ್ನೇ.ಎಡಬಿಡದ ಮಳೆ. ರೈತನೊಬ್ಬ ಹೊಲದ ಬದುವಿನ ಮೇಲೆ ನಿಂತುಕೊಂಡು, ಆಕಾಶದ ಕಡೆಗೆ ನೋಡುತ್ತಿದ್ದಾನೆ. ಅತಿ ಮಳೆಯಿಂದ ಪೈರು ಹಾಳಾಗುತ್ತಿರುವುದನ್ನು ಕಂಡು ಮಮ್ಮಲ ಮರುಗುತ್ತಾನೆ. 'ಭಗವಂತಾ, ಒಂದಿಷ್ಟು ಮಳೆ ನಿಲ್ಲಿಸಿ ಬದುಕುವ ಹಾಗೆ ಮಾಡು ಎಂದು ಕೈಜೋಡಿಸಿ ಮೊರೆಯಿಡುತ್ತಿದ್ದಾನೆ.

ಯೋಗಿಯೊಬ್ಬ ಪರ್ವತದ ಪ್ರಶಾಂತ ಗುಹೆಯೊಂದರಲ್ಲಿ ಕುಳಿತು ಕೆಳಗಿನ ಜಗತ್ತಿನ ಚಟುವಟಿಕೆಗಳನ್ನು ಗಮನಿಸುತ್ತಿದ್ದಾನೆ. ಅಲ್ಲಿ ಸುಖ - ದುಃಖ, ಆಶೆ - ನಿರಾಶೆ, ಸ್ನೇಹ - ವೈರ, ಪ್ರೀತಿ - ಹಿಂಸೆ ಎಲ್ಲವೂ ಇದೆ. ಲೋಕ ಜೀವನ ಈ ದ್ವಂದ್ವಗಳಿಂದ ಪ್ರಕ್ಷುಬ್ಧವಾಗಿದೆ. 'ಭಗವಂತಾ, ನೀನು ದಯಾಮಯ! ಈ ಲೋಕದ ಎಲ್ಲ ಜೀವಿಗಳಿಗೂ ಒಳಿತು ಮಾಡು ' ಎಂದು ನಿರ್ಮಲ ಮನಸ್ಸಿನಿಂದ ಪ್ರಾರ್ಥಿಸುತ್ತಾನೆ.

ಹೀಗೆ ಅವರವರ ವಯ್ಯಸ್ಸು, ಹಿರಿತನ, ಚಿಂತನಾ ಮಟ್ಟಕ್ಕೆ ತಕ್ಕಂತೆ ಪ್ರಾರ್ಥನೆಯ ಹಿಂದೆ ವಿವಿಧ ಕಾರಣಗಳಿರುತ್ತವೆ. ವಿವಿಧ ಸಂದರ್ಭ ಸನ್ನಿವೇಶದಲ್ಲಿ ಎಲ್ಲ ಸ್ತರದ ಜನರೂ, ಒಂದಲ್ಲ ಒಂದು ಬಾರಿ, ತಾವು ಕಾಣದೇ ಇರುವ ಯಾವುದೋ ಒಂದು ಶಕ್ತಿಯನ್ನು ಕುರಿತು - 'ಕರುಣಾಳು ಬಾ ಬೆಳಕೆ.. ಮುಸುಕಿದೀ ಮಬ್ಬಿನಲಿ... ಕೈ ಹಿಡಿದು ನಡೆಸೆನ್ನನು' ಎಂದು ಮೊರೆಯಿಡುತ್ತಾರೆ.

ಪ್ರಾರ್ಥನೆ ಎಂದರೆ ಅದು ಹೃದಯದ ಕಾಯಕ, ಅಲ್ಲಿ ಬೌದ್ಧಿಕ ತರ್ಕಕ್ಕೆ ಸ್ಥಾನವಿಲ್ಲ. ಯಾವುದೋ ಒಂದು ಹಿರಿದಾದುದನ್ನು ಕುರಿತು

ವ್ಯಕ್ತಿಗಿರುವ ಶ್ರದ್ಧೆ, ನಂಬಿಕೆ, ಭರವಸೆಗಳೇ ಪ್ರಾರ್ಥನೆಯ ಹಿಂದಿರುವ ಪ್ರೇರಣೆ, ಪ್ರಾಮಾಣಿಕ ಪ್ರಾರ್ಥನೆ ಎಂದರೆ ಅದು ಮಾನವನ ಆತ್ಮಕ್ಕೆ ಲಭಿಸುವ ಶುದ್ಧ ಸ್ನಾನ ಎನ್ನುತ್ತಾರೆ ಮಹಾತ್ಮ ಗಾಂಧೀಜಿ.

ದಿನವೂ ಸ್ನಾನ ಮಾಡದಿದ್ದರೆ ಆರೋಗ್ಯ ಕೆಡುತ್ತದೆ. ಬಟ್ಟೆಯನ್ನು ಶುಚಿಗೊಳಿಸದಿದ್ದರೆ ವಾಸನೆ ಬರುತ್ತದೆ. ಹಾಗೆಯೇ ಹೃದಯವನ್ನು ಪ್ರಾರ್ಥನೆಯಿಂದ ತೊಳೆಯದಿದ್ದರೆ ಅದು ಬಹು ಬೇಗ ಕಲ್ಮಶದ ಗೂಡಾಗುತ್ತದೆ. ಪ್ರಾರ್ಥನೆಯ ಮೂಲಕ ವ್ಯಕ್ತಿ ತನ್ನ ಅಹಂಕಾರವನ್ನು ಕಳಚಿಕೊಂಡು ವಿನೀತನಾಗುತ್ತಾನೆ. ಶ್ರದ್ಧಾಪೂರ್ವಕವಾಗಿ ಮಾಡಿದ ಪ್ರಾರ್ಥನೆ ನಮ್ಮ ಸಂಕಲ್ಪ ಶಕ್ತಿಯನ್ನು ಚುರುಕು ಗೊಳಿಸುತ್ತದೆ. ಪ್ರಾರ್ಥನೆ ಎಂಬ ಅನ್ನವಿಲ್ಲದಿದ್ದರೆ ನಮ್ಮ ಆತ್ಮ ಸೊರಗುತ್ತದೆ. ವ್ಯಕ್ತಿತ್ವ ಮುರುಟಿಕೊಳ್ಳುತ್ತದೆ.

ಪ್ರಾರ್ಥನೆ ಎಂಬುದು ಸಿದ್ಧಿಸುತ್ತಾ ಹೋದಂತೆ ತಪಸ್ಸಾಗುತ್ತದೆ. ಆ ತಪಸ್ಸಿನಿಂದ ನಾವು ಸಮಗ್ರ ವಿಕಸನಗೊಳ್ಳುವುದು ಸಾಧ್ಯ. ವಿಕಾಸದ ಮಾರ್ಗದಲ್ಲಿ ಪ್ರಾರ್ಥನೆ ಎಂಬುದನ್ನು ನಮ್ಮ ನಿತ್ಯಮಂತ್ರವಾಗಿಸಿಕೊಳ್ಳೋಣ.

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**

**ಜೊತೆಗೆ " ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**


**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆಯನ್ನು ಮಾಡುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

ಬಾ
ಲ
ವಿ
ನೋ
ದ
ನಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....



ಮೇಲಿನ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....


ರ ದ ರು ಡ ತ್ತ ದು ದ ಡ್ಡ ಲ ತ್ತ ಅಂ ಗು

ಸ ಅಂ ಅ ನ ಊ ದೆ ಗು ಮು ಅಂ ಕ ರೆ ಅ ಗ ದೆ

ಅರಸು ಅಂದರೆ ಊರು ನಡಗುತ್ತದೆ, ಮುದುಕ ಅಂದರೆ ಗಡ್ಡ ಅಲಗುತ್ತದೆ.

ಉತ್ತರಗಳು:


## ದಾರಿ ತೋರಿಸಿ



ಯಾವ ದಾರಿಯಲ್ಲಿ ಹೋದರೆ ಶಿಷ್ಯನು ಗುರುವನ್ನು ಸೇರುತ್ತಾನೆ. ಮಕ್ಕಳೇ ಶಿಷ್ಯನಿಗೆ ದಾರಿಯನ್ನು ತೋರಿಸಿ.

# ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01. ಅಧಿಕ ಮಾಸದಲ್ಲಿ ವಿಶೇಷವಾಗಿ ಯಾವ ಪೂಜೆ ಮಾಡಬೇಕು? ..........................................................................
02. ವೇದದ ಮೂಲಕ ಭಗವಂತನ ಭಕ್ತನಾಗಲು ಆದೇಶವೇನು?.......................................... ...........................................
03. ನಮ್ಮ ವೇದೋಪನಿಷತ್ತುಗಳು ಗುರುವನ್ನು ಯಾರಿಗೆ ಹೋಲಿಸಿವೆ? ..........................................................................
04. ಏಕಲವ್ಯನನ್ನು ಗುರುದಕ್ಷಿಣೆಯಾಗಿ ಏನು ಬೇಕೆಂದು ಕೇಳಿದರು? ........................................................... ...........
05. ಶಾಪಗ್ರಸ್ಥಳಾದ ದೇವಕನ್ಯೆ ಯಾವ ರೂಪದಲ್ಲಿ ಬಂದಳು? .................... ..................................................
06. ಮಿಥಿಲೆಯ ರಾಜನ ಹೆಸರೇನು? .......................................................... ........................... ..............
07. ಶ್ರೀಲಕ್ಷ್ಮಿಚನ್ನಕೇಶವ ದೇವಾಲಯ ಎಲ್ಲಿದೆ? ........................................................... ....................................
08. ಅಚ್ಯುತರಾಯನ್ನು ಯಾವ ವರ್ಷದಲ್ಲಿ ಆಲಯಕ್ಕೆ ಬಂದನು? ........................................... ............................ ..........
09. ಸೂರ್ಯನು ಧನುಸ್‌ರಾಶಿಯಿಂದ ಮಕರರಾಶಿಯನ್ನು ಪ್ರವೇಶಿಸುವ ಕಾಲವನ್ನು ಏನೆಂದು ಕರೆಯುತ್ತಾರೆ? ............................... ......
10. ಪತಿಯ ದೀರ್ಘಾಯುಷ್ಯ ನೀಡಿದ ವ್ರತಕ್ಕೆ ಏನೆಂದು ಕರೆಯುತ್ತಾರೆ? .......................................................................
11. ವಾಯು ಎಲ್ಲೆಲ್ಲಿ ಹರಡಿದೆ? ...............................................................................................................
12. ರುದ್ರನ ಶರೀರದಲ್ಲಿ ಯಾರು ನೆಲಸಿದರು? ........................................................................................
13. ನೈವೇದ್ಯದಲ್ಲಿ ಏನಿಲ್ಲದೆ ಭಗವಂತನು ಸ್ವೀಕರಿಸುತ್ತಿದ್ದಾನೆ?.................................................. .........................
14. ವರಾಹ ದೇವರು ಆದಿಲಕ್ಷ್ಮಿಯನ್ನು ಎಲ್ಲಿ ಇರಿಸಿಕೊಂಡರು?.........................................................................
15. ದ್ರೋಣಾಚಾರ್ಯರ ಸ್ನೇಹಿತನ ಹೆಸರೇನು? ........................................... ..........................................

## ಸೂಚನೆಗಳು




1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.06.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**


**ಹೆಸರು :**
**ಚಂದಾ ಸಂಖ್ಯೆ :**
**ತಂದೆಯ ಹೆಸರು :**
**ತಾಯಿಯ ಹೆಸರು:**

**ವಿಳಾಸ :**

**ದೂರವಾಣಿ ಸಂಖ್ಯೆ:**

ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು





ಗುರುಶಿಷ್ಯರು, ಗೋದಾದೇವಿ, ಮಳೆಗಾಲ,ಗೋದಾದೇವಿಗೆ ಸಂಬಂಧಿಸಿದ ವಸ್ತುಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.


ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.




## ಚಿತ್ರಕಥೆ

# ಗುರುದಕ್ಷಿಣೆ

ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ




ಕಾಲಕ್ರಮದಲ್ಲಿ ಕುರುಪಾಂಡವರ ವಿದ್ಯಾಶಿಕ್ಷಣ ಮುಗಿಯಿತು
ನಮ್ಮನ್ನು ಇಂತಹ ವೀರರನ್ನಾಗಿ ಮಾಡಿದ ಗುರುದೇವಾ! ನಿಮಗೆ ಏನು ಗುರುದಕ್ಷಿಣೆ ನೀಡಬಹುದು?
ಗುರುದಕ್ಷಿಣೆಯಾಗಿ ದ್ರುಪದನನ್ನು ಹಿಡಿದು ತರಬೇಕು?
ಅರ್ಜುನನು ದ್ರುಪದನನ್ನು ಯುದ್ಧದಲ್ಲಿ ಸೋಲಿಸಿದ ನಂತರ ಅವನನ್ನು ತನ್ನ ರಥಕ್ಕೆ ಕಟ್ಟಿ ದ್ರೋಣಾಚಾರ್ಯರ ಬಳಿಗೆ ಕರೆತಂದನು.
ಗುರುದಕ್ಷಿಣೆಯನ್ನು ಸ್ವೀಕರಿಸಿ ಗುರುದೇವಾ!
ಈತನಾರು? ಈ ರತ್ನಾಭರಣಗಳು ಮತ್ತು ರೇಷ್ಮೆ ಬಟ್ಟೆಗಳನ್ನು ನೋಡಿದರೆ ಇವರು ದ್ರುಪದನಂತೆ ಕಾಣುತ್ತಾರೆ?
ಸ್ನೇಹಿತ! ದ್ರೋಣ! ನನ್ನನ್ನು ಕ್ಷಮಿಸು ....
ರಾಜ್ಯಾಧಿಕಾರದ ಅಹಂಕಾರ ಈಗಲಾದರೂ ಕಡಿಮೆಯಾಯಿತೇ ? ಎಲ್ಲಾ ದಿನಗಳು ನಮ್ಮದಲ್ಲ, ದ್ರುಪದ ! ನೆನಪಿಟ್ಟುಕೋ!
ಅರ್ಜುನ! ಈತನನ್ನು ಬಂಧನದಿಂದ ತೊಲಗಿಸು!
ಕುಮಾರಾ! ಅರ್ಜುನ! ಈ ದಿನಕ್ಕಾಗಿ ನಾನು ಹಗಲು ರಾತ್ರಿ ಕಾಯುತ್ತಿದ್ದೆ. ಇಂದು ನನ್ನ ಆಸೆ ಈಡೇರಿದೆ...
ವಿಜಯೋಸ್ತು ಚಿರಂಜೀವಿ! ಸ್ನೇಹದಲ್ಲಿ ಭಿನ್ನಾಭಿಪ್ರಾಯಗಲು ಇರಬಾರದೆಂದು ಇತಿಹಾಸದಲ್ಲಿಯೇ ಹೇಳಿಕೊಳ್ಳುವಂತೆ ಗುರುದಕ್ಷಿಣೆ ನೀಡಿರುವೆ. ನೀನು ಯಾವಾಗಲೂ ವಿಜಯಶಾಲಿಯಾಗಿರು!
ಶುಭಂ

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸು ವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿ ಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -“ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507”.

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



ತಿರುಮಲೆ ಕ್ಷೇತ್ರದಲ್ಲಿರುವ ಅಂಜನಾದ್ರಿ, ಆಕಾಶಗಂಗ ತೀರ್ಥ, ಜಾಪಾಲಿ, ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದ ಎದುರಿಗಿರುವ ಶ್ರೀ ಬೇಡಿ ಆಂಜನೇಯ ಸ್ವಾಮಿ ಆಲಯ, ತಿರುಮಲೆ ಮೊದಲ ಘಾಟ್ ರಸ್ತೆಯ 7 ನೇ ಮೈಲಿನ ಬಳಿಯಿರುವ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿಯವರಿಗೆ 2023, ಮೇ 14 ರಿಂದ 18 ರ ವರೆಗೆ ತಿ.ತಿ.ದೇ., ನಿರ್ವಹಿಸಿದ ಹನುಮಜಯಂತಿ ದೃಶ್ಯಮಾಲಿಕೆ.



ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀ ಕಂಚಿ ಕಾಮಕೋಟಿ ಪೀಠಾಧಿಪತಿ ಶ್ರೀ ಶ್ರೀ ಶ್ರೀ ವಿಜಯೇಂದ್ರ ಸರಸ್ವತಿ ಸ್ವಾಮಿಯವರು ಅನುಗ್ರಹ ಭಾಷಣ ಮಾಡಿದರು, ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ.ಎ.ವಿ.ಧರ್ಮಾರೆಡ್ಡಿ ಐ.ಡಿ.ಈ.ಎಸ್., ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.









SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-06-2023 and Posting at Tirupati RMS.Regd. with the Registrar of Newspapers for India underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month.

## ಆಂಡಾಳ್ ತಿರುವಾಡಿಪ್ಪೂರಂ ಶಾತ್ತುಮೊರೆ (22-08-2023)



ಕರ್ಕಟೆ ಪೂರ್ವಫಲ್ಗುನ್ಯಾಂ ತುಲಸಿಕಾನನೋದ್ಭವಾಮ್ ।
ಪಾಂಡ್ಯೈ ವಿಶ್ವಂಭರಾಂ ದೇವಿಂ ವಂದೇ ಶ್ರೀರಂಗನಾಯಕಿಮ್ ॥